WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೧೭, ೨೦೧೨ (ವೈಶಾಖ ೨೭, ಶಕ ವರ್ಷ ೧೯೩೪)	ಸಂಚಿಕೆ ೨೦

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

INFRASTRUCTURE DEVELOPMENT SECRETARIAT

Sub: Release of funds to Karnataka State Industrial and Infrastructure Development Corporation towards Guarantee Commission payable to Government in respect of Rs. 150.00 crores loan availed by Karnataka State Industrial and Infrastructure Development Corporation for procuring land for Bangalore International Airport Project – for the years 2009-10, 2010-11 & 2011-12.

Read:

1. Government Order No. IDD 47 DIA 06, dated 27.03.2007
2. Government Order No. IDD 47 DIA 06 (P), dated 25.09.2007
3. Government Order No. IDD 47 DIA 06, dated 07.09.2009
4. Government Order No.IDD 33 DIA 2010, dated 17.01.2011.
5. Letters No. DGM (IPD-I) /2447/2011-12 & No. DGM (IPD-I)/ 2461/ 2011-12 dated: 27.01.2012 received from the Deputy General Manager, Karnataka State Industrial and Infrastructure Development Corporation, Bangalore.
6. Government Order No. FD 357 BRS 2011, dated 13.03.2012.

Preamble:

In the Government Order dated 27.03.2007 read at Sl.No.(1) above, while releasing funds (Loan Installment) for the quarter ending 31.03.2007, Government had made an observation that at no point of time Government had approved inclusion of service charges for servicing the debt by Karnataka State Industrial and Infrastructure Development Corporation, Bangalore, on behalf of the State Government.

2. In the Government Order dated 25.9.2007 read at Sl.No. (2) above, Government accorded sanction for release of Rs.41.43 lakhs claimed by KSIIDC as service charge for servicing the HUDCO loan obtained for Bangalore International Airport Project on behalf of the Government of Karnataka, with condition that the same shall be adjusted towards Guarantee Commission payable by Karnataka State Industrial and Infrastructure Development Corporation, Bangalore, for availing the loan facility on State Government Guarantee; to the Head of Account 0075-00-108-0-01-Guarantee Fees without any cash outgo in this regard.

3. In the Government Order dated 07.09.2009 read at Sl.No. (3) above, Government has sanctioned Rs. 83.37 lakhs to Karnataka State Industrial and Infrastructure Development Corporation, Bangalore, towards service charges on HUDCO loan for the financial years 2007-08 and 2008-09 through book adjustment with the following conditions.

"The outstanding Guarantee Commission with Karnataka State Industrial and Infrastructure Development Corporation, Bangalore, as on 31.3.2009 is Rs.24.37 crore out of this,

(a) Expenditure of Rs.83.37 lakhs of service charges on HUDCO loan for the financial year 2007-08 and 2008-09 is released from the Head of Account 5465-01-190-1-04-240 – Assistance to BIAP – Assistance for repayment of HUDCO loan where a provision of Rs.25.99 crore is made during 2009-10. This expenditure is to be adjusted by crediting it to the Head of Account "0075-00-108-0-01-Guarantee Fees".

(b) By this the total guarantee commission payable by Karnataka State Industrial and Infrastructure Development Corporation, Bangalore, as on 31.3.2009 on loans other than HUDCO loan of Rs.15.79 crore would be reduced to the extent of RS.83.37 lakhs and Rs.14.96 crore would still have to be remitted by Karnataka State Industrial and Infrastructure Development Corporation, Bangalore, in cash.

(c) Karnataka State Industrial and Infrastructure Development Corporation, Bangalore, should work out a calender for making this payment of guarantee commission on its other loans over the next one year and submit to Govt., in F.D and

(d) An amount of Rs.8.58 crore Guarantee Commission for the HUDCO loan obtained for BIA project by Karnataka State Industrial and Infrastructure Development Corporation, Bangalore, on behalf of Government of Karnataka is to be paid through book adjustment already factored in the budget for the year 2009-10, under the Head of Account 5465-01-190-1-104-240- Assistance to BIAP – Assistance for repayment of HUDCO Loan. There is no cash outgo in this regard. **"**

4. In Government Order dated 17.01.2011 read at Sl. No.(4) above, Government accorded sanction for release of Rs. 61.43 lakhs (Rupees sixty one lakh forty three thousands only) as service charges for the service rendered by Karnataka State Industrial and Infrastructure Development Corporation, Bangalore, for HUDCO loan debt servicing for the years 2009-10 & 2010-11.

5. In letters dated 23.01.2012 & 27.01.2012 read at Sl. No. (5) above, the Deputy General Manager (IPD-1), Karnataka State Industrial and Infrastructure Development Corporation, Bangalore,, Bangalore has sent a proposal for release of Rs. 164.87 lakhs towards Guarantee Commission charges payable for 2009-10, 2010-11 and 2011-12 (i.e. Rs.120.87 lakhs for the year 2009-10 & 2010-11 and Rs.44.00 lakhs for the year 2011-12) in the current financial year and this could be adjusted by crediting to the Head of Account ***"0075-00-108-0-01-Guarantee fees"*** payable by Karnataka State Industrial and Infrastructure Development Corporation, Bangalore, to Government.

6. In Government Order read at Sl.No. (6) above, FD has issued a re-appropriation order for Rs.164.87 lakhs from the Head of Account "5465-01-190-2-05-(P) Alternate Roads – 211 Investment to the Head of Account 5465-01-190-1-04 (plan) BIAP Assistance for repayment of HUDCO loan – 240 Debt servicing.

7. Government have considered the proposal of Karnataka State Industrial and Infrastructure Development Corporation, Bangalore, for release of funds towards Guarantee Commission payable by Karnataka State Industrial and Infrastructure Development Corporation, Bangalore, to Government and hence the following order.

GOVERNMENT ORDER NO.IDD 33 DIA 2010, BANGALORE DATED: 30.03.2012.

After careful examination of the proposal, sanction of the Government is hereby accorded for release of Rs. 164.87 lakhs (Rupees one crore sixty four lakhs eighty seven thousand only) to Karnataka State Industrial and Infrastructure Development Corporation, Bangalore, towards Guarantee Commission payable by Karnataka State Industrial and Infrastructure Development Corporation, Bangalore, to Government availing HUDCO loan under the Head of Account ***"5465-01-190-1-04-(P) BIAP Assistance for repayment of HUDCO loan – 240 Debt servicing"*** for the year 2011-12***.***

2. This release is by way of book adjustment not involving any outgo of cash by debiting the said amount to the Head of Account "***5465-01-190-1-04 (Plan)-240 Debt Servicing"*** and contra credit to the Head of Account "***0075-00-108-0-01-Guarantee Fees"***.

3) The Principal Accountant General (A & E), Karnataka, Bangalore is requested to carryout necessary adjustment as indicated above in the books of accounts.

4) This order is issued with concurrence of Finance Department vide, Note No.FD 220 Exp-I/12 dated 15.03.2012.

By order and in the name of the Governor of Karnataka

S. J. SAMPATH KUMAR

Under Secretary to Government,

Infrastructure Development Department

P.R. 1190

INFRASTRUCTURE DEVELOPMENT SECRETARIAT

Sub: Release of funds to Karnataka State Industrial and Infrastructure Development Corporation towards Service Charges payable for the HUDCO Loan servicing for the year 2011-12.

Read:
1. G.O. No. IDD 47 DIA 06, dated 27.03.2007
2. G.O. No. IDD 47 DIA 06 (P), dated 25.09.2007
3. G.O. No. IDD 47 DIA 06, dated 07.09.2009.
4. G.O. No. IDD 33 DIA 2010, dated 17.01.2011.
5. Letter No. DGM (IPD-I)/ 2690/ 2011-12, dated 16.02.2012.
6. G.O. No.IDD 33 DIA 2010, dated 30.03.2012.

Preamble:

In G.O. dated 27.03.2007 read at Sl.No.(1) above, while releasing funds (Loan Installment) for the quarter ending 31.03.2007, Government had made an observation that at no point of time Government had approved inclusion of service charges for servicing the debt by Karnataka State Industrial and Infrastructure Development Corporation, Bangalore on behalf of the State Government.

2. In G.O. dated 25.9.2007 read at Sl.No. (2) above, Government accorded sanction for release of Rs.41.43 lakhs claimed by Karnataka State Industrial and Infrastructure Development Corporation, Bangalore as service charge for servicing the HUDCO loan obtained for Bangalore International Airport Project on behalf of the Government of Karnataka, with condition that the same shall be adjusted towards Guarantee Commission payable by Karnataka State Industrial and Infrastructure Development Corporation, Bangalore for availing the loan facility on State Government Guarantee; to the Head of Account 0075-00-108-0-01-Guarantee Fees without any cash outgo in this regard.

3. In the G.O. dated 07.09.2009 read at Sl.No. (3) above, Government has sanctioned Rs. 83.37 lakhs to Karnataka State Industrial and Infrastructure Development Corporation, Bangalore towards service charges on HUDCO loan for the financial years 2007-08 and 2008-09 through book adjustment.

4. In G.O. dated 17.01.2011 read at Sl. No.(4) above, Government accorded sanction for release of Rs. 61.43 lakhs (Rupees sixty one lakh forty three thousands only) as service charges for the service rendered by Karnataka State Industrial and Infrastructure Development Corporation, Bangalore for HUDCO loan debt servicing for the years 2009-10 & 2010-11.

5. In letter 16.02.2012 read at Sl. No. (5) above, the Deputy General Manager (IPD-1), KSIIDC, Bangalore has sent a proposal for release of Rs. 22.62 lakhs towards Service Charges payable to Karnataka State Industrial and Infrastructure Development Corporation, Bangalore for servicing HUDCO Loan for the current year 2011-12 and this could be adjusted by crediting to the Head of Account ***"0075-00-108-0-01-Guarantee fees"*** payable by Karnataka State Industrial and Infrastructure Development Corporation, Bangalore to Government.

6. Finance Department, vide No. FD 220 Exp-1/2012, dated 28.03.2012, has concurred to re-appropriate the said amount. Accordingly, in the G.O read at (6) above, sanction has been accorded for the re-appropriation of a sum of Rs.22.62 lakhs (Rupees Twenty Two lakhs Sixty Two thousand only) under the major Head of Account 5465 - capital outlay on General Financial and trading institutions during 2011-12.

7. Government have considered the proposal of Karnataka State Industrial and Infrastructure Development Corporation, Bangalore for release of funds towards Service Charges payable to Karnataka State Industrial and Infrastructure Development Corporation, Bangalore for servicing HUDCO Loan and hence the following order.

GOVERNMENT ORDER NO.IDD 33 DIA 2010, BANGALORE DATED: 30.03.2012.

After careful examination of the proposal, sanction is accorded for release of Rs. 22.62 lakhs (Rupees twenty two lakhs sixty two thousand only) as service charges for the service rendered by Karnataka State Industrial and Infrastructure Development Corporation, Bangalore for HUDCO Loan debt servicing for the year 2011-12 under the Head of Account "***5465-01-190-1-04 (Plan)-240 Debt Servicing"*** through re-appropriation from the Head of Account "***5465-01-190-2-07-051- Development of 408 acres of Govt. land adjacent to BIAP".***

2. This release is by way of book adjustment not involving any outgo of cash by debiting the said amount to the Head of Account "***5465-01-190-1-04 (Plan)-240 Debt Servicing"*** and contra credit to the Head of Account "***0075-00-108-0-01-Guarantee Fees"***.

3) The Principal Accountant General (A & E), Karnataka, Bangalore is requested to carryout necessary adjustments as indicated above in the books of accounts.

4) This order is issued with concurrence of Finance Department vide, Note No. FD 220 Exp-I/ 12 dated 28.03.2012.

By order and in the name of the Governor of Karnataka,

S. J. SAMPATH KUMAR

Under Secretary to Government,

P.R. 1192 Infrastructure Development Department.

INFRASTRUCTURE DEVELOPMENT SECRETARIAT

Sub: Re-appropriation of funds during 2011-12 under the Major Head of Account 5465 - Capital outlay on General Financial and Trading Institutions Grant No. 6 reg.

Read: 1. Note No. FD 220 Exp-I/2012 dated 28.03.2012.

2. G.O. No. FD 11 TFP 2007, dated: 27.11.2007.

Preamble:

Finance Department was requested to re-appropriate funds to the extent of Rs.22.62 lakhs from the savings available under Head of Account "***5465-01-190-2-07-051- Development of 408 acres of Govt. land adjacent to BIAP"*** to the Head of Account "***5465-01-190-1-04 (Plan)-240 Debt Servicing (Plan)"*** towards service charges for the service rendered by Karnataka State Industrial and Infrastructure Development Corporation, Bangalore for HUDCO Loan debt servicing for the year 2011-12 as the required amount was not available under Debt Servicing Head.

Finance Department had concurred for re-appropriation vide note read at Sl. No.(1) above, hence the following order.

GOVERNMENT ORDER NO. IDD 33 DIA 2010, BANGALORE, DATED: 30.03.2012.

Sanction is accorded for the re-appropriation of a sum of Rs.22.62 lakhs (Rupees Twenty Two lakhs and Sixty Two Thousand only) under the Major Head of Account 5465 -Capital outlay on general financial and trading institutions during 2011-12, as per the statement appended to this order.

This order is issued in accordance with Financial powers delegated to the Administrative Departments vide G.O. No. FD 11 TFP 2007, dated: 27-11-2007.

By Order and in the name of Governor of Karnataka,

S. J. SAMPATH KUMAR

Under Secretary to Government,

Infrastructure Development Department

G.O. No. IDD 33 DIA 2010 , Bangalore, dated:30.03.2012 **G.O. No. FD 11 TFP 2007, 27-11-2007**

Re-Appropriation statement to accompany all applications for sanction to expenditure not provided for in the Budget or for additional allotments.

Grant No. 6 **(Rs. In lakhs)**

Major, Minor sub & Detailed Heads of Budget (The same details must be given as in the printed Budget Estimate).	Heads of Estimate proposed to be increased			Amount of Addl. Allotment required 2011-12.	Heads of Estimate Proposed to be reduced			Amount available for re-appropria-tion 2011-12	Remarks (Here state fully the reasons for exceeding the allot. And for anticipating savings.
	Amount as in the sanctioned Budget Estimate 2011-12	Actual Expendi-ture up-to-date	Probable Expenditure during remainder of the year 2011-12		Amount as in the sanctioned Budget Estimate 2011-12	Actual Expendi-ture up-to-date	Probable Expenditure during remainder of the year 2011-12		
5465-01-190-1-04-240 BIAP-Assistance for repayment of HUDCO loan	1463.00	1463.00	22.62	22.62					The fund is required for the payment of service charges to KSIIDC for servicing HUDCO Loan for the year 2011-12.
Total	**1463.00**	**1463.00**	**22.62**	**22.62**					
5465-01-190-2-07-051 Development of 408 acres of Govt. land adjacent to BIAP					100.00	61.08	38.92	22.62	As no proposal has been received for further release , anticipated savings is proposed for re-appropria-tion
Total					**100.00**	**61.08**	**38.92**	**22.62**	

S. J. SAMPATH KUMAR
Under Secretary to Government,
Infrastructure Development Department

P.R. 1191

ಇಂಧನ ಸಚಿವಾಲಯ

ವಿಷಯ: ಮೆ:: ಇಂಡೊವಿಂಡ್ ಎನರ್ಜಿ ಲಿಮಿಟೆಡ್ 9.0 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಣೆ ಕುರಿತು.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ:ಇಎನ್ 133 ಎನ್‌ಸಿಇ 1997 (4) ದಿನಾಂಕ:20.4.1998
2. ಸರ್ಕಾರಿ ಆದೇಶ ಸಂಖ್ಯೆ:ಇಎನ್ 190 ಎನ್‌ಸಿಇ 2006 ದಿನಾಂಕ:25.7.2006.
3. ಸರ್ಕಾರಿ ಆದೇಶ ಸಂಖ್ಯೆ:ಇಎನ್ 457 ಎನ್‌ಸಿಇ 2008 ದಿನಾಂಕ:16.9.2009
4. ಸರ್ಕಾರಿ ಆದೇಶ ಸಂಖ್ಯೆ:ಇಎನ್ 371 ಎನ್‌ಸಿಇ 2010 ದಿನಾಂಕ:10.1.2011.
5. ಸರ್ಕಾರಿ ಆದೇಶ ಸಂಖ್ಯೆ: ಇಎನ್ 325 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11.11.2011
6. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/IWEL–9 MW/2012/390 ದಿನಾಂಕ: 01/03.2.2012.

ಪ್ರಸ್ತಾವನೆ :–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ : Devlina power private Limited ರವರಿಗೆ ಚಿತ್ರದುರ್ಗ ಜಿಲ್ಲೆಯ ಪಲವನಹಳ್ಳಿ, ಜೋಗಿಮಟ್ಟ ವಲಯ ಎಂಬಲ್ಲಿ 8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಯೋಜನೆಯ ಸಾಮರ್ಥ್ಯವನ್ನು 8 ಮೆ.ವ್ಯಾ. ನಿಂದ 9 ಮೆ.ವ್ಯಾಗೆ ಹೆಚ್ಚಿಸಿ ಸದರಿ ಯೀಜನೆಯನ್ನು ಮೆ : ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಯೋಜನೆಯ ಹಂಚಿಕೆ ಆದೇಶದ ರದ್ದತಿಯನ್ನು ಹಿಂಪಡೆದು, ಯೋಜನೆಯನ್ನು ದಿನಾಂಕ : 31.03.2011ರೊಳಗಾಗಿ ಅನುಷ್ಠಾನಗೊಳಿಸಬೇಕೆಂಬ ಷರತ್ತಿಗೊಳಪಟ್ಟ ಪೂರ್ವಸ್ಥಿತಿಗೆ ತರಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಆದೇಶದಲ್ಲಿ ಮೆ : ಇಂಡೊವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ ಮೇಲ್ಕಂಡ 9 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 01.4.2011 ರಿಂದ 31.3.2012 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ : ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರು ಯೋಜನೆಗೆ ಅವಶ್ಯವಿರುವ ಖಾಸಗಿ ಜಮೀನನ್ನು ಖರೀದಿಸಿರುವುದಾಗಿ, ವಿದ್ಯುತ್ ಘಟಕಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಸಂಬಂಧಪಟ್ಟ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆಂದು ಈಗಾಗಲೇ ನೀಡಿರುವ ಕಾಲಾವಕಾಶದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾದ್ಯವಾಗದ ಕಾರಣ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ 31.3.2013 ರವರೆಗೆ ವಿಸ್ತರಸುವಂತೆ ಕೋರಿರುವುದನ್ನು ಪರಿಶೀಲಿಸಿ ಅಭಿವೃದ್ಧಿದಾರರ ಕೋರಿಕೆಯನ್ನು ₹ 9.00 ಲಕ್ಷಗಳ ಕಾಲಾವಕಾಶ ವಿಸ್ತರಣಾ ಶುಲ್ಕ ಮತ್ತು ಪ್ರತಿ ಮೆಗಾ ವ್ಯಾಟ್‌ಗೆ ₹ 1.00 ಲಕ್ಷಗಳ ನೆರವೇರಿಕೆ ಖಾತರಿ (Performance Guarantee) ನೀಡತಕ್ಕದ್ದೆಂಬ ಷರತ್ತಿಗೊಳಪಟ್ಟು ಕೊನೆಯ ಬಾರಿಗೆ ದಿನಾಂಕ 31.3.2013 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರದ ಆದೇಶ ಸಂಖ್ಯೆ: ಇಎನ್ 325 ಎನ್‌ಸಿಇ 2011, ಬೆಂಗಳೂರು, ದಿನಾಂಕ: 09.04.2012.

ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರಿಗೆ ಚಿತ್ರದುರ್ಗ ಜಿಲ್ಲೆಯ ಪಲವನಹಳ್ಳಿ, ಜೋಗಿಮಟ್ಟ ವಲಯದಲ್ಲಿ ಹಂಚಿಕೆ ಮಾಡಿರುವ **9.0 ಮೆ.ವ್ಯಾ.** ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಅಂತಿಮವಾಗಿ ಕಾಲಾವಕಾಶವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು **ದಿನಾಂಕ 30.9.2012** ರವರೆಗೆ ವಿಸ್ತರಿಸಿ ಆದೇಶಿಸಿದೆ.

1. ಮೆ:: ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರು ಈ ಕಾಲವಾಕಾಶ ವಿಸ್ತರಣೆಗಾಗಿ ₹ 9.00 ಲಕ್ಷಗಳ ಕಾಲಾವಕಾಶ ವಿಸ್ತರಣಾ ಶುಲ್ಕ ಮತ್ತು ಪ್ರತಿ ಮೆಗಾ ವ್ಯಾಟ್‌ಗೆ ₹ 1.00 ಲಕ್ಷಗಳ ನೆರವೇರಿಕೆ ಖಾತರಿ (Performance Guarantee) ಯನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ನೀಡತಕ್ಕದ್ದು.

2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಮೆ:: ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರಿಂದ **ಮುಂದೆ ಯಾವುದೇ ಕಾರಣಕ್ಕೂ ಕಾಲಾವಕಾಶಕಾಶವನ್ನು ಕೋರುವುದಿಲ್ಲ ಎಂದು ಬದ್ಧತೆ ಪತ್ರ (committment letter) ಪಡೆಯತಕ್ಕದ್ದು**.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೌಸಲ್ಯಾ
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1188

KARNATAKA GOVERNOR'S SECRETARIAT

SUB: Removal of Dr. Challaiah from membership of Board of Management of University of Agricultural Sciences, Raichur.

READ:

1) Notification No.GS 8 AUM 2009 dated 20.05.2010
2) Corrigendum No.GS 3 AUR 2010 dated 11.06.2010
3) Letter No.VC/UASR/3645/2011-12 dated 7.1.2012 From the Vice-Chancellor, University of Agricultural Sciences, Raichur.
4) Notice No.GS 36 GUM 2011 dated 28.02.2012
5) Letter dated 17.03.2012 of Dr. Challaiah, Bangalore, Member, Board of Management, UAS, Raichur.

PREAMBLE:-

In Notification dated 20.05.2010 read at (1), Dr. Challaiah, was appointed by the Chancellor as Member of Board of Management, University of Agricultural Sciences, Raichur, under the category of the eminent educationist by invoking Section 12 (2) (ix) of University of Agricultural Sciences Act, 2009 and a corrigendum dated 11.06.2010 read at (2), was also issued in this behalf.

In the letter dated 07.01.2012, read at (3), the Vice-Chancellor, University of Agricultural Sciences, Raichur, reported that the Member on the Board of Management, Dr. Challaiah, a nominee of the Chancellor, submitted false T.A. claims by claiming taxi fare between Bangalore and Raichur while he actually performed the journey by train between Bangalore and Raichur. It was also reported that the confirmation had been obtained from the South Central Railway that Dr. Challaiah had actually performed train journey on the relevant dates by II Class sleeper coach.

A notice dated 28.02.2012, read at (4), was issued to Dr. Challaiah seeking his explanation in the matter. In his letter dated 17.03.2012, read at (5), he has accepted that he has claimed excess Travelling Allowance and has tendered apology for the same.

Now, therefore, His Excellency the Chancellor is of the opinion that his continuation as the Member of BOM, UAS, Raichur is not in the best interest of the University. Hence this order.

ORDER NO.GS 36 GUM 2011, BANGALORE, DATED 3RD APRIL 2012.

In exercise of powers conferred on me by Section 12 (3) of the University of Agricultural Sciences Act, 2009, read with Section 16 of the Karnataka General Clauses Act, 1899, I, H.R. BHARDWAJ, the Governor of Karnataka and Chancellor of Universities, hereby order removal of Dr. Challaiah from membership of the Board of Management, University of Agricultural Sciences, Raichur, with immediate effect, by withdrawing the pleasure of the Chancellor.

H.R. BHARDWAJ
GOVERNOR OF KARNATAKA
& CHANCELLOR OF UNIVERSITIES

V.S. JERE
Under Secretary to Governor

P.R. 1193

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀ ಬಸವರಾಜು ವಿ.ವರವಟ್ಟೆ, ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ಅಮಾನತ್ತನ್ನು ಇಲಾಖಾ ವಿಚಾರಣೆ ಬಾಕಿಯಿರಿಸಿ ತೆರವುಗೊಳಿಸಿ ಸರ್ಕಾರಿ ಸೇವೆಗೆ ಪುನರ್ ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಮಮಇ 424 ಎಸ್‌ಜೆಡಿ 2011 ದಿ:18–10–2011
2. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಜಿ/ಸಿಆರ್–9/2011, ಬೀದರ್ ದಿನಾಂಕ : 19–1–2012

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ:18–10–2011 ರ ಸರ್ಕಾರದ ಆದೇಶದನ್ವಯ ಶ್ರೀ ಬಸವರಾಜು ವಿ.ವರವಟ್ಟೆ ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರು ತಮ್ಮ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲಾರ್ಹ ಮಾಹಿತಿ ಆಧಾರದ ಮೇಲೆ ಬೀದರ್ ಕರ್ನಾಟಕ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:9/2011 ಕಲಂ 13(1)(ಇ) ಸಹವಚನ 13(2) ಶಿಷ್ಟಾಚಾರ ನಿರೋಧ ಕಾಯ್ದೆ 1988 ರನ್ವಯ ದಿ:21–07–2011 ರಂದು ಪ್ರಕರಣವನ್ನು ದಾಖಲಿಸಿಕೊಂಡು ದಿ:22–07–2011 ರಂದು ಅಧಿಕಾರಿ ವಾಸಿಸುತ್ತಿದ್ದ ಮನೆಗೆ ಶೋಧಿಸಲು ದಾಳಿ ಮಾಡಲ್ಪಟ್ಟಾಗ ಸ್ಥಿರಾಸ್ತಿಗಳ ಒಟ್ಟು ರೂ.76,29,441 ಗಳ ಮೊತ್ತದ ಆಸ್ತಿ ಹೊಂದಿರುವುದು ಪತ್ತೆಯಾಗಿರುತ್ತದೆ ಎಂದು ಮತ್ತು ಪ್ರಾಥಮಿಕ ತನಿಖೆಯಿಂದ ಅಧಿಕಾರಿಯ ಗೊತ್ತಾದ ಆದಾಯಕ್ಕಿಂತ ಹೆಚ್ಚಾಗಿ ಹೊಂದಿರುವ ಅಕ್ರಮ ಆಸ್ತಿಗಳ ಮೌಲ್ಯ ಒಟ್ಟು ರೂ.58,29,441/– ಆಗಿರುತ್ತದೆ ಎಂದು, ಅಂದರೆ, ಶೇ.253.45% ರಷ್ಟು ಹೆಚ್ಚಿನ ಅಕ್ರಮ ಆಸ್ತಿ ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಸದರಿ ಅಧಿಕಾರಿಯನ್ನು ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಅವರ ಲೀನ್ (ಸ್ಥಾನ) ಬೇರೆಕಡೆಗೆ ವರ್ಗಾಯಿಸುವಂತೆ ಶಿಫಾರಸ್ಸಿಸಿದ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ವರದಿಯನ್ನು ಅಂಗೀಕರಿಸಿ ಕರ್ನಾಟಕ, ನಾಗರಿಕ ಸೇವಾ (ಸಿಸಿಎ) ನಿಯಮಾವಳಿ 1957 ರ ನಿಯಮ 10(1)(ಎ) ರನ್ವಯ ಇಲಾಖಾ ವಿಚಾರಣೆ ಬಾಕಿಯಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಲೀನ್ (ಸ್ಥಾನ) ನ್ನು ಬೀದರ್‌ನಲ್ಲಿ ಖಾಲಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ವರ್ಗಾಯಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿ:19–01–2012 ರ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ವರದಿಯಲ್ಲಿ ಆಪಾದಿತರಾದ ಶ್ರೀ ಬಸವರಾಜು ವಿ.ವರವಟ್ಟೆ, ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರ ಮೇಲಿನ ಲೋಕಾಯುಕ್ತ ಪ್ರಕರಣದಲ್ಲಿ ತನ್ನನ್ನು ಅಮಾನತ್ತಿನಿಂದ ತೆರವುಗೊಳಿಸುವಂತೆ ಸಲ್ಲಿಸಿದ ಮನವಿಯ ಆಧಾರದ ಮೇಲೆ ಸದರಿ ಆಪಾದಿತರನ್ನು ಅಮಾನತ್ತಿನಿಂದ ತೆರವುಗೊಳಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಸೂಕ್ತವೆನಿಸುವ ಕ್ರಮ ತೆಗೆದುಕೊಳ್ಳಬಹುದಾಗಿದೆಯೆಂದು ತಿಳಿಸಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ. ಶ್ರೀ ಬಸವರಾಜ ವಿ.ವರವಟ್ಟೆ, ನಿರೂಪಣಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರು ತಮ್ಮ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಈ ಅಧಿಕಾರಿಯನ್ನು ಸರ್ಕಾರದ ಆದೇಶ ಸಂಖ್ಯೆ:ಮಮಇ 424 ಎಸ್‌ಜೆಡಿ 2011 ದಿ:18–10–2011 ರಂದು ಅಮಾನತ್ತುಗೊಳಿಸಿ ಆದೇಶಿಸಲಾಗಿದ್ದು, ಸದರಿ ಆರೋಪಿತರ ಅಮಾನತ್ತು ಅವಧಿಯು ಸುಮಾರು 5 ತಿಂಗಳು ಕಳೆದಿರುವುದರಿಂದ ಇವರ ಅಮಾನತ್ತನ್ನು ಇಲಾಖಾ ವಿಚಾರಣೆ ಬಾಕಿಯಿರಿಸಿ ತೆರವುಗೊಳಿಸಿ ಸರ್ಕಾರಿ ಸೇವೆಗೆ ಪುನರ್ ಸ್ಥಾಪಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ 424 ಎಸ್‌ಜೆಡಿ 2011, ಬೆಂಗಳೂರು ದಿನಾಂಕ:31–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಸವರಾಜು ವಿ.ವರವಟ್ಟೆ, ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್(ಪ್ರಸ್ತುತ ಅಮಾನತ್ತು), ಇವರನ್ನು ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957 ರ ನಿಯಮ 10(5)(ಸಿ) ರನ್ವಯ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಬೀದರ್ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಯಾಗಿ ಸೇವೆಗೆ ಪುನರ್ ಸ್ಥಾಪಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 1194

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ :– ವರ್ಗಾವಣೆ ನಿಯಮಗಳಡಿ ಕಡ್ಡಾಯ ಗ್ರಾಮೀಣ ಸೇವೆಯನ್ನು ಜಾರಿಗೊಳಿಸುವಾಗ ಗುತ್ತಿಗೆ ಸೇವಾವಧಿಯ ಗ್ರಾಮೀಣ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಬಗ್ಗೆ.

ಓದಲಾಗಿದೆ :–

1. ದಿನಾಂಕ 24–11–2011 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘದ ಬೇಡಿಕೆಗಳ ಬಗ್ಗೆ ತೆಗೆದುಕೊಂಡ ತೀರ್ಮಾನ
2. ಸರ್ಕಾರಿ ಆದೇಶ ಸಂಖ್ಯೆ: ಆಕುಕ 564 ಹೆಚ್‌ಎಸ್‌ಹೆಚ್ 2011, ದಿನಾಂಕ: 02–12–2011
3. ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘದ ಬೇಡಿಕೆಗಳ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮಿತಿಯು ನೀಡಿರುವ ವರದಿ.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಸರ್ಕಾರದ ಮುಂದೆ ಮಂಡಿಸಿದ್ದ ಕೆಲವು ಬೇಡಿಕೆಗಳ ಕುರಿತು ಸದರಿ ಸಂಘದ ಪದಾಧಿಕಾರಿಗಳು ಹಾಗು ಇಲಾಖಾ ಅಧಿಕಾರಿಗಳ ಜೊತೆ ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಮೇಲೆ (1) ರಲ್ಲಿ ಓದಲಾದ ದಿನಾಂಕ: 24–11–2011 ರಂದು ನಡೆದ ಸಭೆಯಲ್ಲಿ ಮೂರು ಬೇಡಿಕೆಗಳ ಕುರಿತು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಗಿತ್ತು. ಈ ಸಮಿತಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ, ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಸದಸ್ಯರಾಗಿ ಹಾಗು ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರನ್ನು ಸದಸ್ಯ–ಕಾರ್ಯದರ್ಶಿಯಾಗಿ ನೇಮಿಸಿ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 02–12–2011 ರಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು, ಇನ್ನಿತರೆ ಬೇಡಿಕೆಗಳಿಗೆ ಸಂಬಂಧಿಸಿದಂತೆ ಹಾಗು ವರ್ಗಾವಣೆ ನಿಯಮಗಳಡಿ ಕಡ್ಡಾಯ ಗ್ರಾಮೀಣ ಸೇವೆಯನ್ನು ಜಾರಿಗೊಳಿಸುವಾಗ ಗುತ್ತಿಗೆ ಸೇವಾವಧಿಯ ಗ್ರಾಮೀಣ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಕುರಿತ ಬೇಡಿಕೆಯ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ.

ಸದರಿ ಸಮಿತಿಯು ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ವರ್ಗಾವಣೆ ನಿಯಮಗಳಡಿ ಕಡ್ಡಾಯ ಗ್ರಾಮೀಣ ಸೇವೆಯನ್ನು ಜಾರಿಗೊಳಿಸುವಾಗ ಗುತ್ತಿಗೆ ಸೇವಾವಧಿಯ ಗ್ರಾಮೀಣ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಕುರಿತ ಬೇಡಿಕೆಯ ಬಗ್ಗೆ ತನ್ನ ವರದಿಯಲ್ಲಿ ಕೆಳಕಂಡಂತೆ ಶಿಫಾರಸ್ಸು ಮಾಡಿದೆ:

> "ಮೂಲತ: ಗುತ್ತಿಗೆ ವೈದ್ಯಾಧಿಕಾರಿಗಳಾಗಿ ಅನೇಕ ವರ್ಷಗಳ ಕಾಲ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿದ ನಂತರ, ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಸದರಿ ಸಕ್ರಮಾತಿಯ ನಿಕಟಪೂರ್ವದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಲ್ಲಿಸಿರುವ ಗುತ್ತಿಗೆ ಸೇವಾವಧಿಯನ್ನು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೇ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ನಿಯಮಗಳು, 2011 ರ ನಿಯಮ 4 ರಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವೆಗೆ ಸಂಬಂಧಿಸಿದಂತೆ ಪರಿಗಣಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತಾತ್ವಿಕವಾಗಿ (in principle) ಪರಿಗಣಿಸಬಹುದಾಗಿದೆ. ಸದರಿ ಸೇವೆಯನ್ನು ಪರಿಗಣಿಸುವಾಗ ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಇಲಾಖೆಯೇ ಸೂಕ್ತವಾಗಿ ನಿರ್ಣಯಿಸಿ ಸಂಬಂಧಪಟ್ಟ ನಿಯಮಗಳಿಗೆ ತಿದ್ದುಪಡಿಯನ್ನು ತರುವುದು."

ಸರ್ಕಾರವು ಸದರಿ ಸಮಿತಿಯ ಮೇಲ್ಕಂಡ ಶಿಫಾರಸ್ಸನ್ನು ಅಂಗೀಕರಿಸಿದೆ.

ಮೂಲತ: ಗುತ್ತಿಗೆ ವೈದ್ಯಾಧಿಕಾರಿಗಳಾಗಿ ನೇಮಕಗೊಂಡ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ವಿವಿಧ ವಿಶೇಷ ನಿಯಮಗಳಡಿಯಲ್ಲಿ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳ್ಳಿಸಲಾಗಿದೆ. ಈ ವಿಶೇಷ ನಿಯಮಗಳ ಪ್ರಕಾರ, ಸದರಿ ವೈದ್ಯರು ಸಕ್ರಮಾತಿಗೊಂಡ ನಂತರ 6 ವರ್ಷಗಳ ಕಡ್ಡಾಯ ಗ್ರಾಮೀಣ ಸೇವೆಯನ್ನು ಸಲ್ಲಿಸತಕ್ಕದ್ದಾಗಿದೆ. ಮೇಲೆ ತಿಳಿಸಿರುವಂತೆ ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಲು ಸಂಬಂಧಪಟ್ಟ ಸಕ್ರಮಾತಿ ವಿಶೇಷ ನಿಯಮಗಳ ನಿಯಮ–4 ಕ್ಕೆ ಸೂಕ್ತವಾಗಿ ಒಂದು ಪ್ರೋವಿಜೋ ಸೇರಿಸುವ ಮೂಲಕ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ, 2012–13 ನೇ ಸಾಲಿನ ಸಾಮಾನ್ಯ ವರ್ಗಾವಣೆಗಳನ್ನು ಏಪ್ರಿಲ್ / ಮೇ 2012 ರ ತಿಂಗಳುಗಳಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೇ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ನಿಯಮಗಳ ಪ್ರಕಾರ ಮಾಡಬೇಕಾಗಿದ್ದು, ಸಕ್ರಮಾತಿ ವಿಶೇಷ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ಕಾಲಾವಕಾಶದ ಕೊರತೆಯಿದೆ. ಅಲ್ಲದೆ, ಕರ್ನಾಟಕ ವೈದ್ಯಾಧಿಕಾರಿಗಳ ಸಂಘವು ಈ ಬೇಡಿಕೆಯನ್ನು ತ್ವರಿತವಾಗಿ ಪರಿಗಣಿಸಬೇಕೆಂದು ಮನವಿ ಮಾಡಿದೆ. ಈ ಹಿನ್ನಲೆಯಲ್ಲಿ, ಮೇಲೆ ತಿಳಿಸಿದಂತೆ, ಸಂಬಂಧಪಟ್ಟ ಸಕ್ರಮಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವುದನ್ನು ಬಾಕಿಯಿಟ್ಟು, ಒಂದು ಕಾರ್ಯಕಾರಿ ಆದೇಶವನ್ನು ಹೊರಡಿಸುವ ಮೂಲಕ ಸಮಿತಿಯ ಈ ಶಿಫಾರಸನ್ನು ಜಾರಿಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 264 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ:07-4-2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೂಲತ: ಗುತ್ತಿಗೆ ವೈದ್ಯಾಧಿಕಾರಿಗಳಾಗಿ ಅನೇಕ ವರ್ಷಗಳ ಕಾಲ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿದ ನಂತರ, ಸರ್ಕಾರಿ ಸೇವೆಯಲ್ಲಿ ವಿಶೇಷ ನಿಯಮಗಳ ಮೂಲಕ ಸಕ್ರಮಗೊಂಡ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಸದರಿ ಸಕ್ರಮಾತಿಯ ನಿಕಟಪೂರ್ವದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಲ್ಲಿಸಿರುವ ಗುತ್ತಿಗೆ ಸೇವಾವಧಿಯನ್ನು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೇ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ನಿಯಮಗಳು, 2011 ರ ನಿಯಮ 4 ರಡಿಯಲ್ಲಿ ಕಡ್ಡಾಯ ಗ್ರಾಮೀಣ ಸೇವೆಗೆ ಸಂಬಂಧಿಸಿದಂತೆ ಪರಿಗಣಿಸತಕ್ಕದೆಂದು ಸರ್ಕಾರವು ಈ ಮೂಲಕ ಆದೇಶಿಸಿದೆ.

ಸಂಬಂಧಪಟ್ಟ ವಿಶೇಷ ಸಕ್ರಮಾತಿ ನಿಯಮಗಳಿಗೆ ಈ ಬಗ್ಗೆ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)

ಪಿ.ಆರ್. 1214

ಕಾರ್ಮಿಕ ಸಚಿವಾಲಯ

ವಿಷಯ :- ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳಿಗೆ ಕಾಲಮಿತಿ ಮುಂಬಡ್ತಿ ಯೋಜನೆಯಡಿ ಮೂರನೇ ಕಾಲಮಿತಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ.ಹೆಚ್‌ಎಫ್‌ಡಬ್ಲ್ಯೂ 222 ಎಂಎಸ್‌ಎಸ್ 90, ದಿನಾಂಕ: 19-07-1991
2. ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್‌ಎಸ್‌ಐ 95, ದಿನಾಂಕ: 04-09-2006.
3. ಸರ್ಕಾರದ ಆದೇಶ ಸಂಖ್ಯೆ.ಆಕುಕ 557 ಹೆಚ್‌ಎಸ್‌ಹೆಚ್ 2011, ದಿನಾಂಕ: 03-01-2012.
4. ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ.ಅಭಿವೃದ್ಧಿ/199/2011-12, ದಿನಾಂಕ:25-01-2012.
5. ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ.KAR. RD. ESIC.18.2010, ದಿನಾಂಕ: 24-05-2010.
6. ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ, ಇಂದಿರಾನಗರ, ಬೆಂಗಳೂರು ಇವರ ಮನವಿ ಪತ್ರ ದಿನಾಂಕ:30-03-2012.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ.ಹೆಚ್‌ಎಫ್‌ಡಬ್ಲ್ಯೂ 222 ಎಂಎಸ್‌ಎನ್ 90, ದಿನಾಂಕ:19-07-1991ರ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸಲಾಗಿದ್ದು. ಅದರಂತೆ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೂ ಸಹ ಮೇಲೆ ಓದಲಾದ (2)ರ ಆದೇಶದಲ್ಲಿ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿರುತ್ತದೆ.

1. ಹಿರಿಯ ವಿಮಾ ವೈದ್ಯಾಧಿಕಾರಿಗಳು/ಜೂನಿಯರ್ ಸ್ಪೆಷಲಿಸ್ಟ್:

ವಿಮಾ ವೈದ್ಯಾಧಿಕಾರಿಗಳಾಗಿ ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಹಿರಿಯ ವಿಮಾ ವೈದ್ಯಾಧಿಕಾರಿಗಳಾಗಿ ಪುನರ್ ನಾಮಕರಣ ಮಾಡಲಾಗಿದೆ. ಹಾಗೂ ವೈದ್ಯಕೀಯ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮಾ ಹೊಂದಿದವರನ್ನು ಜೂನಿಯರ್ ಸ್ಪೆಷಲಿಸ್ಟ್ ಎಂದು ಪದನಾಮ ನೀಡಲಾಗಿದೆ. ಹಾಗೂ ₹ 8000-200-8800-260-10880-320-13440ಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿರುತ್ತದೆ.

2. ಮುಖ್ಯ ವಿಮಾ ವೈದ್ಯಾಧಿಕಾರಿಗಳು/ಸೀನಿಯರ್ ಸ್ಪೆಷಲಿಸ್ಟ್:

ವಿಮಾ ವೈದ್ಯಾಧಿಕಾರಿಗಳಾಗಿ 13 ವರ್ಷ ಸೇವೆಯನ್ನು ಪೂರ್ಣಗೊಳಿಸಿದ್ದು, (ಉಪಶಸ್ತ್ರ ಚಿಕಿತ್ಸಕರ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ) ವಿಮಾ ವೈದ್ಯಾಧಿಕಾರಿಗಳಿಗೆ ಮುಖ್ಯ ವಿಮಾ ವೈದ್ಯಾಧಿಕಾರಿಗಳೆಂದು ಪುನರ್ ನಾಮಕರಣ ಮಾಡಲಾಗಿದೆ. ಸ್ನಾತಕೋತ್ತರ ವೈದ್ಯಕೀಯ

ಪದವಿ ಅಥವಾ ಡಿಪ್ಲೋಮಾ ಹೊಂದಿರುವ ವಿಮಾ ವೈದ್ಯಾಧಿಕಾರಿಗಳಿಗೆ ಸೀನಿಯರ್ ಸ್ಪೆಷಲಿಸ್ಟ್ ಎಂಬ ಪದನಾಮ ನೀಡಲಾಗಿದೆ. ಹಾಗೂ ₹9580–260–10880–320–13440–380–14200ಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 20 ವರ್ಷಗಳ ಸೇವೆ ಸಲ್ಲಿಸಿ ಪ್ರಸ್ತುತ ಉಪ ಮುಖ್ಯ ವೈದ್ಯಾಧಿಕಾರಿ/ಹಿರಿಯ ತಜ್ಞರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಶ್ರೇಣಿ ₹19050–450–19500–525–22650–600–26250–675–27600ರಲ್ಲಿ ಕ್ರಮವಾಗಿ ಉಪ ಮುಖ್ಯ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬುದಾಗಿ ಪದನಾಮವನ್ನು ನೀಡಿ 3ನೇ ಕಾಲಮಿತಿ ಮುಂಬಡ್ತಿಯನ್ನು ನೀಡಲು ಮಂಜೂರಾತಿಯನ್ನು ನೀಡಿರುತ್ತಾರೆ. ಈ ಸೌಲಭ್ಯವು ದಿನಾಂಕ:01–01–2012 ರಿಂದ ಅಥವಾ ಅರ್ಹ ವೈದ್ಯಾಧಿಕಾರಿಗಳು 20 ವರ್ಷಗಳ ಸೇವೆ ಸಲ್ಲಿಸಿದ, ಯಾವುದು ನಂತರವೋ ಆ ದಿನಾಂಕದಿಂದ ಜಾರಿಗೊಳಿಸಿರುತ್ತಾರೆ. ಮುಂದುವರಿದು ಸರ್ಕಾರಿ ಆದೇಶ ಸಂಖ್ಯೆ.ಆಕುಕ 222 ಎಂಎಸ್ಎಸ್ 90, ದಿನಾಂಕ:19–07–91ರಲ್ಲಿ ನಿಗದಿಪಡಿಸಿರುವ ಇತರೇ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಕಂಡ ಕಾಲಮಿತಿ ಮುಂಬಡ್ತಿಯಲ್ಲಿ ತಿಳಿಸಿರುವ ವೃಂದಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು ಎಂದು ಆದೇಶಿಸಿರುತ್ತಾರೆ.

ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ರವರು ಮೇಲೆ ಓದಲಾದ (4)ರ ಪತ್ರದಲ್ಲಿ ಇಲಾಖೆಯ ವೈದ್ಯಾಧಿಕಾರಿಗಳೂ ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳಂತೆ ನೇಮಕಾತಿ ಹೊಂದಿದ್ದು, ಈ ಎರಡೂ ಇಲಾಖೆಯ ವೈದ್ಯಾಧಿಕಾರಿಗಳ ವಿದ್ಯಾರ್ಹತೆ ವೇತನ ಶ್ರೇಣಿ, ಕರ್ತವ್ಯ ಮತ್ತು ಹೊಣೆಗಾರಿಕೆ ಮತ್ತು ಸೇವಾ ನಿಯಮಾವಳಿಯು ಒಂದೇ ಆಗಿರುವುದರಿಂದ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೂ ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿಯೇ 3ನೇ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರು ಮೇಲೆ ಓದಲಾದ (5)ರ ಪತ್ರದಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮವು ಒದಗಿಸುತ್ತಿರುವ ವೈದ್ಯಕೀಯ ಸೌಲಭ್ಯಗಳಲ್ಲಿ 8ನೇ 7 ಭಾಗ ವೆಚ್ಚವನ್ನು ಕಾರಾವಿ ನಿಗಮವು ಭರಿಸುತ್ತದೆ. ಉಳಿದ 8ನೇ 1 ಭಾಗ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕರ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ, ಬೆಂಗಳೂರು ಇವರು ಮೇಲೆ ಓದಲಾದ (6)ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ.ಆಕುಕ 222 ಎಂಎಸ್ಎಸ್ 90, ದಿನಾಂಕ:19–07–91 ಮತ್ತು ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್ಎಸ್ಐ 95, ದಿನಾಂಕ:04–09–2006ರಲ್ಲಿ 06 ಮತ್ತು 13 ವರ್ಷಗಳ ಸೇವೆ ಪೂರೈಸಿದ ವೈದ್ಯ ವೃಂದದವರಿಗೆ ಕಾಲಬದ್ಧ ಪದೋನ್ನತಿಯನ್ನು ನೀಡಲಾದಂತೆ ಇದನ್ನು ವಿಸ್ತರಿಸಿ 20 ವರ್ಷಗಳ ಸೇವೆ ಸಲ್ಲಿಸಿದ ವೈದ್ಯರಿಗೆ ವೇತನ ಶ್ರೇಣಿ ₹ 19050–450–19500–525–22650–600–26250–675–27600ಗಳಲ್ಲಿ ಕ್ರಮವಾಗಿ ಉಪ ಮುಖ್ಯ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬುದಾಗಿ ಪದನಾಮವನ್ನು ನೀಡಿ 3ನೇ ಕಾಲಮಿತಿ ಮುಂಬಡ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ.ಆಕುಕ 557 ಹೆಚ್ಎಸ್ಹೆಚ್ 2011, ದಿನಾಂಕ:03–01–2012ರ ಆದೇಶದಲ್ಲಿ ಈ ಸೌಲಭ್ಯವು ದಿನಾಂಕ: 01–01–2012 ರಿಂದ ಜಾರಿಯಾದಂತೆ ಇಲಾಖೆಯ ವೈದ್ಯರಿಗೂ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸುವುದನ್ನು ಕಾಯ್ದಿರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 80 ವೆಚ್ಚ 9/2012, ದಿನಾಂಕ:26–03–2012ರಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿರುತ್ತಾರೆ. **"Finance Department agrees to extend the benefit of Third Time Bound Promotion as contemplated in G.O. No.HFW 557 HSH 2011, dated:03-01-2012 with prospective effect to the ESI Doctors who have completed 20 years of service subject to the conditions stipulated hereunder as also subject to further condition that 7/8th of the additional expenditure thereon be should met by the ESI Corporation''** ಅದರನ್ವಯ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಕಾಇ 28 ಎಲ್ಎಸ್ಐ 2012 ಬೆಂಗಳೂರು, ದಿನಾಂಕ:18–04–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ 20 ವರ್ಷಗಳ ಸತತ ಸೇವೆ ಸಲ್ಲಿಸಿರುವ ವಿಮಾ ವೈದ್ಯಾಧಿಕಾರಿಗಳಿಗೆ ವೇತನ ಶ್ರೇಣಿ ₹19050–27600ರಲ್ಲಿ ಕ್ರಮವಾಗಿ ಮುಖ್ಯ ವಿಮಾ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬ ಪದನಾಮದೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಅಳವಡಿಸುವುದನ್ನು ಕಾಯ್ದಿರಿಸಿ 3ನೇ ಕಾಲಮಿತಿ ಮುಂಬಡ್ತಿಯನ್ನು ಭವಿಷ್ಯವರ್ತಿಯಾಗಿ ವಿಸ್ತರಿಸಿ ಸರ್ಕಾರವು ಮಂಜೂರಾತಿ ನೀಡಿದೆ.

ಕಾಲಮಿತಿ ಮುಂಬಡ್ತಿಯಲ್ಲಿ ತಿಳಿಸಿರುವ ವೃಂದಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸುವ ಬಗ್ಗೆ ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ರವರು ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು.

ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್‌ಎಸ್‌ಐ 95, ದಿನಾಂಕ:04–09–2006ರಲ್ಲಿ ನಿಗಧಿಪಡಿಸಿರುವ ಕರಾರುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 80 ವೆಚ್ಚ 9/2012, ದಿನಾಂಕ:26–03–2012ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ.

ಪಿ.ಆರ್. 1220 (ಕಾರಾವಿ ಯೋ (ವೈ) ಸೇವೆಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾತ್ಕಾಲಿಕ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ:–

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 138 ಸಆಸೇ 2009, ದಿನಾಂಕ: 30–03–2009.
2. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 179 ಸಆಸೇ 2011, ದಿನಾಂಕ: 23.03.2011.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ: ಮಾತಂಇ 451 ಪ್ರಕಾ 2011, ದಿನಾಂಕ: 17–10–2011.
4. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಡತ ಸಂಖ್ಯೆ: ಐಟಿಡಿ 06 ಡಿಐಎಸ್ 2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಹಾಗೂ ಪೂರಕ ಒಟ್ಟು 16 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಸದರಿ ಹುದ್ದೆಗಳನ್ನು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಸೃಜಿಸಲಾಗಿರುವ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 01.04.2011 ರಿಂದ 31.03.2012 ರವರೆಗೆ ಮುಂದುವರೆಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯನ್ನು Officer on Special Duty and Ex-Officio Joint Secretary to Government ಎಂದು ಮರುಪದನಾಮಿಕರಿಸಲು ಕೋರಲಾಗಿದೆ. ಮೇಲೆ ಕ್ರಮ ಸಂಖ್ಯೆ:(4)ರಲ್ಲಿ ಓದಲಾದ ಕಡತದಲ್ಲಿ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ:01.04.2012 ರಿಂದ 31.03.2013 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸುವಂತೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಕೋರಿದೆ.

1.	ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	**16 ಹುದ್ದೆಗಳು**

ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 602 ಸಅಸೇ 2011. ಬೆಂಗಳೂರು, ದಿನಾಂಕ : 16ನೇ ಏಪ್ರಿಲ್ 2012

ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ:01.04.2012ರಿಂದ ಒಂದು ವರ್ಷದವರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ.

1.	ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3.	ಉಪ ಕಾರ್ಯದರ್ಶಿ	1 ಹುದ್ದೆ
4.	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5.	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6.	ಶಾಖಾಧಿಕಾರಿ	1 ಹುದ್ದೆ
7.	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8.	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದೆಗಳು
9.	ಕಿರಿಯ ಸಹಾಯಕರು	1 ಹುದ್ದೆ
10.	ದಲಾಯತ್	3 ಹುದ್ದೆಗಳು
11.	ಚಾಲಕರು	2 ಹುದ್ದೆಗಳು
	ಒಟ್ಟು	16 ಹುದ್ದೆಗಳು

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 1 ಟಿಎಫ್‌ಪಿ 96, ದಿನಾಂಕ: 10–07–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1223 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ ಇವರ ವಿರುದ್ಧ ಇಲಾಖಾ ವಿಚಾರಣೆ – ದಂಡನೆ ವಿಧಿಸಿ ಅಂತಿಮ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ :
1) ಅಪರ ಪೊಲೀಸ್ ಮಹಾನಿರ್ದೇಶಕರು,ಕರ್ನಾಟಕ ಲೋಕಾಯುಕ್ತ,ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ ಐಎನ್‌ವಿ(ಜಿ)/ಎಂ–46/ಸಿಆರ್–04/2007/ ಚಾಮರಾಜನಗರ,ದಿನಾಂಕ:30.11.2007.
2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 4 ಸೇಇವಿ 2008,ದಿನಾಂಕ:6.2.2008.
3) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ ಐಎನ್‌ವಿ(ಜಿ)/ಎಂ–46/ಸಿಆರ್–4/2007, ದಿನಾಂಕ:30.7.2008.
4) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 4 ಸೇಇವಿ 2008,ದಿನಾಂಕ:23.9.2008.
5) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 4 ಸೇಇವಿ 2008, ದಿನಾಂಕ:18.2.2011.
6) ಅಪರ ಪೊಲೀಸ್ ಮಹಾ ನಿರ್ದೇಶಕರು,ಕರ್ನಾಟಕ ಲೋಕಾಯುಕ್ತ,ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ ಐಎನ್‌ವಿ(ಜಿ)/ಎಂ–46/ಸಿಆರ್4/2007ಸಿಎಂ.ಆರ್, ದಿನಾಂಕ:29.10.2011.
7) ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 4 ಸೇಇವಿ 2008,ದಿನಾಂಕ:14.12.2011.
8) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ:177:ಸಿಎನ್‌ಎಸ್: 2011,ದಿನಾಂಕ:6.2.2012.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿ ಅಪರ ಪೋಲೀಸ್ ಮಹಾ ನಿರ್ದೇಶಕರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ,ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನಾ ಕೋಶ) ಇವರು ಈ ಹಿಂದೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಶ್ರೀ ಶಿವಮೂರ್ತಿ ಬಿನ್ ಲಿಂಗಯ್ಯ,ಮದ್ದೂರು ಗ್ರಾಮ,ಯಳಂದೂರು ತಾಲ್ಲೂಕು ಮತ್ತು ಇತರರಿಗೆ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸ್ವ–ಉದ್ಯೋಗ ಯೋಜನೆಯಡಿ ಸಾಲ ಮಂಜೂರು ಮಾಡಲು ಸದರಿ ಫಲಾನುಭವಿಗಳಿಂದ ರೂ.4,500/–ಗಳ ಲಂಚದ ಹಣವನ್ನು ಒತ್ತಾಯದಿಂದ ಸ್ವೀಕರಿಸುವಾಗ, ಚಾಮರಾಜನಗರ ಲೋಕಾಯುಕ್ತ ಪೊಲೀಸ್‌ರ ಬಲೆಗೆ ಸಿಕ್ಕಿಬಿದ್ದಿದ್ದು, ಭ್ರಷ್ಟಾಚಾರ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಗೆ 13(2)ರಡಿಯಲ್ಲಿ ಚಾಮರಾಜನಗರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:04/2007 ಅನ್ನು ದಾಖಲು ಮಾಡಲಾಗಿದ್ದು, ತನಿಖೆಯ ಸಲುವಾಗಿ ಅವರನ್ನು ದಸ್ತಗಿರಿ ಮಾಡಿರುವುದರಿಂದ ಆಪಾದಿತರ ವಿರುದ್ಧ ಭಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿದೆಯೆಂದು ಹಾಗೂ ಸದರಿ ಅಧಿಕಾರಿಯವರ ವಿರುದ್ದದ ಲಂಚ ಸ್ವೀಕೃತ ಆಪಾದನೆಯ ತನಿಖೆಗೆ ಅನುಕೂಲವಾಗುವ ದೃಷ್ಟಿಯಿಂದ, ಈ ಅಧಿಕಾರಿಯವರನ್ನು ಸೇವೆಯಿಂದ ಅಮಾನತ್ತಿನಲ್ಲಿಟ್ಟು, ಅವರ ಲೀನ್‌ನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ. ಮೇಲೆ ಓದಲಾದ (2)ರಲ್ಲಿ ಸದರಿ ಅಧಿಕಾರಿಯವರನ್ನು ಲೋಕಾಯುಕ್ತ ವಿಚಾರಣೆ ಬಾಕಿ ಇಟ್ಟು, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಮೇಲೆ ಓದಲಾದ (3)ರಲ್ಲಿ ಶ್ರೀ ಬಿ.ವಿ.ರಮೇಶ್,ಕಾರ್ಯನಿರ್ವಹಣಾಧಿಕಾರಿ,ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರ ವಿರುದ್ದ ಚಾಮರಾಜನಗರ ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988ರ ಕಲಂ 7, 13(1)(ಡಿ)ರ ಜತೆಯಲ್ಲಿ ಓದಲಾದ 13(2)ರಡಿಯಲ್ಲಿ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಆಪಾದಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಡಿಸಲು ನೇಮಕಾತಿ ಪ್ರಾಧಿಕಾರದ ಅನುಮತಿಯನ್ನು ನೀಡುವಂತೆ ಅಪರ ಪೊಲೀಸ್ ಮಹಾನಿರ್ದೇಶಕರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕೋರಿರುತ್ತಾರೆ. ಮೇಲೆ ಓದಲಾದ (4)ರ ಆದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿದ ಸರ್ಕಾರವು ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ,ಕರ್ನಾಟಕ ಸರ್ಕಾರ ಸಚಿವಾಲಯ(ಹಿಂದಿನ ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್, ಯಳಂದೂರು, ಚಾಮರಾಜನಗರ ಜಿಲ್ಲೆ) ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 7,13(1) (ಡಿ)ರೊಡನೆ ಓದಿಕೊಂಡಂತೆ 13(2)ರನ್ವಯ ಮೇಲೆ ಹೇಳಿದ ಆರೋಪಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲೋಕಾಯುಕ್ತ ಪೊಲೀಸರಿಗೆ ಮಂಜೂರಾತಿಯನ್ನು ನೀಡಲಾಗಿತ್ತು. ಅದರನ್ವಯ ಲೋಕಾಯುಕ್ತ ಅಧಿಕಾರಿಗಳು ಚಾಮರಾಜನಗರ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ದಿನಾಂಕ:13.3.2009ರಂದು ಆರೋಪಿತ ಅಧಿಕಾರಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ವಿಶೇಷ ಪ್ರಕರಣ ಸಂಖ್ಯೆ:126/2009ರಡಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿರುತ್ತದೆ.

ಮೇಲೆ ಓದಲಾದ (5)ರಲ್ಲಿ ಮಾನ್ಯ ಕೆ.ಎ.ಟಿ ಯ ತೀರ್ಪಿನನ್ವಯ ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮಾವಳಿಗಳ 1957ರ ನಿಯಮ 10(3)ರನ್ವಯ ಶ್ರೀ ಬಿ.ವಿ.ರಮೇಶ್, ಅಧೀನ ಕಾರ್ಯದರ್ಶಿ ಇವರ ವಿರುದ್ದದ ಭ್ರಷ್ಟಾಚಾರದ ಆರೋಪಗಳು ಮೇಲ್ನೋಟಕ್ಕೆ ಸಾಭೀತಾಗಿರುವುದು ಕಂಡು ಬಂದಿರುವ ಕಾರಣ ಇವರ ವಿರುದ್ದ ಭ್ರಷ್ಟಾಚಾರ ನಿರೋಧಕ ಕಾಯಿದೆ 1988ರ ಕಲಂ 7, 13(1)(ಡಿ) ಜೊತೆಗೆ 13(2)ರಡಿಯಲ್ಲಿ ಚಾಮರಾಜನಗರ ಲೋಕಾಯುಕ್ತ ಠಾಣೆಯವರು ಮೊಕದ್ದಮೆ ಸಂಖ್ಯೆ:04/2007 ಅನ್ನು ದಾಖಲಿಸಿ, ದಸ್ತಗಿರಿ ಮಾಡಿರುವುದರಿಂದ ಸದರಿ ಅಧಿಕಾರಿಯವರು ಕರ್ತವ್ಯ ಲೋಪ ಎಸಗಿರುವುದು ಹಾಗೂ ಕರ್ತವ್ಯದಲ್ಲಿ ನಿಷ್ಠೆ ಹೊಂದಿಲ್ಲದಿರುವುದು ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಇವರ ಇಲಾಖಾ ವಿಚಾರಣೆ ಬಾಕಿಯಿಟ್ಟು, ದಿನಾಂಕ:6.2.2008ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ:16.2.2010ರವರೆಗೆ ಸೇವೆಯಿಂದ ಅಮಾನತ್ತಿನಲ್ಲಿಟ್ಟಿದ್ದ ಕ್ರಮವನ್ನು ಸ್ಥಿರೀಕರಿಸಿ ಆದೇಶವನ್ನು ಹೊರಡಿಸಲಾಗಿದೆ.

ಆರೋಪಿತ ಅಧಿಕಾರಿ ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ ಇವರ ವಿರುದ್ದದ ಪ್ರಕರಣದಲ್ಲಿ ಚಾಮರಾಜನಗರ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಅಂತಿಮವಾಗಿ ನ್ಯಾಯಾಲಯವು ದಿನಾಂಕ:23.7.2011ರಂದು ಪ್ರಕರಣವನ್ನು ಇತ್ಯರ್ಥಪಡಿಸುತ್ತಾ, ಈ ಕೆಳಕಂಡಂತೆ ತೀರ್ಪು ನೀಡಿರುವುದರಿಂದ,

ORDER ON SENTENCE

After pronouncement of judgement of conviction against the accused under section 7 and 13(1)(d) r/w. Section 13(2) of the Prevention of

Corruption Act, 1988, I heard the accused and his counsel and the learned Special The learned counsel for accused submitted and pleaded Public prosecutor on quantum of punishment.

that the accused is a government servant and he is having two children who are studying and he has aged parents. All are dependent upon the accused. Therefore, lenient view may be taken and minimum sentence and minimum fine may be imposed.

In reply, the learned Special Public prosecutor argued and pleaded for imposing maximum punishment as provided u/s. 7 and 13(1)d) r/w Sec. 13(2) of Prevention of Corruption Act, 1988,

Therefore in view of facts and circumstances of this instant case and nature of the offence, I am of the considered view and inclined to hold that the justice would be met by awarding 4 years imprisonment for the offence punishable u/s. 7 and 13(1)(d) r/w Sec. 13(2) of the Prevention of Corruption Act, 1988, and with a fine of Rs.25,000/-. Accordingly, for the reasons assigned herein above, I proceed to pass the following:

ORDER

Resultantly, acting under Section 235(2) of Cr.P.C. the accused is hereby convicted and sentenced as follows:

The accused shall undergo imprisonment for 4 years and he shall also pay a fine of Rs.25,000/- for the offences punishable under Section 7 and 13(1)(d) r/w. Section 13(2) of the Prevention of Corruption Act, 1988, In default, he shall suffer further simple imprisonment for a period of five months.

The accused is entitled to set off as provided under Section 428 of Cr.P.C. for the period for which he is in judicial custody during the pendency of this case, if any.

The bail bond of the accused and his surety stand cancelled

MOs. 1 to 8 shall be destroyed, whereas MO.9 being the currency notes, shall be returned to complainant L.P.S. if he makes claim after expiry of appeal period.

Issue conviction warrant against the accused accordingly.

Supply the copy of this judgment to the accused free of cost forthwith.

And duly instruct accused about the appeal provision.

ಆರೋಪಿತ ಅಧಿಕಾರಿಯ ವಿರುದ್ದ ನ್ಯಾಯಾಲಯವು ನೀಡಿರುವ ಮೇಲ್ಕಂಡ ತೀರ್ಪಿನನ್ವಯ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 9 ಸೇಇವಿ 95, ದಿನಾಂಕ:26.6.1996ರನ್ವಯ ಶ್ರೀ ಬಿ.ವಿ. ರಮೇಶ್, ಸರ್ಕಾರದ ಅಧೀನ ಕಾರ್ಯದರ್ಶಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸುವ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಅಪರ ಪೊಲೀಸ್ ಮಹಾನಿರ್ದೇಶಕರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೇಲೆ ಓದಲಾದ (6)ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲೆ ಓದಲಾದ (7)ರ ಪತ್ರದಲ್ಲಿ ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ಪ್ರಸ್ತಾವನೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಕೋರಲಾಗಿ, ಮೇಲೆ ಓದಲಾದ (8)ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವು ಸದರಿ ಪ್ರಸ್ತಾವನೆಗೆ ಸಹಮತಿ ನೀಡಿರುತ್ತದೆ. ಅದರಂತೆ ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 04 ಸೇಇವಿ 2008,ಬೆಂಗಳೂರು,ದಿನಾಂಕ:17.04.2012.

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಣೆಗಳ ಹಿನ್ನಲೆಯಲ್ಲಿ ಶ್ರೀ ಬಿ.ವಿ.ರಮೇಶ್,ಸರ್ಕಾರದ ಅಧೀನ ಕಾರ್ಯದರ್ಶಿ,ಕರ್ನಾಟಕ ಸರ್ಕಾರದ ಸಚಿವಾಲಯ ಇವರು ಈ ಹಿಂದೆ ನಿಯೋಜನೆ ಮೇಲೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಅಕ್ರಮ ಸಂಭಾವನೆ ಸ್ವೀಕರಿಸಿರುವ ಆರೋಪವು ಸಾಭೀತಾಗಿರುವುದರಿಂದ ಮತ್ತು ಚಾಮರಾಜನಗರ ಜಿಲ್ಲಾ ಸತ್ರ ನ್ಯಾಯಾಲಯವು ಆರೋಪಿತ ಅಧಿಕಾರಿಗೆ ಕಾರಾಗೃಹ ಶಿಕ್ಷೆ ವಿಧಿಸಿ,ತೀರ್ಪು ನೀಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(viii)ರ ಅನ್ವಯ ಶ್ರೀ ಬಿ.ವಿ.ರಮೇಶ್,ಅಧೀನ ಕಾರ್ಯದರ್ಶಿ,ಕರ್ನಾಟಕ ಸರ್ಕಾರ ಸಚಿವಾಲಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನ) ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಿ, ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್.ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3).

ಪಿ.ಆರ್.1224

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಶ್ರೀ ಗುರುನಾಥ ಎಸ್. ಕುಲಕರ್ಣಿ, ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರು ದಿನಾಂಕ : 16–4–2012 ರಂದು ನಡೆಯುವ ಐಟಿಪಿಎಲ್ ನಿರ್ದೇಶಕ ಮಂಡಳಿಯ 77ನೇ ಸಭೆಯಲ್ಲಿ ಭಾಗವಹಿಸಲು ಸಿಂಗಾಪುರ ಪ್ರವಾಸ ಕೈಗೊಳ್ಳುವ ಬಗ್ಗೆ.

ಉಲ್ಲೇಖ : ಶ್ರೀ ದ್ಯಾಬೇರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ : ಐಎಡಿಬಿ/ಪಿಎಸ್–15/143/ 11–12, ದಿನಾಂಕ : 25–1–2012.

ಪ್ರಸ್ತಾವನೆ :

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಇವರು ತಮ್ಮ ಪತ್ರದಲ್ಲಿ ದಿನಾಂಕ : 16–4–2012 ರಂದು ನಡೆಯುವ 77ನೇ ಐಟಿಪಿಎಲ್ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಅನುಮತಿಯನ್ನು ಕೋರುತ್ತ, ಸಿಂಗಾಪುರ ಪ್ರವಾಸ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿ

1. ಶ್ರೀ ಎಂ.ಬಿ. ದ್ಯಾಬೇರಿ, ಐ.ಎ.ಎಸ್. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು.
2. ಶ್ರೀ ಗುರುನಾಥ ಎಸ್. ಕುಲಕರ್ಣಿ, ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರುಗಳಿಗೆ ಸದರಿ ಸಭೆಯಲ್ಲಿ ಭಾಗವಹಿಸಲು ದಿನಾಂಕ : 15–4–2012 ರಿಂದ 17–4–2012 ರ ವರೆಗೆ ಸಿಂಗಾಪುರಕ್ಕೆ ತೆರಳಲು ಸರ್ಕಾರದ ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ. ಪ್ರವಾಸದ ವೆಚ್ಚವನ್ನು ಮೆ. ಐಟಿಪಿಎಲ್, ಬೆಂಗಳೂರು ಈ ಸಂಸ್ಥೆಯು ಸಂಪೂರ್ಣವಾಗಿ ಭರಿಸುವುದಾಗಿ ತಿಳಿಸಿರುತ್ತಾರೆ.

ಸದರಿಯವರ ಕೋರಿಕೆಯನ್ನು ಸರ್ಕಾರವು ಪರಿಶೀಲಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಸಿಐ 26 ಎಸ್‌ಪಿಐ 2011, ಬೆಂಗಳೂರು, ದಿನಾಂಕ : 7–4–2012.

ದಿನಾಂಕ : 16–4–2012 ರಂದು ಸಿಂಗಾಪುರದಲ್ಲಿ ನಡೆಯುವ ಐಟಿಪಿಎಲ್ ನಿರ್ದೇಶಕ ಮಂಡಳಿಯ 77ನೇ ಸಭೆಯಲ್ಲಿ ಭಾಗವಹಿಸುವ ಸಲುವಾಗಿ ಸಿಂಗಾಪುರ ಪ್ರವಾಸ ಕೈಗೊಳ್ಳಲು ಶ್ರೀ ಎಂ.ಬಿ. ದ್ಯಾಬೇರಿ, ಐ.ಎ.ಎಸ್. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಹಾಗೂ ಶ್ರೀ ಗುರುನಾಥ ಎಸ್. ಕುಲಕರ್ಣಿ, ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರುಗಳು ದಿನಾಂಕ : 16–4–2012 ರಂದು ಸಭೆಯಲ್ಲಿ ಪಾಲ್ಗೊಳ್ಳಲು ಹಾಗೂ ದಿನಾಂಕ : 15–4–2012 ರಿಂದ 17–4–2012 ರ ವರೆಗೆ ವಿದೇಶ ಪ್ರವಾಸ ಕೈಗೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಈ ವಿದೇಶದ ಪ್ರವಾಸದ ಎಲ್ಲಾ ವೆಚ್ಚವನ್ನು ಮೆ. ಐಟಿಪಿಎಲ್, ಬೆಂಗಳೂರು ಇವರೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜ್ಯೋತಿ ಆರ್.ಜೆ.

ಪೀಠಾಧಿಕಾರಿ (ತಾಂತ್ರಿಕ ಕೋಶ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 1204

ತೋಟಗಾರಿಕೆ ಸಚಿವಾಲಯ

ವಿಷಯ : ಶ್ರೀ ರುದ್ರಪ್ಪ, ಬೀಡನಾಳ, ಸತೋಅ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ, ಹಿಸತೋನಿ (ಜಿಪಂ) ಕೊಪ್ಪಳರವರ ಅಧೀನರವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಓದಲಾಗಿದೆ :

1. ಅಪರ ನಿಬಂಧಕರು, ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ. Compt/UPLOK/GLB/221/2009/ARE–6, ದಿನಾಂಕ : 10–11–2011
2. ತೋಟಗಾರಿಕೆ ನಿರ್ದೇಶಕರ ಆದೇಶ ಸಂ. ತೋಇ/ಆ/ಸಿ/ವಿನಿ–10–2/30/2011–12, ದಿನಾಂಕ : 24–2–2012.
3. ಅಪರ ನಿಬಂಧಕರು, ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ. Compt/UPLOK/ GLB/221/2009/ARE–6, ದಿನಾಂಕ : 29–2–2012.

ಪ್ರಸ್ತಾವನೆ :

ಶ್ರೀ ಬಸವರಾಜ್ ಕಟ್ಟಿ, ಬಿನ್ ಚಂದಪ್ಪ ಕಟ್ಟಿಮನಿ, ಚಿಕ್ಕಗೊಣ್ಣಾಗರ ಗ್ರಾಮ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ರವರ ತಾಯಿ ಶ್ರೀಮತಿ ಮರಿಯಮ್ಮ ಇವರ ಹೆಸರಿನಲ್ಲಿ ಚಿಕ್ಕಗೊಣ್ಣಾಗರ ಗ್ರಾಮದ ಸೀಮೆಯಲ್ಲಿರುವ ಜಮೀನಿನಲ್ಲಿ 2 ವರ್ಷಗಳ ಹಿಂದೆ ಡ್ರಿಪ್ ಇರಿಗೇಷನ್ ಅಳವಡಿಸಿ ದಾಳಿಂಬೆ ತೋಟ ಮಾಡಿದ್ದು, ಈ ಸಂಬಂಧ ತೋಟಗಾರಿಕೆ ಇಲಾಖೆಯಿಂದ ಡ್ರಿಪ್ ಇರಿಗೇಷನ್ ಸಬ್ಸಿಡಿ ಮತ್ತು ಮೊದಲನೇ ಕಂತಿನ ಸಹಾಯಧನ ಮಂಜೂರಾತಿ ಮಾಡಲಾಗಿರುತ್ತದೆ. ನಂತರ ಎರಡನೇ ಕಂತಿನ ಹಣವನ್ನು ಮಂಜೂರು ಮಾಡಿಸಿಕೊಳ್ಳುವ ಸಲುವಾಗಿ ಶ್ರೀ ರುದ್ರಪ್ಪ ಬಿಡನಾಳ, ಹಿಂದಿನ ತೋಟಗಾರಿಕೆ ಸಹಾಯಕರು, ಕುಷ್ಟಗಿ ಹಾಗೂ ಹಾಲಿ ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ) ಕೊಪ್ಪಳರವರ ಅಧೀನ ಇವರನ್ನು ವಿಚಾರಿಸಲಾಗಿ, ಸದರಿಯವರು ಎರಡನೇ ಕಂತಿನ ಸಬ್ಸಿಡಿ ಹಣವನ್ನು ಮಂಜೂರು ಮಾಡಲು ರೂ. 4,000/–ಗಳ ಲಂಚದ ಹಣವನ್ನು ನೀಡಲು ಒತ್ತಾಯಿಸಿರುತ್ತಾರೆ.

ಆದರೆ ಶ್ರೀ ಬಸವರಾಜ್ ಕಟ್ಟಿ ಬಿನ್ ಚಂದಪ್ಪ ಕಟ್ಟಿಮನಿ, ಚಿಕ್ಕಗೊಣ್ಣಾಗರ ಗ್ರಾಮ, ಕುಷ್ಠಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಲಂಚದ ಹಣವನ್ನು ನೀಡಲು ಒಪ್ಪದ ಕಾರಣ ಕೊಪ್ಪಳ ಲೋಕಾಯುಕ್ತ ಠಾಣೆಯಲ್ಲಿ ಸದರಿ ಅಧಿಕಾರಿಯ ವಿರುದ್ಧ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಇವರು ಸಲ್ಲಿಸಿದ ದೂರು ಅರ್ಜಿಯ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ಶ್ರೀ ರುದ್ರಪ್ಪ ಬಿಡನಾಳ, ಹಿಂದಿನ ತೋಟಗಾರಿಕೆ ಸಹಾಯಕರು, ಕುಷ್ಟಗಿ ಹಾಗೂ ಹಾಲಿ ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕೊಪ್ಪಳರವರ ಅಧೀನ ಇವರ ವಿರುದ್ಧದ ದೂರು ಅರ್ಜಿಯಲ್ಲಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 3(1)ನ್ನು ಉಲ್ಲಂಘಿಸಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 14(ಎ) ರನ್ವಯ ಉಪ ಲೋಕಾಯುಕ್ತರವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲಾಗಿರುತ್ತದೆ.

ಅದರಂತೆ ಮೇಲೆ ಓದಲಾದ ಕ್ರ.ಸಂ. (2)ರ ಆದೇಶದಲ್ಲಿ ತೋಟಗಾರಿಕೆ ನಿರ್ದೇಶಕರು ಶ್ರೀ ರುದ್ರಪ್ಪ ಬಿಡನಾಳ, ಹಿಂದಿನ ತೋಟಗಾರಿಕೆ ಸಹಾಯಕರು, ಕುಷ್ಟಗಿ ಹಾಗೂ ಪ್ರಸ್ತುತ ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕೊಪ್ಪಳರವರ ಅಧೀನ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 14(ಎ) ರನ್ವಯ ಪ್ರಕರಣವನ್ನು ವಿಚಾರಣೆ ನಡೆಸಲು ಉಪ ಲೋಕಾಯುಕ್ತ, ಬೆಂಗಳೂರುರವರಿಗೆ ವಹಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತ ನಿಯಮ 1985ರ ನಿಯಮ 3ರನ್ವಯ ಸರ್ಕಾರಿ ನೌಕರರಿಗೆ ಸಕ್ಷಮ ಪ್ರಾಧಿಕಾರ ಸರ್ಕಾರವಾಗಿರುವುದರಿಂದ ಶ್ರೀ ರುದ್ರಪ್ಪ ಬಿಡನಾಳ, ಹಿಂದಿನ ತೋಟಗಾರಿಕೆ ಸಹಾಯಕರು, ಕುಷ್ಟಗಿ ಹಾಗೂ ಹಾಲಿ ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕೊಪ್ಪಳರವರ ಅಧೀನ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 14 (ಎ)ರನ್ವಯ ವಿಚಾರಣೆ ನಡೆಸಲು ಉಪ ಲೋಕಾಯುಕ್ತರವರಿಗೆ ವಹಿಸಿ ಸರ್ಕಾರದಿಂದ ಆದೇಶ ಹೊರಡಿಸುವಂತೆ ಕೋರಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ತೋಇ 47 ತೋಸೇಪ 2012, ಬೆಂಗಳೂರು, ದಿನಾಂಕ : 13–4–2012.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ರುದ್ರಪ್ಪ ಬಿಡನಾಳ, ಹಿಂದಿನ ತೋಟಗಾರಿಕೆ ಸಹಾಯಕರು, ಕುಷ್ಟಗಿ ಹಾಗೂ ಹಾಲಿ ಸಹಾಯಕ ತೋಟಗಾರಿಕೆ ಅಧಿಕಾರಿ, ಹಿಟ್ನಾಳ್ ರೈತ ಸಂಪರ್ಕ ಕೇಂದ್ರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕೊಪ್ಪಳರವರ ಅಧೀನ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 14(ಎ)ರನ್ವಯ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತ, ಬೆಂಗಳೂರುರವರಿಗೆ ವಹಿಸಿ ಆದೇಶಿಸಿದೆ. ತೋಟಗಾರಿಕೆ ನಿರ್ದೇಶಕರ ಆದೇಶ ಸಂಖ್ಯೆ : ತೋಇ/ಆ/ಸಿ/ವಿನಿ10–2/30/2011–12, ದಿನಾಂಕ : 24–2–2012 ಅನ್ನು ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ತೋಟಗಾರಿಕೆ ಇಲಾಖೆ.

ಪಿ.ಆರ್. 1205

ಸಹಕಾರ ಸಚಿವಾಲಯ

ವಿಷಯ : ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸಿಒ 194 ಸಿಎಲ್ಎಂ 2011, ದಿನಾಂಕ : 20–12–2011.

2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ : ಯುಬಿಸಿ–5/58/ಮನವಿ/2006–07, ದಿನಾಂಕ : 13–3–2012.

ಪ್ರಸ್ತಾವನೆ :

ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಅವ್ಯವಹಾರಗಳು ನಡೆದಿರುವುದು, ದಿನನಿತ್ಯದ ವ್ಯವಹಾರಗಳನ್ನು ವ್ಯವಸ್ಥಿತವಾಗಿ ಹಾಗೂ ಸರಿಯಾಗಿ ನಿರ್ವಹಿಸಲು ಆಡಳಿತ ಸಮಿತಿಯು ವಿಫಲವಾಗಿರುವುದು ಮತ್ತು ಬ್ಯಾಂಕಿನ ಸದಸ್ಯರ/ಠೇವಣಿದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ದಿನಾಂಕ : 31–1–2006ರ ಪರಿವೀಕ್ಷಣಾ ವರದಿಯಲ್ಲಿ ತಿಳಿಸಿದ್ದರ ಹಿನ್ನೆಲೆಯಲ್ಲಿ ಸದರಿ ಬ್ಯಾಂಕಿನ ಆಡಳಿತ ಸಮಿತಿಯನ್ನು ದಿನಾಂಕ : 2–12–2006 ರಂದು ರದ್ದುಪಡಿಸಿ ಆಡಳಿತಗಾರರನ್ನು ನೇಮಿಸಲಾಗಿತ್ತು. ತದನಂತರ ಈ ಆಡಳಿತಗಾರರ ಅವಧಿಯನ್ನು ಹಂತಹಂತವಾಗಿ ವಿಸ್ತರಿಸಿ ಅಂತಿಮವಾಗಿ ಮೇಲೆ (1)ರಲ್ಲಿ ಓದಲಾದ ದಿನಾಂಕ : 20–12–2011ರ ಆದೇಶದಲ್ಲಿ ದಿನಾಂಕ : 31–3–2012 ರವರೆಗೆ ವಿಸ್ತರಿಸಲಾಗಿದೆ. ದಿನಾಂಕ : 31–3–2012ರ ಅಂತ್ಯದವರೆಗಿನ ಬ್ಯಾಂಕಿನ ಲೆಕ್ಕಗಳನ್ನು ಪೂರ್ಣಗೊಳಿಸಿ ಲೆಕ್ಕ ಪತ್ರ (ಆರ್ಥಿಕ ತಃಖ್ತೆ)ಗಳನ್ನು ತಯಾರಿಸಲು ಮತ್ತು ಆಡಳಿತ ಸಮಿತಿಯ ಚುನಾವಣೆಯನ್ನು ನಿಯಮಾನುಸಾರ ದಿನಾಂಕ : 30–6–2012 ರೊಳಗೆ ನಡೆಸಲು ಅನುವಾಗುವಂತೆ ಬ್ಯಾಂಕಿನ ಆಡಳಿಗಾರರ ಅವಧಿಯನ್ನು ವಿಸ್ತರಿಸಲು ಸಹಕಾರ ಸಂಘಗಳ ನಿಬಂಧಕರು ಮೇಲೆ ಓದಲಾದ (2) ರ ಪತ್ರದಲ್ಲಿ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಸಇ 194 ಸಿಎಲ್ಎಂ 2011, ಬೆಂಗಳೂರು, ದಿನಾಂಕ : 11–4–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ : 1–4–2012 ರಿಂದ 30–6–2012 ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ, ಎಂದರೆ :–

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪ ಪ್ರಕರಣ (1) ರಲ್ಲಿನ "ಐವತ್ತೆಂಟು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಅರವತ್ತೊಂದು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ : 2) ಪ್ರಕರಣ 30 ಉಪ ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30–6–2012ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 30 ಉಪಪ್ರಕರಣದ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಸಿ. ಸತೀಶ್
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಸಹಕಾರ ಇಲಾಖೆ.

ಪಿ.ಆರ್. 1206

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಯುವಜನ ಸೇವಾ ಮತ್ತು ಕಂದಾಯ ಇಲಾಖೆಯ ಆಂತರಿಕ ಆರ್ಥಿಕ ಸಲಹಾ ವಿಭಾಗದಲ್ಲಿ ಕಿರಿಯ ಸಹಾಯಕರ ಹುದ್ದೆ ಸೃಜನೆ ಬಗ್ಗೆ.

ಓದಲಾಗಿದೆ : ಅನಧಿಕೃತ ಟಿಪ್ಪಣಿ ಸಂಖ್ಯೆ : ಯುಸೇಇ 03 ಐಎಫ್‌ಡಬ್ಲ್ಯೂ 12, ದಿನಾಂಕ : 27–1–12.

ಪ್ರಸ್ತಾವನೆ :

ಮೇಲೆ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು, ಯುವಜನ ಸೇವೆ ಹಾಗೂ ಕಂದಾಯ ಇಲಾಖೆ ಇವರು ಸದರಿ ಎರಡು ಇಲಾಖೆಗಳ ಸೇವಾ ಹಾಗೂ ಆರ್ಥಿಕ ವಿಷಯಗಳ ಪರಿಶೀಲನಾ ಕಾರ್ಯ ನಿರ್ವಹಿಸುವ ಆಂತರಿಕ ಆರ್ಥಿಕ ಸಲಹಾ ವಿಭಾಗದ ಎರಡೂ ಶಾಖೆಗಳಲ್ಲಿ ಕಿರಿಯ ಸಹಾಯಕರ ಹುದ್ದೆ ಇಲ್ಲದ್ದರಿಂದ ಕಾರ್ಯ ನಿರ್ವಹಣೆಗೆ ಅಡಚಣೆಯಾಗಿದೆ ಎಂದು ವಿವರಿಸಲಾಗಿದೆ. ಈ ಮೊದಲು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯ ಜೊತೆಗೆ ಸಂಯೋಜನೆ ಹೊಂದಿದ್ದ ಈ ವಿಭಾಗವು ಪ್ರತ್ಯೇಕಗೊಂಡು ಕಂದಾಯ ಇಲಾಖೆಯೊಡನೆ ಸಮ್ಮಿಳನಗೊಂಡಿರುವ ಕಾರಣ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಐಎಫ್ಎ ವಿಭಾಗಕ್ಕೆ, ಅಸ್ತಿತ್ವದಲ್ಲಿದ್ದ ಒಂದು ಕಿರಿಯ ಸಹಾಯಕರ ಹುದ್ದೆಯು ವರ್ಗಾಯಿತವಾಗಿದ್ದು ಯುವಜನಸೇವಾ ಹಾಗೂ ಕಂದಾಯ ಇಲಾಖೆಯ ಐಎಫ್ಎ ವಿಭಾಗಕ್ಕೆ ಕನಿಷ್ಠ ಒಂದು ಕಿರಿಯ ಸಹಾಯಕರ ಹುದ್ದೆಯನ್ನು ಸೃಜಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 24 ಆಕಿಸೇ 2012, ಬೆಂಗಳೂರು, ದಿನಾಂಕ : 12–4–2012.

ಕರ್ನಾಟಕ ಸರ್ಕಾರ ಸಚಿವಾಲಯದ ಯುವಜನ ಸೇವೆ ಹಾಗೂ ಕಂದಾಯ ಇಲಾಖೆಯ ಆಂತರಿಕ ಆರ್ಥಿಕ ಸಲಹಾ ವಿಭಾಗದ ಎರಡೂ ಶಾಖೆಗಳಿಗೆ ಸೇರಿ ಒಂದು ಕಿರಿಯ ಸಹಾಯಕರ ಹುದ್ದೆಯನ್ನು ನೂತನವಾಗಿ, ಶಾಶ್ವತವಾಗಿ ಸೃಜಿಸಲು ಹಾಗೂ ಈ ಹುದ್ದೆಯನ್ನು ಸದರಿ ವೃಂದದಲ್ಲಿ ಚಾಲ್ತಿ ಕಾರ್ಯನಿರ್ವಹಿಸುತ್ತಿರುವ ನೌಕರರಿಂದಲೇ ಭರ್ತಿ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 129 ವೆಚ್ಚ–12/2012, ದಿನಾಂಕ : 28–2–2012 ಹಾಗೂ ಟಿಪ್ಪಣಿ ಸಂಖ್ಯೆ: ಆಇ 271 ವೆಚ್ಚ–12/2012, ದಿನಾಂಕ : 5–4–2012 ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೋಸ್ ಗ್ಸೇವಿಯರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ–2).

ಪಿ.ಆರ್. 1208

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕೆಎಎಸ್ ವೃಂದದಲ್ಲಿ ಹೊಸದಾಗಿ ಸೃಜಿಸಲಾದ ಕೆಎಎಸ್ (ಸೀನಿಯರ್ ಸೂಪರ್ ಟೈಂ ಸ್ಕೇಲ್) ವೃಂದಕ್ಕೆ ನೇಮಕಾತಿ ವಿಧಾನವನ್ನು ಕಾರ್ಯಕಾರಿ ಆದೇಶದ ಮೂಲಕ ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 325 ಆಸೇಇ 2009, ದಿನಾಂಕ : 24–3–2012.
2. ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 38 ಸೇನಿಇ 96, ದಿನಾಂಕ : 1–8–1996

ಪ್ರಸ್ತಾವನೆ :

ಕರ್ನಾಟಕ ಆಡಳಿತ ಸೇವಾ ಅಧಿಕಾರಿಗಳ ಸಂಘದ ಬೇಡಿಕೆಯ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಮೇಲೆ ಓದಲಾದ (1)ರ ಸರ್ಕಾರದ ಆದೇಶದ ಮೂಲಕ ಕೆಎಎಸ್ ವೃಂದದಲ್ಲಿ ಕೆಎಎಸ್ (ಸೀನಿಯರ್ ಸೂಪರ್ ಟೈಂ ಸ್ಕೇಲ್) ವೃಂದವನ್ನು ಹೊಸದಾಗಿ ರಚಿಸಿ ರೂ. 28275–39900ರ ವೇತನ ಶ್ರೇಣಿಯಲ್ಲಿ ಐದು (05) ಹುದ್ದೆಗಳನ್ನು ಈ ವೃಂದದ ಅಧಿಕಾರಿಗಳಿಗೆ ಬಡ್ತಿ ನೀಡಿ ನೇಮಿಸಲು ಐದು ಹುದ್ದೆಗಳನ್ನು ಸೃಜಿಸಲಾಗಿದೆ. ಸದರಿ ಐದು ಕೆಎಎಸ್ (ಸೀನಿಯರ್ ಸೂಪರ್ ಟೈಂ ಸ್ಕೇಲ್) ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಮೂಲಕ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿ ತುಂಬಲು ಕಾಲಾವಕಾಶ ಬೇಕಾಗುವುದರಿಂದ, ಈ ಹುದ್ದೆಗಳನ್ನು ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ ತುಂಬಲು ಅವಕಾಶ ಕಲ್ಪಿಸಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಮೇಲೆ ಓದಲಾದ (2) ರ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಕಾರ್ಯಕಾರಿ ಆದೇಶ ಹೊರಡಿಸುವ ಮೂಲಕ ಮೇಲ್ಕಂಡ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ.

ಅದರಂತೆ ಈ ಆದೇಶ

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 325 ಆಸೇಇ 2009, ಬೆಂಗಳೂರು, ದಿನಾಂಕ : 12–4–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೆಎಎಸ್ ವೃಂದದಲ್ಲಿ ಹೊಸದಾಗಿ ಸೃಜಿಸಿರುವ ಕೆಎಎಸ್ (ಸೀನಿಯರ್ ಸೂಪರ್ ಟೈಂ ಸ್ಕೇಲ್) ವೃಂದಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವುದನ್ನು ಕಾಯ್ದಿರಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ನೇಮಕಾತಿ ಕಾರ್ಯ ವಿಧಾನವನ್ನು ನಿಗಧಿಪಡಿಸಲಾಗಿದೆ.

1. ಈ ಕಾರ್ಯಕಾರಿ ಆದೇಶದ ಮೂಲಕ ನಿಗಧಿಪಡಿಸಿದ ನೇಮಕಾತಿ ವಿಧಾನವು ಸದರಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳ ಕಾಲ ಮಾತ್ರ ಜಾರಿಯಲ್ಲಿರುತ್ತದೆ.
2. ಆರು ತಿಂಗಳ ಒಳಗಾಗಿ ಈ ನೇಮಕಾತಿ ಕಾರ್ಯವಿಧಾನವನ್ನು ಕರ್ನಾಟಕ ಆಡಳಿತ ಸೇವೆಗಳು (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ಅಳವಡಿಸತಕ್ಕದ್ದು ;
3. ಆರು ತಿಂಗಳ ನಂತರ ಈ ಕಾರ್ಯಕಾರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ದಿನಾಂಕ : 7–4–2012ರ ಟಿಪ್ಪಣಿ ಸಂಖ್ಯೆ : ಸಿಆಸುಇ 44 ಸೇನಿಡಿ 2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಡಗಾವೆ ಬಸವರಾಜ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2).

ಅನುಬಂಧ

ಕ್ರ. ಸಂ.	ಹುದ್ದೆ	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ
1.	ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) (ವೇತನ ಶ್ರೇಣಿ ರೂ. 28275–39900)	05 (ಐದು)	**ಮುಂಬಡ್ತಿ ಮೂಲಕ :** ಕೆ.ಎ.ಎಸ್ (ಕಿರಿಯ ಶ್ರೇಣಿ/ಕೆಎಎಸ್ (ಹಿರಿಯ ಶ್ರೇಣಿ)/ಕೆಎಎಸ್ (ಆಯ್ಕೆ ಶ್ರೇಣಿ)/ ಕೆಎಎಸ್ (ಸೂಪರ್ ಟೈಂ ಸ್ಕೇಲ್) ಈ ವೃಂದಗಳಲ್ಲಿ ಒಟ್ಟಾರೆ 18 ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.

ವಡಗಾವೆ ಬಸವರಾಜ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2).

ಪಿ.ಆರ್. 1209

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ವಕೀಲರ ಸಹಕಾರ ಸಂಘಕ್ಕೆ ದಸ್ತಾವೇಜು ಹಾಳೆಗಳ ಮಾರಾಟಕ್ಕೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :

1. ಬೆಂಗಳೂರು ವಕೀಲರ ಸಹಕಾರ ಸಂಘ ನಿಯಮಿತ ಇವರ ದಿನಾಂಕ : 9–2–2011 ಮತ್ತು 21–10–2011ರ ಮನವಿ.
2. ರಿಟ್ ಅರ್ಜಿ ಸಂಖ್ಯೆ : 32491/2011 (ಜಿಎಂ–ಎಸ್‌ಟಿ/ಆರ್‌ಎನ್)ರ ಮೇಲಿನ ದಿನಾಂಕ : 29–9–2011ರ ತೀರ್ಪು.
3. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ : ಎಸ್‌ಟಿಪಿ : 105/2011–12, ದಿನಾಂಕ : 25–11–2011.

ಪ್ರಸ್ತಾವನೆ :

ಬೆಂಗಳೂರು ವಕೀಲರ ಸಹಕಾರ ಸಂಘ ನಿಯಮಿತ ಇವರು ಮೇಲೆ ಓದಲಾದ (1)ರ ಮನವಿ ಪತ್ರಗಳಲ್ಲಿ ತಮ್ಮ ಸಂಘವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅಡಿ ನೋಂದಣಿಯಾಗಿದ್ದು, ವಕೀಲರ ಹಾಗೂ ಸಾರ್ವಜನಿಕರ ಅನುಕೂಲ, ಧ್ಯೇಯೋದ್ದೇಶವನ್ನು ಇಟ್ಟುಕೊಂಡು ಸ್ಥಾಪಿತವಾಗಿದೆ ಹಾಗೂ ಸಂಘವು ಬೆಂಗಳೂರು ನಗರ ಸುತ್ತಮುತ್ತಲಿನ ವಕೀಲರ ಕಕ್ಷಿದಾರರ ಮತ್ತು ಸಾರ್ವಜನಿಕರಿಗಾಗಿ ಶ್ರಮಿಸುತ್ತಿರುವ ಸಹಕಾರ ಸಂಘವಾಗಿರುತ್ತದೆಂದು ದಸ್ತಾವೇಜು ಹಾಳೆಗಳ ಬೇಡಿಕೆ ಸಾಕಷ್ಟು ಇರುವುದರಿಂದ ಸರ್ಕಾರವು ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖಾ ನೌಕರರ ವಿವಿದೋದ್ದೇಶ ಸಹಕಾರ ಸಂಘ ನಿಯಮಿತ ಇವರಿಗೆ ದಸ್ತಾವೇಜು ಹಾಳೆಗಳನ್ನು ಆದೇಶ ಸಂಖ್ಯೆ : ಕಂಇ 152 ಮುನೋಮು 2003, ದಿನಾಂಕ : 9–5–2003ರಂತೆ ಮುದ್ರಿಸಿ ಮಾರಾಟ ಮಾಡಲು ಅವಕಾಶ ನೀಡಿರುವಂತೆ ಸದರಿಯವರಿಗೂ ಸಹ ದಸ್ತಾವೇಜು ಹಾಳೆಗಳನ್ನು ಮುದ್ರಿಸಿ ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಹಾಗೂ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಮ್ಮ ಪತ್ರ ಸಂಖ್ಯೆ : ಎಸ್‌ಟಿಪಿ/171/08–09ರಲ್ಲಿ ದಸ್ತಾವೇಜು ಹಾಳೆಗಳ ಮುದ್ರಣ ಹಾಗೂ ಮಾರಾಟವನ್ನು ಸ್ಥಗಿತಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಆದ್ದರಿಂದ ತಮ್ಮ ಸಂಘಕ್ಕೆ ದಸ್ತಾವೇಜು ಹಾಳೆಗಳನ್ನು ಮುದ್ರಿಸಿ ಮಾರಾಟ ಮಾಡಲು ಅವಕಾಶವಿರುವುದಿಲ್ಲವೆಂದು ಹಿಂಬರಹ ನೀಡಲಾಗಿದೆ ಎಂದು ತಿಳಿಸುತ್ತಾ, ವಕೀಲರ ಕಕ್ಷಿದಾರರ ಮತ್ತು ಸಾರ್ವಜನಿಕರ ಹಾಗೂ ವಕೀಲ ವೃಂದದ ಹಿತದೃಷ್ಟಿಯಿಂದ ದಸ್ತಾವೇಜು ಹಾಳೆಗಳನ್ನು ಮುದ್ರಿಸಿ ಮಾರಾಟ ಮಾಡಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ರಿಟ್ ಅರ್ಜಿ ಸಂಖ್ಯೆ : 32491/2011ರ ಮೇಲಿನ ಗೌ. ಉಚ್ಚ ನ್ಯಾಯಾಲಯವು ತನ್ನ ದಿನಾಂಕ : 29–9–2011 ರ ತೀರ್ಪಿನಲ್ಲಿ ಬೆಂಗಳೂರು ವಕೀಲರ ಸಹಕಾರ ಸಂಘ ನಿಯಮಿತ ಇವರ ಮನವಿಯನ್ನು ಪರಿಗಣಿಸುವಂತೆ ಆದೇಶಿಸಿರುತ್ತದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಮೇಲೆ (3) ರಲ್ಲಿ ಓದಲಾದ ತಮ್ಮ ದಿನಾಂಕ : 25–11–2011ರ ಪತ್ರದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಹಕಾರ ಸಂಘವನ್ನು ಏಕೈಕ ಏಜೆಂಟರೆಂದು ನೇಮಿಸಿರುವುದು Indian contract Act 1872 ವ್ಯಾಪ್ತಿಗೆ ಬರುವುದರಿಂದ ಒಂದು ಕೆಲಸ ನಿರ್ವಹಿಸಲು ಒಂದು ಸಂಸ್ಥೆಯನ್ನು ಏಕೈಕ ಏಜೆಂಟರೆಂದು ನೇಮಿಸಿದ ಮೇಲೆ ಬೇರೆಯವರಿಗೆ ಅದೇ ಕೆಲಸವನ್ನು ವಹಿಸಲು ಅವಕಾಶವಿರುವುದಿಲ್ಲವೆಂದು, ನೇಮಿಸಿದ್ದಲ್ಲಿ ಒಪ್ಪಂದ ಉಲ್ಲಂಘನೆಯಾಗುವುದು ಮತ್ತು ಕಾನೂನು ಬಾಹಿರವಾಗಿ ಹಾಳೆಗಳನ್ನು ಮುದ್ರಿಸಿ ಮಾರಾಟ ಮಾಡಲು ಬೇರೆ ಸಂಘಕ್ಕೆ ಅನುಮತಿ ನೀಡಿದಲ್ಲಿ ಇತರೆ ಸಂಘಗಳ ಇದೇ ಬೇಡಿಕೆಯನ್ನು ಇಟ್ಟು ಗೊಂದಲ ಸೃಷ್ಟಿಯಾಗುವ ಸಂಭವವಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ದಸ್ತಾವೇಜು ಹಾಳೆಗಳನ್ನು ಮುದ್ರಿಸಲು ಈಗಾಗಲೇ ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖಾ ನೌಕರರ ವಿವಿಧೋದ್ದೇಶ ಸಹಕಾರ ಸಂಘವನ್ನು ಏಕೈಕ ಸರಬರಾಜು ಏಜೆಂಟ್ ಎಂದು ನೇಮಿಸಿರುವುದರಿಂದ ಬೆಂಗಳೂರು ವಕೀಲರ ಸಹಕಾರ ಸಂಘಕ್ಕೂ ದಸ್ತಾವೇಜು ಹಾಳೆಗಳನ್ನು ಮುದ್ರಿಸಲು ಅನುಮತಿ ನೀಡಿದರೆ ದಸ್ತಾವೇಜು ಹಾಳೆಗಳ ಮುದ್ರಣದಲ್ಲಿ ಗುಣಮಟ್ಟದಲ್ಲಿ ಏಕರೂಪತೆಯನ್ನು ಕಾಪಾಡುವಲ್ಲಿ ಹಾಗೂ ಲಾಂಛನ ಮುದ್ರಿಸುವಲ್ಲಿ ವ್ಯತ್ಯಾಸ ಕಂಡು ಬರುವ ಸಾಧ್ಯತೆ ಇರುವುದರಿಂದ ದಸ್ತಾವೇಜು ಹಾಳೆಗಳ ಮಾರಾಟಕ್ಕೆ ಮಾತ್ರ ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 182 ಮುನೋಮು 2011, ಬೆಂಗಳೂರು, ದಿನಾಂಕ : 10-4-2012.

ಬೆಂಗಳೂರು ವಕೀಲರ ಸಹಕಾರ ಸಂಘ ನಿಯಮಿತ ಇವರ ದಿನಾಂಕ : 9-2-2011ರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಷರತ್ತಿಗೊಳಪಟ್ಟು ದಸ್ತಾವೇಜು ಹಾಳೆಗಳನ್ನು ಮಾರಾಟ ಮಾಡಲು ಮಾತ್ರ ಅನುಮತಿ ನೀಡಲಾಗಿದೆ.

1. ಮುದ್ರಿತ ದಸ್ತಾವೇಜು ಹಾಳೆಗಳನ್ನು ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖಾ ನೌಕರರ ವಿವಿಧೋದ್ದೇಶ ಸಹಕಾರ ಸಂಘದಿಂದ ಸಂಗ್ರಹಿಸಿಕೊಳ್ಳತಕ್ಕದ್ದು/ಖರೀದಿಸತಕ್ಕದ್ದು.
2. ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖಾ ನೌಕರರ ವಿವಿಧೋದ್ದೇಶ ಸಹಕಾರ ಸಂಘವು ಬೆಂಗಳೂರು ವಕೀಲರ ಸಹಕಾರ ಸಂಘಕ್ಕೆ ಅವರ ಬೇಡಿಕೆಗೆ ಅನುಗುಣವಾಗಿ ದಸ್ತಾವೇಜು ಹಾಳೆಗಳನ್ನು ಪೂರೈಸತಕ್ಕದ್ದು.
3. ದಸ್ತಾವೇಜು ಹಾಳೆಯ ಮಾರಾಟ ದರ ಪ್ರತಿ ಹಾಳೆಗೆ ರೂ. 2-00 ಮೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1210 ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ).

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ. ಡಿ.ಎಸ್. ಚೈತ್ರಾ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಗುತ್ತಿ ಕುಮಟ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆ. ಇವರ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ-ಅಂತಿಮ ಆದೇಶ.

ಓದಲಾಗಿದೆ :

1. ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರ ನೋಟೀಸ್ ಸಂಖ್ಯೆ ಡಿಪಿಜಿ/ಬೆಂವಿ-/ಕಾ/8/08-09 ದಿನಾಂಕ : 25-1-2010.
2. ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರ ಆದೇಶ ಸಂಖ್ಯೆ : ಡಿಪಿಜಿ/ಬೆಂವಿ-2/ಕಾ/25/09-10, ದಿನಾಂಕ : 25-2-2011.
3. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ಸಂಖ್ಯೆ : ಮುಜಾಅ/ಜಾಕೋ/18/2010-11, ದಿನಾಂಕ : 30-7-2011.
4. ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಪಿಜಿ/ಬೆಂವಿ-/ಕಾ/25/09-10, ದಿನಾಂಕ : 4-1-2012.

ಪ್ರಸ್ತಾವನೆ :

ಡಾ|| ಡಿ.ಎಸ್. ಚೈತ್ರಾ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಇವರು ಸರ್ಕಾರಿ ಸೇವೆಗೆ ದಿನಾಂಕ : 23-1-2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ನಂತರ ದಿನಾಂಕ : 1-2-2009 ರಿಂದ ದಿನಾಂಕ : 30-6-2009 ರವರೆಗೆ ಅವರ ಹಕ್ಕಿನಲ್ಲಿ ರಜೆ ಇಲ್ಲದಿದ್ದರೂ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಿಯಾಗಿರುವುದರಿಂದ, ಕರ್ತವ್ಯಕ್ಕೆ ಹಿಂದಿರುಗುವಂತೆ ನೋಟೀಸ್ ನೀಡಲಾಗಿದ್ದರೂ ಸಹ ಯಾವುದೇ ಪ್ರತ್ಯುತ್ತರವನ್ನು ನೀಡದೆ ಸೇವೆಯಿಂದ ಉಳಿದುಕೊಂಡಿರುತ್ತಾರೆ.

ಡಾ|| ಡಿ.ಎಸ್. ಚೈತ್ರಾ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಇವರು ಸರ್ಕಾರಿ ಸೇವೆಗೆ ದಿನಾಂಕ : 23-1-2009 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ನಂತರ ದಿನಾಂಕ : 1-2-2009 ರಿಂದ ದಿನಾಂಕ : 30-6-2009 ರವರೆಗೆ ಅವರ ಹಕ್ಕಿನಲ್ಲಿ ರಜೆ ಇಲ್ಲದಿದ್ದರೂ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಾಗಿದ್ದು, ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲಿ ಇದ್ದು, ಅವರು ಹೊಂದಿದ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವಲ್ಲಿ ಅಸಮರ್ಥರಾಗಿರುವುದರಿಂದ ಮತ್ತು ಸೇವೆಯು ತೃಪ್ತಿಕರವಾಗಿಲ್ಲದಿರುವುದರಿಂದ

ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳ ನಿಯಮ 1977ರ ಉಪ ನಿಯಮ–6ರ ಮೇರೆಗೆ ಸರ್ಕಾರಿ ಸೇವೆಯಿಂದ ವಿಮುಕ್ತಿಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಡಾ॥ ಡಿ.ಎಸ್. ಚೈತ್ರಾ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಗುತ್ತಿ ಕುಮಟ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆ. ಇವರು ಒಬ್ಬ ಜವಾಬ್ದಾರಿಯುತ ಪತ್ರಾಂಕಿತ ಅಧಿಕಾರಿಯಾಗಿದ್ದು, ಕಾರಣ ನೀಡದೆ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ, ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಹಾಗೂ ಇವರ ಹಕ್ಕಿನಲ್ಲಿ ರಜೆ ಇಲ್ಲದಿದ್ದರೂ ನೋಟೀಸ್‌ಗೆ ಸ್ಪಂದಿಸದೆ. ಸರ್ಕಾರಿ ಸೇವೆಗೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ. ಇವರ ಸೇವಾ ವಿವರವನ್ನು ಪರಿಶೀಲಿಸಲಾಗಿದ್ದು. ಸದರಿ ಅಧಿಕಾರಿಯ ಖಾಯಂಪೂರ್ವ ಸೇವಾವಧಿ ಘೋಷಣೆಯಾಗಿರುವುದಿಲ್ಲ. ಇವರು ಖಾಯಂ ಪೂರ್ವ ಸೇವಾವಧಿಯಲ್ಲಿ ಸರ್ಕಾರಿ ನೌಕರರಿಗೆ ತಕ್ಕದ್ದಲ್ಲದ ರೀತಿಯಲ್ಲಿ ವರ್ತಿಸಿರುವುದು ದಾಖಲಾತಿಗಳಿಂದ ದೃಢಪಡುತ್ತದೆ. ಆದ್ದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳ ನಿಯಮ 1977ರ ಉಪ ನಿಯಮ–6(1)(2) ರ ಮೇರೆಗೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 39 ಎಂಎಸ್‌ಎ 2012, ಬೆಂಗಳೂರು, ದಿನಾಂಕ : 30–3–2012.

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಸರ್ಕಾರವು ಡಾ॥ ಡಿ.ಎಸ್. ಚೈತ್ರಾ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಗುತ್ತಿ ಕುಮಟ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆ. ಇವರು ಖಾಯಂಪೂರ್ವ ಸೇವಾವಧಿಯಲ್ಲಿ ಸರ್ಕಾರಿ ನೌಕರರಿಗೆ ತಕ್ಕದ್ದಲ್ಲದ ರೀತಿಯಲ್ಲಿ ವರ್ತಿಸಿ, ಕರ್ತವ್ಯಚ್ಯುತಿ ಎಸಗಿರುವುದರಿಂದ, ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ), ನಿಯಮಾವಳಿಗಳು 1977ರ ನಿಯಮ–6(1)(2) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಫ್. ಹುಬ್ಬಳ್ಳಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1216

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ನಅಇ 45 ಮೈಅಪ್ರಾ 2011, ಬೆಂಗಳೂರು, ದಿನಾಂಕ : 11–4–2012

ಸರ್ಕಾರದ ಆದೇಶ ಸಂಖ್ಯೆ : ನಅಇ 45 ಮೈಅಪ್ರಾ 2011, ದಿನಾಂಕ : 29–6–2011 ರಲ್ಲಿನ ಆದೇಶದ ಭಾಗದಲ್ಲಿ "ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ ಬೇಲೂರು–ಹಳೇಬೀಡು ಪಟ್ಟಣದ ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನು ಒಟ್ಟಾಗಿ ಸೇರಿಸಿ 8133.85 ಹೆಕ್ಟೇರ್ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಕಾರಣಗಳಿಂದ ಹಾಸನ ಜಿಲ್ಲೆ ಚನ್ನರಾಯಪಟ್ಟಣ ಯೋಜನಾ ಪ್ರದೇಶಕ್ಕೆ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4–ಎ(3) ರನ್ವಯ ಬೇಲೂರು–ಹಳೇಬೀಡು ಪಟ್ಟಣ ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನೊಳಗೊಂಡಂತೆ ಅನುಬಂಧ–1 ಹಾಗೂ ಅನುಬಂಧ–2 ರಲ್ಲಿ ತೋರಿಸಿದಂತೆ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ" ಎಂಬುದರ ಬದಲಾಗಿ

"ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ ಬೇಲೂರು–ಹಳೇಬೀಡು ಪಟ್ಟಣದ ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನು ಒಟ್ಟಾಗಿ ಸೇರಿಸಿ 8133.85 ಹೆಕ್ಟೇರ್ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4–ಎ(3) ರನ್ವಯ ಬೇಲೂರು–ಹಳೇಬೀಡು ಪಟ್ಟಣ ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನೊಳಗೊಂಡಂತೆ ಅನುಬಂಧ–1 ಹಾಗೂ ಅನುಬಂಧ–2 ರಲ್ಲಿ ತೋರಿಸಿದಂತೆ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು ಅನುಬಂಧ–1 ರಲ್ಲಿ ಕ್ರ.ಸಂ. 27 ರಲ್ಲಿ ತಲಗೇರಿನ್ನಾಪುರದಿಂದ ಕ್ರ.ಸಂ. 35 ರಲ್ಲಿ ಸೋಮಾಪುರ (ಕಸಬಾ) ಎಂಬುದರ ಬದಲಾಗಿ

ಕ್ರ.ಸಂ. 27 (ಆತಲಗೇರಿ (28) ಚನ್ನಾಪುರ (29) ಗೊಟ್ರವಳ್ಳಿ (3) ಕೆಲ್ಲೂರು (31) ಸುರಾಪುರ (32) ನಿಡಗೋಡು (33) ಬಂಟೇನಹಳ್ಳಿ (34) ಕಲ್ಲಹಳ್ಳಿ ಎ.ಎಂ.ಕಾವಲು (35) ಚೀಲನಾಯಕನಹಳ್ಳಿ (36) ಸೋಮಪುರ (ಕಸಬಾ) ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎಂ. ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 1217

ವಸತಿ ಸಚಿವಾಲಯ

ವಿಷಯ : ಕರ್ನಾಟಕ ಗೃಹ ಮಂಡಳಿಯು ಖಾಸಗಿ ಸಹಭಾಗಿತ್ವದಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಲು ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ : ಆಯುಕ್ತರು, ಕರ್ನಾಟಕ ಗೃಹ ಮಂಡಳಿರವರ ಕಛೇರಿಯ ಪತ್ರ ಸಂಖ್ಯೆ : ಕಗೃಮಂ/ಅನಿ(ನಯೋ)/114/2011–12, ದಿನಾಂಕ : 13–3–2012.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯ ಆಯುಕ್ತರು ಪ್ರಸ್ತಾವನೆ ಸಲ್ಲಿಸುತ್ತಾ, ಕರ್ನಾಟಕ ಗೃಹ ಮಂಡಳಿಯು 2011–12ನೇ ಸಾಲಿನಲ್ಲಿ ಹೊಸ ಯೋಜನೆಗಳಡಿಯಲ್ಲಿ ಸರ್ಕಾರದ ಅನುಮೋದನೆ ಕೋರಿ, ದಿನಾಂಕ : 3–2–2012ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ದಿನಾಂಕ : 14–2–2012ರ ಮಂಡಳಿ ಸಭೆ ವಿಷಯ ಸಂಖ್ಯೆ : 439 ರಲ್ಲಿ ಕರ್ನಾಟಕ ಗೃಹ ಮಂಡಳಿಯು ಇನ್ನು ಮುಂದೆ ಕೈಗೊಳ್ಳುವ ವಾಣಿಜ್ಯ ಸಂಕೀರ್ಣಗಳ ಯೋಜನೆಗಳನ್ನು ಸಹಭಾಗಿತ್ವದಲ್ಲಿ (ಪಿ.ಪಿ.ಪಿ) ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುವುದಾಗಿ ಇದರಿಂದಾಗಿ ಮಂಡಳಿಯ ಮೇಲೆ ಯಾವುದೇ ರೀತಿಯ ಅನಗತ್ಯದ ಆರ್ಥಿಕ ಹೊರೆ ಉಂಟಾಗುವುದಿಲ್ಲವೆಂದು ತಿಳಿಸಿದ್ದಾರೆ. ಸರ್ಕಾರಿ ಆದೇಶ ಸಂಖ್ಯೆ : ವಇ 161 ಯುಹೆಚ್‌ಎಸ್ 2011, ದಿನಾಂಕ : 17–2–2012 ರಲ್ಲಿ ವಸತಿ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇಲಾಖೆಗಳ ಸಹಭಾಗಿತ್ವ ಯೋಜನೆಗಳ ಸೂಕ್ತ ಸೂಕ್ತತೆಯ ಬಗ್ಗೆ ಮಾರ್ಗದರ್ಶನ ನೀಡಲು ವಸತಿ ಇಲಾಖೆಯಿಂದ ಆರು ಸಂಸ್ಥೆಗಳನ್ನು ಟ್ರಾನ್ಸಾಕ್ಷನ್ ಅಡ್ವೈಸರ್ಸ್‌ಗಳನ್ನಾಗಿ ನೇಮಕಾತಿ ಮಾಡಲಾಗಿದ್ದು, ಸದರಿ ಟ್ರಾನ್ಸಾಕ್ಷನ್ ಅಡ್ವೈಸರ್ಸ್‌ಗಳ ಸಲಹೆ ಹಾಗೂ ಸಹಕಾರ ಪಡೆದು ವಾಣಿಜ್ಯ/ವಸತಿ ಸಂಕೀರ್ಣಗಳನ್ನು ಸಹಭಾಗಿತ್ವದಲ್ಲಿ ತೆಗೆದುಕೊಳ್ಳಲು ಆದೇಶಿಸಲಾಗಿರುತ್ತದೆ. ಅದರಂತೆ, ಈ ಕೆಳಕಂಡ ಐದು ಸ್ಥಳಗಳಲ್ಲಿ ಅಂದರೆ :–

1. ಸೂರ್ಯನಗರ 1ನೇ ಹಂತ (ನಿವೇಶನ ಸಂಖ್ಯೆ : 950)–3628.37 ಚ.ಮೀ.
2. ಸೂರ್ಯನಗರ 1ನೇ ಹಂತ (ನಿವೇಶನ ಸಂಖ್ಯೆ : 109)–1470.00 ಚ.ಮೀ.
3. ಯಲಹಂಕ, ಬೆಂಗಳೂರು (ಮಲ್ಟಿಪ್ಲೆಕ್ಸ್ ಸಹಿತ)–4970.00 ಚ.ಮೀ.
4. ಕೆಂಗೇರಿ–ವಳಗೆರೆಹಳ್ಳಿ, ಬೆಂಗಳೂರು (ಮಲ್ಟಿಪ್ಲೆಕ್ಸ್ ಸಹಿತ)–12000 ಚ.ಮೀ.
5. ಹಳೆಯ ವಿಮಾನ ನಿಲ್ದಾಣ ಪ್ರದೇಶ ಬಡಾವಣೆ, ಗುಲ್ಬರ್ಗಾ (ಮಲ್ಟಿಪ್ಲೆಕ್ಸ್ ಸಹಿತ)–6000 ಚ.ಮೀ.

ವಾಣಿಜ್ಯ ಸಂಕೀರ್ಣಗಳನ್ನು ಕರ್ನಾಟಕ ಗೃಹ ಮಂಡಳಿಯು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 2012–13ನೇ ಸಾಲಿನಲ್ಲಿ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡುವಂತೆ ಮಂಡಳಿಯ ಆಯುಕ್ತರು ಕೋರಿರುತ್ತಾರೆ.

ಆಯುಕ್ತರು, ಕರ್ನಾಟಕ ಗೃಹ ಮಂಡಳಿರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಈ ಕೆಳಕಂಡಂತೆ ಆದೇಶಿಸಲು ನಿರ್ಣಯಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ವಇ 88 ಕಗೃಮಂ 2012, ಬೆಂಗಳೂರು, ದಿನಾಂಕ : 10–4–2012.

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಕರ್ನಾಟಕ ಗೃಹ ಮಂಡಳಿಯು 2012–13ನೇ ಸಾಲಿಗೆ ಈ ಕೆಳಕಂಡ ನಾಲ್ಕು ಪ್ರದೇಶಗಳಲ್ಲಿ ಆ ಸ್ಥಳಗಳ ಮುಂದೆ ತಿಳಿಸಲಾದ ವಿಸ್ತೀರ್ಣದ ಅಳತೆಯ ವಾಣಿಜ್ಯ ಸಂಕೀರ್ಣಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ) ಟ್ರಾನ್ಸಾಕ್ಷನ್ ಅಡ್ವೈಸರ್ಸ್‌ಗಳ ಸಲಹೆ ಪಡೆದು ಟೆಂಡರ್ ಕರೆಯಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಯೋಜನೆ ಕೈಗೊಳ್ಳುವಾಗ ಅನುಸರಿಸಬೇಕಾದ ವಿಧಾನಗಳು ಹಾಗೂ ನಿಯಮಗಳನ್ನು ಮಂಡಳಿಯು ಪಾಲಿಸಬೇಕು ಎಂಬ ಷರತ್ತಿನೊಡನೆ ಈ ಆದೇಶ ಹೊರಡಿಸಿದೆ.

1. ಸೂರ್ಯನಗರ 1ನೇ ಹಂತ (ನಿವೇಶನ ಸಂಖ್ಯೆ : 950)–3628.37 ಚ.ಮೀ.
2. ಸೂರ್ಯನಗರ 1ನೇ ಹಂತ (ನಿವೇಶನ ಸಂಖ್ಯೆ : 109)–1470.00 ಚ.ಮೀ.
3. ಕೆಂಗೇರಿ–ವಳಗೆರೆಹಳ್ಳಿ, ಬೆಂಗಳೂರು (ಮಲ್ಟಿಪ್ಲೆಕ್ಸ್ ಸಹಿತ)–12000 ಚ.ಮೀ.
4. ಹಳೆಯ ವಿಮಾನ ನಿಲ್ದಾಣ ಪ್ರದೇಶ ಬಡಾವಣೆ, ಗುಲ್ಬರ್ಗಾ (ಮಲ್ಟಿಪ್ಲೆಕ್ಸ್ ಸಹಿತ)–6000 ಚ.ಮೀ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಪಾರ್ವತಿ

ಪೀಠಾಧಿಕಾರಿ–3,

ವಸತಿ ಇಲಾಖೆ.

ಪಿ.ಆರ್. 1225

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ದಿವಂಗತ ಮಂಜುನಾಥಪ್ಪ, ಅರಣ್ಯ ರಕ್ಷಕ, ಉಂಬ್ಳೇಬೈಲು ವಲಯ ಇವರ ಕುಟುಂಬವರ್ಗದವರಿಗೆ ಅಸಾಧಾರಣ ಕುಟುಂಬ ಪಿಂಚಣಿ ಮಂಜೂರು ಮಾಡುವ ಬಗ್ಗೆ ಆದೇಶ.

ಓದಲಾಗಿದೆ : ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಇವರ ಪತ್ರ ಸಂಖ್ಯೆ : ಬಿ3/ಸಿಬ್ಬಂದಿ/ಸಿಆರ್–87/2011–12, ದಿನಾಂಕ : 31–12–11

ಪ್ರಸ್ತಾವನೆ :

ದಿವಂಗತ ಮಂಜುನಾಥಪ್ಪ, ಅರಣ್ಯ ರಕ್ಷಕ, ಉಂಬ್ಳೇಬೈಲು ವಲಯ, ಶಿವಮೊಗ್ಗ ವೃತ್ತ ಇವರು ಉಂಬ್ಳೇಬೈಲು ವಲಯದ ಹುರಳಿಹಳ್ಳಿ ಗಸ್ತಿನಲ್ಲಿ ದಿನಾಂಕ : 7–6–2010 ರಂದು ಕಾರ್ಯನಿರ್ವಹಿಸುತ್ತಿದ್ದಾಗ, ಹುರಳಿಹಳ್ಳಿ ಸರ್ವೆ ನಂ. 39 ರ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಲು ಮರಗಿಡಗಳನ್ನು ಕಡಿತಲೆ ಮಾಡಿ ಪರಾರಿಯಾಗುತ್ತಿದ್ದ ದುಷ್ಕರ್ಮಿಗಳನ್ನು ಹಿಡಿಯಲು ಇವರು ಬೈಕಿನಲ್ಲಿ ಬೆನ್ನಟ್ಟಿದ ಸಮಯದಲ್ಲಿ ಎದುರುಗಡೆಯಿಂದ ಬಂದ ಲಾರಿಯು ಡಿಕ್ಕಿ ಹೊಡೆದು ಅಪಘಾತವಾದ ಪರಿಣಾಮವಾಗಿ ಮಂಜುನಾಥಪ್ಪನವರು ಸ್ಥಳದಲ್ಲಿಯೇ ಮೃತಹೊಂದಿದ್ದು. ಇವರ ಕುಟುಂಬಕ್ಕೆ ಕರ್ನಾಟಕ ನಾಗರೀಕ ಸೇವಾ (ಅಸಾಧಾರಣ ನಿವೃತ್ತಿ ವೇತನ) ನಿಯಮಗಳು 2003 ರ ನಿಯಮ 9(1) ರಂತೆ ಮರಣ ದಿನಾಂಕದಂದು ಇದ್ದ ವೇತನದ ಶೇಕಡ 75 ರಷ್ಟು ಕುಟುಂಬ ಪಿಂಚಣಿ ಮತ್ತು ನಿಯಮ 9(2) ರಂತೆ 12 ತಿಂಗಳ ಸಂಬಳಕ್ಕೆ ಸಮನಾದ ಇಡುಗಂಟು ಪರಿಹಾರವನ್ನು ಮಂಜೂರು ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸ್ತಾವನೆಯನ್ನು, ಸರ್ಕಾರವು ಪರಿಗಣಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಅಪಜೀ 044 ಅಅಸೇ 2012, ಬೆಂಗಳೂರು, ದಿನಾಂಕ : 9–4–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ದಿವಂಗತ ಮಂಜುನಾಥಪ್ಪ, ಅರಣ್ಯ ರಕ್ಷಕ, ಉಂಬ್ಳೇಬೈಲು ವಲಯ, ಶಿವಮೊಗ್ಗ ವೃತ್ತ ಇವರ ಕುಟುಂಬಕ್ಕೆ ಕರ್ನಾಟಕ ನಾಗರೀಕ ಸೇವಾ (ಅಸಾಧಾರಣ ನಿವೃತ್ತಿ ವೇತನ) ನಿಯಮಗಳು, 2003 ರ ನಿಯಮ 9(1) ರಂತೆ ಮಂಜುನಾಥಪ್ಪನವರು ಮರಣದ ದಿನವಾದ ದಿನಾಂಕ : 7–6–2010 ರಂದು ಪಡೆಯುತ್ತಿದ್ದ ವೇತನ ರೂ. 7800–00ಗಳ ಶೇಕಡ 75 ರಷ್ಟು ಮೊತ್ತವಾದ ರೂ. 5850–00 ಗಳನ್ನು ದಿನಾಂಕ : 8–6–2010 ರಿಂದ ಅನ್ವಯವಾಗುವಂತೆ ಅಸಾಧಾರಣ ಕುಟುಂಬ ಪಿಂಚಣಿಯನ್ನು ಮತ್ತು ನಿಯಮ 9(2) ರಂತೆ 12 ತಿಂಗಳ ಸಂಬಳಕ್ಕೆ ಸಮನಾದ (Pay Rs. 7800+DA Rs. 3588+HRA Rs. 390X12) ಇಡುಗಂಟು ರೂ. 141336–00ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಿದೆ.

ಸರ್ಕಾರದ ಆದೇಶ ಸಂಖ್ಯೆ : FD 1 TFP 96, dated : 10–7–1996 ರಲ್ಲಿ ತಿಳಿಸಿರುವಂತೆ, ಆರ್ಥಿಕ ಇಲಾಖೆಯು ಸಹಮತ ನೀಡಿದೆ ಎಂದು ಪರಿಭಾವಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 1226

ಕಂದಾಯ ಸಚಿವಾಲಯ

ವಿಷಯ: ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್, ಹಿಂದಿನ ತಹಶೀಲ್ದಾರ್, ಗುಲ್ಬರ್ಗಾ (ಉತ್ತರ), ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು ಆದೇಶ.

ಓದಲಾಗಿದೆ: 1) ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ, ಇವರ ಅ.ಸ.ಪತ್ರ ಸಂಖ್ಯೆ:ಕಂ:ಪ್ರಾಆಗು:ಸಿಬ್ಬಂದಿ:230:2009–10,ದಿನಾಂಕ:22/03/2010.

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಆರ್‌ಡಿ 260 ಎಎಸ್‌ಡಿ 2010, ದಿನಾಂಕ:29/05/2010.

3) ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್,ಹಿಂದಿನ ತಹಶೀಲ್ದಾರ್, ಅವರ ಲಿಖಿತ ಹೇಳಿಕೆ ದಿನಾಂಕ:08/06/2010.

4) ಪತ್ರ ಸಂಖ್ಯೆ:ಕಂ/ಪ್ರಾಆಗು/ಶಿಸ್ತು/18/2009–10, ದಿನಾಂಕ:15/12/2010.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:22/03/2010ರ ಅರೆ ಸರ್ಕಾರಿ ಪತ್ರದಲ್ಲಿ, ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್, ವಿಶೇಷ ತಹಶೀಲ್ದಾರ್, ಗುಲ್ಬರ್ಗಾ (ಉತ್ತರ) ಇವರಿಗೆ ಪ್ರವಾಹ ಪೀಡಿತ ರಾಯಚೂರು ಜಿಲ್ಲೆಗೆ ಪುನರ್ವಸತಿ ಕಲ್ಪಿಸಲು, ಭೂಮಿ ಖರೀದಿಸುವುದು / ಭೂಸ್ವಾಧೀನ ಇತ್ಯಾದಿ ಕೆಲಸ ಮತ್ತು ಪರಿಹಾರ ಕಾರ್ಯಗಳನ್ನು ತ್ವರಿತಗೊಳಿಸಲು ಮೇಲ್ವಿಚಾರಣೆ ವಹಿಸಿ, ರಾಯಚೂರು ಜಿಲ್ಲೆಗೆ ರೀಡಿಪ್ಲಾಯ್‌ಮೆಂಟ್ ಮಾಡಿ ಆದೇಶಿಸಲಾಗಿರುತ್ತದೆ. ಜಿಲ್ಲಾಧಿಕಾರಿ, ರಾಯಚೂರು ಅವರು ದಿನಾಂಕ: 14/11/2009ರ ಆದೇಶದಲ್ಲಿ ಶ್ರೀಮತಿ ವಿ.ಶಶಿಕಲಾ, ತಹಶೀಲ್ದಾರ್ ಇವರಿಗೆ ಹೆಚ್ಚುವರಿಯಾಗಿ ದೇವದುರ್ಗ ತಹಶೀಲ್ದಾರ್ ಕರ್ತವ್ಯವನ್ನು ನಿರ್ವಹಿಸಲು ಆದೇಶಿಸಲಾಗಿದ್ದು, ಸದರಿ ಅಧಿಕಾರಿಯವರು ಅನಾರೋಗ್ಯದ ನಿಮಿತ್ತ ರಜೆಯ ಮೇಲೆ ತೆರಳಿದ್ದರಿಂದ ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್, ಅವರನ್ನು, ದೇವದುರ್ಗ ತಹಶೀಲ್ದಾರ್ ಹುದ್ದೆಯ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿತ್ತು. ಆದರೆ, ಸದರಿ ಅಧಿಕಾರಿಯು ದಿನಾಂಕ:25/01/2010 ರಂದು ಅರ್ಜಿ ಸಲ್ಲಿಸಿ, ದಿನಾಂಕ:28/01/2010 ರಿಂದ 06/02/2010ರ ವರೆಗೆ ರಜೆಯ ಮೇಲೆ ತೆರಳಿರುವುದಾಗಿ ತಿಳಿಸಿರುತ್ತಾರೆ. ಇದರಿಂದ ದೇವದುರ್ಗ ತಾಲ್ಲೂಕಿನ ನೆರೆ ಪರಿಹಾರ ಚೆಕ್ಕುಗಳ ವಿತರಣೆ ಕೆಲಸವು ಬಾಕಿ ಉಳಿದಿರುವುದಾಗಿ ತಿಳಿಸಿದ್ದು, ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್ ಅವರು ತಹಶೀಲ್ದಾರ್ ಕರ್ತವ್ಯಗಳನ್ನು ನಿರ್ವಹಿಸದೇ ಮತ್ತು ಮೇಲಾಧಿಕಾರಿಯ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನ ಬಿಟ್ಟು ಅನಧಿಕೃತವಾಗಿ ಸರ್ಕಾರದ ಕೆಲಸಕ್ಕೆ ಗೈರುಹಾಜರಾಗಿರುವುದರಿಂದ, ಅವರ ಗೈರು ಹಾಜರಿ ಅವಧಿಯನ್ನು ಜಿಲ್ಲಾಧಿಕಾರಿ, ರಾಯಚೂರು ಅವರು ಅನಧಿಕೃತ ಗೈರು ಹಾಜರಿ ಅವಧಿಯೆಂದು ಪರಿಗಣಿಸುವಂತೆ ಕೋರಲಾಗಿರುವ ಹಿನ್ನೆಲೆಯಲ್ಲಿ, ಸದರಿಯವರು ದಿನಾಂಕ:27/01/ 2010 ರಿಂದ ಅನಧಿಕೃತ ಗೈರುಹಾಜರಾಗಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೂ ಗೈರು ಹಾಜರಿ ಅವಧಿಯನ್ನು ಅನಧಿಕೃತ ಗೈರುಹಾಜರಿ ಎಂದು ಪರಿಗಣಿಸುವಂತೆ ಕೋರಿರುತ್ತಾರೆ.

ಆ ಹಿನ್ನಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:29/05/2010 ರಲ್ಲಿ, ಶ್ರೀ ಡಿ.ಪಿ. ಪ್ರಾಣೇಶ್ ಕುಮಾರ್ ಅವರಿಗೆ ಕಾರಣ ಕೇಳುವ ನೋಟೀಸ್ ಅನ್ನು ಜಾರಿಗೊಳಿಸಲಾಗಿರುತ್ತದೆ. ಸದರಿಯವರು ಇದಕ್ಕೆ ಉತ್ತರವಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ, ಶ್ರೀಯುತರನ್ನು ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 586 ಎಎಸ್‌ಡಿ 2009, ದಿನಾಂಕ:14/10/2009ರನ್ವಯ ರಾಯಚೂರು ಜಿಲ್ಲೆಗೆ ಪುರ್ನವಸತಿ/ಭೂಮಿ ಖರೀದಿಸುವ ಬಗ್ಗೆ ಕಾರ್ಯವನ್ನು ನಿರ್ವಹಿಸಲು ರೀಡಿಪ್ಲಾಯ್‌ಮೆಂಟ್ ಮಾಡಿ ನೇಮಿಸಿ ಆದೇಶಿಸಿರುವಂತೆ ದಿನಾಂಕ:23/10/2009ರಂದು ರಾಯಚೂರು ಜಿಲ್ಲಾಧಿಕಾರಿ ಅವರ ಮುಂದೆ ಕರ್ತವ್ಯಕ್ಕೆ ಹಾಜರಾಗಿದ್ದು, ದಿನಾಂಕ:23/10/2009ರಿಂದ ದಿನಾಂಕ:15/11/2009ರ ವರೆಗೆ ಪುನರ್ವಸತಿಗೆ ಬೇಕಾಗಿರುವ ಜಮೀನುಗಳನ್ನು ಖರೀದಿಸುವ ಕಾರ್ಯಗಳನ್ನು ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ನಂತರ, ಜಿಲ್ಲಾಧಿಕಾರಿ, ರಾಯಚೂರು ಅವರು ದಿನಾಂಕ:14/11/2009ರ ಆದೇಶದಲ್ಲಿ ದೇವದುರ್ಗ ತಾಲ್ಲೂಕಿನ ತಹಶೀಲ್ದಾರ್ ಆಗಿ ನೇಮಿಸಿದ್ದು, ಅದರಂತೆ ದಿನಾಂಕ:16/11/2009ರಂದು ಕರ್ತವ್ಯಕ್ಕೆ ಹಾಜರಾಗಿದ್ದು ನಿಷ್ಠೆಯಿಂದ ಸರ್ಕಾರದ ಕಾರ್ಯವನ್ನು ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ಈ ಮಧ್ಯೆ ಅವರ ಮಗನ ಆರೋಗ್ಯ ಸರಿಯಿಲ್ಲದೇ ಇದ್ದುದರಿಂದ ಹಾಗೂ ಅವನಿಗೆ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡಿಸಬೇಕಾದ ಪ್ರಸಂಗ ಇದ್ದುದರಿಂದ, ಆಸ್ಪತ್ರೆಯಲ್ಲಿ ಅವರ ಅವಶ್ಯಕತೆ ಹೆಚ್ಚಾಗಿದ್ದು ಹಾಗೂ ಅವರಿಗೂ ಸಹ ರಕ್ತದ ಒತ್ತಡ ಹೆಚ್ಚಾಗಿ ಕಾರ್ಯನಿರ್ವಹಿಸಲು ಬಹಳ ತೊಂದರೆಯಾಗಿದ್ದ ಕಾರಣ, ದಿನಾಂಕ:25/01/2010ರಂದು ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ಸದರಿ ವಿಚಾರದ ಬಗ್ಗೆ ತಿಳಿಸಿ, ದಿನಾಂಕ:28/10/2010 ರಿಂದ ದಿನಾಂಕ:06/02/2010ರ ವರೆಗೆ ರಜೆಗಾಗಿ ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಜಿಲ್ಲಾಧಿಕಾರಿಯವರು ರಜೆಯ ಮೇಲೆ ತೆರಳಲು ಅನುಮತಿಯನ್ನು ನೀಡಿದ ನಂತರದಲ್ಲಿ ದಿನಾಂಕ:29/01/2010ರಂದು ದೇವದುರ್ಗ ತಾಲ್ಲೂಕಿನ ತಾಲ್ಲೂಕು ಶಿರಸ್ತೇದಾರರನ್ನು ಪ್ರಭಾರ ವಹಿಸಿಕೊಳ್ಳುವಂತೆ ಆದೇಶ ನೀಡಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, ಮೇಲಾಧಿಕಾರಿ ಪೂರ್ವಾನುಮತಿ ಪಡೆಯದೆ ಕರ್ತವ್ಯಕ್ಕೆ ಗೈರು ಹಾಜರಾಗಿರುವುದಿಲ್ಲ ಮತ್ತು ಬೇಜವಾಬ್ದಾರಿಯಾಗಿ ವರ್ತಿಸಿರುವುದಿಲ್ಲವೆಂದು ಅವರ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸದರಿಯವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸುವ ಬಗ್ಗೆ ದೋಷಾರೋಪಣ ಪಟ್ಟಿಯನ್ನು ಅನುಬಂಧ 1 ರಿಂದ 4ರ ವರೆಗೆ ತಯಾರಿಸಿ ಕೂಡಲೇ ಸರ್ಕಾರಕ್ಕೆ ಕಳುಹಿಸುವಂತೆ ದಿನಾಂಕ:04/10/2010ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು ಗುಲ್ಬರ್ಗಾ ಇವರನ್ನು ಕೋರಲಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ, ಶ್ರೀ ಪ್ರಾಣೇಶ್ ಕುಮಾರ್ ತಹಶೀಲ್ದಾರ್ ವಿರುದ್ಧ ಆರೋಪ ಪಟ್ಟಿಗಳನ್ನು ತಯಾರಿಸಿ ಕಳುಹಿಸಿರುತ್ತಾರೆ. ಅದರನ್ವಯ ಸದರಿ ದೋಷಾರೋಪಣ ಪಟ್ಟಿಯನ್ನು ದಿನಾಂಕ:19/02/2011ರ ಪತ್ರದಲ್ಲಿ, ಸದರಿಯಯವರಿಗೆ ಕಾರಣ ಕೇಳುವ ನೋಟೀಸ್ ಅನ್ನು ಜಾರಿ ಮಾಡಿದ್ದು, ಶ್ರೀಯುತರು ದಿನಾಂಕ:10/02/2011ರಂದು ಅವರ ಲಿಖಿತ ಸಮಜಾಯಿಷಿಯನ್ನು ನೀಡಿ ಅವರನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಆದುದರಿಂದ, ದೋಷಾರೋಪಣೆಗಳಲ್ಲಿ ವಿವರಿಸಿರುವ ಆಪಾದನೆಗಳನ್ನು ನಿರಾಕರಿಸಿರುವುದರಿಂದ ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ಪರಿಶೀಲಿಸಲು ವಿಚಾರಣೆ ನಡೆಸುವುದು ಅವಶ್ಯವಾಗಿದ್ದು, ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್.ಎಸ್.ಪಾಟೀಲ್, ಬಿಜಾಪುರ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಅರ್‌ಡಿ 26 ಎಡಿಇ 2011, ಬೆಂಗಳೂರು, ದಿನಾಂಕ:12/04/2012.

ಪ್ರಸ್ತಾವನೆಯಲ್ಲಿ, ವಿವರಿಸಿರುವ ಕಾರಣಗಳಿಂದಾಗಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಶ್ರೀ ಡಿ.ಪಿ.ಪ್ರಾಣೇಶ್‌ಕುಮಾರ್, ಹಿಂದಿನ ತಹಶೀಲ್ದಾರರು, ದೇವದುರ್ಗ, ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್.ಎಸ್.ಪಾಟೀಲ್, ಬಿಜಾಪುರ ಅವರನ್ನು

ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ದೇವದುರ್ಗ ತಾಲ್ಲೂಕಿನ ತಹಶೀಲ್ದಾರರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿ ಅವರು, ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿ, ಬಿಜಾಪುರ ಇವರ ಕಛೇರಿ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗಧಿ ಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು, ಈ ಉದ್ದೇಶಕ್ಕಾಗಿ ವಿಚಾರಣಾಧಿಕಾರಿಗಳಿಗೆ ಲಭ್ಯವಿರುವ ಕಛೇರಿಯಲ್ಲಿ ಸ್ಥಳಾವಕಾಶವನ್ನು ಒದಗಿಸುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ / ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಾಗ್ರಿಗಳನ್ನು ಜಿಲ್ಲಾಧಿಕಾರಿ, ಬಿಜಾಪುರ ಅವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 06 ಸೇಇವಿ 2010, ಬೆಂಗಳೂರು, ದಿನಾಂಕ:28.04.2011 ರನ್ವಯ ರೂ.15,000/– (ಹದಿನೈದು ಸಾವಿರ ರೂಪಾಯಿಗಳು) ಮಾತ್ರ ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ) ಮಂಡನಾಧಿಕಾರಿಗೆ ವಿಚಾರಣೆಯ ದಿನವೊಂದಕ್ಕೆ ರೂ.400/–(ನಾಲ್ಕುನೂರು) ಸಂಭಾವನೆಯನ್ನು ಜಿಲ್ಲಾಧಿಕಾರಿ, ಬಿಜಾಪುರ ಅವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿ ಇಲಾಖಾ ವಿಚಾರಣೆಯನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ಮತ್ತು 11(ಎ)ರಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ, ವಿಚಾರಣಾ ವರದಿಯನ್ನು ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1241

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ನಿರಂಜನೇಗೌಡ, ಪಿ.ಎಸ್.ಐ., ಕೃಷ್ಣರಾಜ ಪೊಲೀಸ್ ಠಾಣೆ, ಮೈಸೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಉಪ ಪೊಲೀಸ್ ಆಯುಕ್ತರು, ಕೇಂದ್ರ ಸ್ಥಾನ, ಮೈಸೂರು, ಇವರ ಆದೇಶ ಸಂಖ್ಯೆ: ಶಿಕ್ಷೆ/202/2008–09 (ಓ.ಬಿ. ಸಂಖ್ಯೆ: 13/2009–10) ದಿನಾಂಕ: 23–04–2009

2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ, ಇವರ ಆದೇಶ ಸಂಖ್ಯೆ: ಮೇಲ್ಮನವಿ/15(ಎ)2009–10 (ಓ.ಬಿ. ಸಂಖ್ಯೆ: 35/2011–12) ದಿನಾಂಕ: 03–5–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 09–7–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)30/ 2011–12 ದಿನಾಂಕ: 30–01–2012

ಪ್ರಸ್ತಾವನೆ:

ಶ್ರೀ ನಿರಂಜನೇಗೌಡ, ಇವರು ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯ ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ದ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ಕುವೆಂಪುನಗರ ಠಾಣೆಯಲ್ಲಿ ಸರಗಳ್ಳತನ ತಡೆ ಮತ್ತು ಪತ್ತೆ ಕಾರ್ಯದಲ್ಲಿ ಕರ್ತವ್ಯ ನಿರ್ಲಕ್ಷತೆ ತೋರಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಉಪ ಪೊಲೀಸ್ ಆಯುಕ್ತರು, ಕೇಂದ್ರ ಸ್ಥಾನ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 23-4-2009ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ 6 ತಿಂಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 03-5-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ನಿರ್ಲಕ್ಷತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 80 ಪೊಸಿಅ 2011 ಬೆಂಗಳೂರು, ದಿನಾಂಕ: 02-5-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನಿರಂಜನೇಗೌಡ, ಪಿ.ಎಸ್.ಐ., ಕೃಷ್ಣರಾಜ ಪೊಲೀಸ್ ಠಾಣೆ, ಮೈಸೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1300

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕುಮಾರ ಆರಾಧ್ಯ, ಪಿ.ಎಸ್.ಐ., ಕುದೇರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಇವಿ/84/2009-10 (ಓ.ಬಿ. ಸಂಖ್ಯೆ: 18/2010-11) ದಿನಾಂಕ: 03-01-2011
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: (4)84/2010-11 (ಓ.ಬಿ. ಸಂಖ್ಯೆ: 11/2011-12) ದಿನಾಂಕ: 05-8-2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 18-11-2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)53/2011-12 ದಿನಾಂಕ: 01-02-2012

ಪ್ರಸ್ತಾವನೆ:

ಶ್ರೀ ಎನ್. ಕುಮಾರ ಆರಾಧ್ಯ, ಇವರು ಚಾಮರಾಜನಗರ ಪೂರ್ವ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತನ ಪ್ರದರ್ಶಿಸಿದ ಕಾರಣದ ಮೇಲೆ ಇನ್ನೋರ್ವ ಸಿಬ್ಬಂದಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:-

"ನೀವು ಪಿ.ಎಸ್.ಐ. (ಕಾನೂನು ಮತ್ತು ಸುವ್ಯವಸ್ಥೆ) ಆಗಿ ಚಾಮರಾಜನಗರ ಪೂರ್ವ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೂಡ್ಲುಮೊಳೆ ಗ್ರಾಮದಲ್ಲಿ ಗಲಾಟೆ ಆಗಿರುವ ವಿಷಯವನ್ನು ದೂರವಾಣಿ ಮುಖಾಂತರ ಪಡೆದಿದ್ದೂ, ಗ್ರಾಮಕ್ಕೆ ಭೇಟಿ ನೀಡದೇ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿಸಿದ್ದೀರಿ. ಗಾಯಾಳು ಲಕ್ಷ್ಮಣಶೆಟ್ಟಿಯ ಹೇಳಿಕೆಯನ್ನು ಮುಖ್ಯ ಪೇದೆ 21 (ಆಪೊಅ 2) ರವರು ಪಡೆದು, ಠಾಣಾ ದಿನಚರಿಯಲ್ಲಿ ನಮೂದಿಸಿದ್ದರೂ, ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಹಾಗೂ ವೈದ್ಯರನ್ನು ಭೇಟಿ

ಮಾಡದೇ ಗಾಯಾಳು ಪರಿಸ್ಥಿತಿಯನ್ನು ಗಮನಿಸದೇ ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿದ್ದೀರಿ. ಆ.ಪೊ.ಅ. 2 ರವರು ಸಂಜ್ಞೇಯ ಪ್ರಕರಣವನ್ನು ಅಸಂಜ್ಞೇಯ ಪ್ರಕರಣವೆಂದು ನೋಂದಾಯಿಸಿದ್ದರೂ, ಮುಂದೆ ನೀವು ಗಾಯಾಳುವಿನ ಹೇಳಿಕೆಯನ್ನು ಪರಿಶೀಲಿಸದೇ, ಅದನ್ನು ಸಂಜ್ಞೇಯ ಪ್ರಕರಣವಾಗಿ ನೊಂದಾಯಿಸಿ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುತ್ತೀರಿ. ನೀವು ಈ ಹಿಂದೆ ಇದೇ ಠಾಣೆಯಲ್ಲಿ ಪಿ.ಎಸ್.ಐ. ಕರ್ತವ್ಯ ನಿರ್ವಹಿಸಿದ್ದು ಲಕ್ಷ್ಮಣ @ ಲಕ್ಷ್ಮಣ ಶೆಟ್ಟಿಗೂ ಮತ್ತು ಶಂಕರ ಶೆಟ್ಟಿಗೂ ಗಲಾಟೆಯಾಗಿ ಚಾಮರಾಜನಗರ ಪೂರ್ವ ಠಾಣೆಯಲ್ಲಿ ಮೊ.ನಂ.84/06 ಮತ್ತು ಮೊ.ಸಂ. 85/06 ಪ್ರಕರಣಗಳನ್ನು ದಾಖಲಿಸಿದ್ದು ಹಾಗೂ ಮುಂಜಾಗ್ರತೆ ಕ್ರಮವಾಗಿ ಮೊ.ನಂ. 88/06 ಮತ್ತು ಮೊ.ನಂ.89/06 ಕಲಂ 107 ಸಿಆರ್‌ಪಿಸಿ ಅನ್ವಯ ಕ್ರಮ ಕೈಗೊಂಡಿದ್ದರೂ, ಗುಂಪು ವೈಷಮ್ಯದ ಬಗ್ಗೆ ನಿಮಗೆ ಮೊದಲೇ ಮಾಹಿತಿ ತಿಳಿದಿದ್ದರೂ ಸಹ, ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಳ್ಳದೇ ಘೋರ ಪ್ರಕರಣದಲ್ಲಿ ಅಂತ್ಯವಾಗಿದ್ದು, ನೀವು ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತನ ತೋರಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 03-01-2011ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 05–08–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 123 ಪೊಸಿಅ 2011 ಬೆಂಗಳೂರು, ದಿನಾಂಕ: 28–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕುಮಾರ ಆರಾಧ್ಯ, ಪಿ.ಎಸ್.ಐ., ಕುದೇರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಪಿ.ಆರ್. 1305

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಆರ್.ಎಚ್. ಹನಸಿ, ಸಿ.ಪಿ.ಸಿ.–2568, ಘಂಟಿಗೇರಿ ಪೊಲೀಸ್ ಠಾಣೆ, ಹುಬ್ಬಳ್ಳಿ–ಧಾರವಾಡ ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ, ಇವರ ಆದೇಶ ಸಂಖ್ಯೆ: ಸಿಪಿ/ಸಿಬ್ಬಂದಿ(3)/ನಿಯಮ–6/14/2008 (ಓ.ಬಿ. ಸಂಖ್ಯೆ: 332/2010 ದಿನಾಂಕ: 24–04–2010

2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು(4)/32/2010–11 (ಓ.ಬಿ. ಸಂಖ್ಯೆ: 37/2010–11) ದಿನಾಂಕ: 30–01–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 25–4–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)11/2011–12 ದಿನಾಂಕ: 04–02–2012

ಪ್ರಸ್ತಾವನೆ:

ಶ್ರೀ ಆರ್.ಹೆಚ್. ಹನಸಿ, ಸಿ.ಪಿ.ಸಿ., ಇವರು ಹುಬ್ಬಳ್ಳಿಯ ಘಂಟಿಗೇರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಪದೇ ಪದೇ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯದಲ್ಲಿ ತೀವ್ರ ತರಹದ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನೀವು ಶ್ರೀ ಆರ್.ಎಚ್. ಹನಸಿ, ಸಿ.ಪಿ.ಸಿ.–2568, ಘಂಟಿಗೇರಿ ಪಿ.ಎಸ್. ದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ನೀವು ಶಿಸ್ತಿನ ಇಲಾಖೆಯಲ್ಲಿ ನೌಕರರಾಗಿದ್ದುಕೊಂಡು ಮೇಲಾಧಿಕಾರಿ–ಗಳಿಂದ ಪೂರ್ವಾನುಮತಿ ಪಡೆಯದೆ ಕರ್ತವ್ಯಕ್ಕೆ ಪದೇ ಪದೇ ಅನಧಿಕೃತವಾಗಿ ಗೈರ ಹಾಜರಾಗುವ ಪ್ರವೃತ್ತಿಯನ್ನು ಬೆಳೆಸಿಕೊಂಡು ನಿಮ್ಮ ಕರ್ತವ್ಯದಲ್ಲಿ ತೀವ್ರತರನಾದ ನಿರ್ಲಕ್ಷತನ ಹಾಗೂ ಕರ್ತವ್ಯದ ಪ್ರತಿ ತೀವ್ರ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವುದು ಪೊಲೀಸ್ ಇನ್ಸಪೆಕ್ಟರ್ ಘಂಟಿಗೇರಿ ಪೊಲೀಸ್ ಠಾಣೆ ಹುಬ್ಬಳ್ಳಿ ರವರ ಉಲ್ಲೇಖಿತ ಪೂರ್ವಭಾವಿ ವಿಚಾರಣೆಯಿಂದ ಮೇಲ್ನೋಟಕ್ಕೆ ಸಾಬಿತಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 24–04–2010ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಎರಡು ವರ್ಷಗಳ ಕಾಲ ಮುಂದೂಡಲಾಗಿದೆ, ಅನಧೀಕೃತವಾಗಿ ಗೈರು ಹಾಜರಾದ ಅವಧಿ ದಿನಾಂಕ: 22–01–2008 ರಿಂದ 16–01–2009 ರವರೆಗೆ ಒಟ್ಟು 360 ದಿನಗಳನ್ನು 'ಸಂಬಳ ರಹಿತ ರಜೆ ' ಎಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 30–01–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯದಲ್ಲಿ ತೀವ್ರ ತರಹದ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 43 ಪೊಸಿಅ 2011 ಬೆಂಗಳೂರು, ದಿನಾಂಕ: 28–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಎಚ್. ಹನಸಿ, ಸಿ.ಪಿ.ಸಿ.–2568, ಘಂಟಿಗೇರಿ ಪೊಲೀಸ್ ಠಾಣೆ, ಹುಬ್ಬಳ್ಳಿ–ಧಾರವಾಡ ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1301

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಹೆಚ್.ಎಸ್. ಮಂಜುನಾಥಸ್ವಾಮಿ, ಸಿ.ಹೆಚ್.ಸಿ., ಬಸವನಗರ ಪೊಲೀಸ್ ಠಾಣೆ, ದಾವಣಗೆರೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(5)/ಪಿಆರ್/147/2010 (ಓ.ಬಿ. ಸಂಖ್ಯೆ: 1134/2010) ದಿನಾಂಕ: 24–8–2010

2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ: 35/ಅಪೀಲು/ ಸಿಬ್ಬಂದಿ–2/2010–2011 (ಓ.ಬಿ. ಸಂಖ್ಯೆ: 258/2010–2011) ದಿನಾಂಕ: 24–01–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 14–10–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)50/2011–12 ದಿನಾಂಕ: 07–3–2012

ಪ್ರಸ್ತಾವನೆ:

ಶ್ರೀ ಹೆಚ್.ಎಸ್. ಮಂಜುನಾಥಸ್ವಾಮಿ, ಸಿ.ಹೆಚ್.ಸಿ., ಇವರು ದಾವಣಗೆರೆಯ ಬಸವನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ದ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನೀವು ಬಸವನಗರ ಪೊಲೀಸ್ ಠಾಣೆಯಲ್ಲಿ ವಾರೆಂಟ್ ಜಾರಿ ಮಾಡುವ ಕರ್ತವ್ಯವನ್ನು ನಿರ್ವಹಿಸುತ್ತಿದ್ದು ಠಾಣೆಗೆ ಬರುವ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಈ ಕಛೇರಿಯಲ್ಲಿ ನಡೆದ ಮಾಸಿಕ ಅಪರಾಧ ಸಭೆಗಳಲ್ಲಿ ಮತ್ತು ಪೊಲೀಸ್ ಪ್ರಧಾನ ಕಛೇರಿಯ ವಿವಿಧ ಜ್ಞಾಪನಗಳಲ್ಲಿ ಸೂಚಿಸಲಾಗಿದ್ದರೂ ಸಹ ದಿನಾಂಕ: 08–7–2010 ರಂದು ಶ್ರೀ ಹೆಚ್. ರವಿಕುಮಾರ್ ಎಂ.ಎಸ್ಸಿ(ಅಗ್ರಿ), ನಂ.94/3, ಶ್ರೀನಿವಾಸ ಕೃಪ ಪಿ.ಜೆ. ಬಡಾವಣೆ, 1ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ, ರವರನ್ನು ನಿಮ್ಮ ಮೇಲೆ ವಾರೆಂಟ್ ಇದೆ ಎಂದು ಠಾಣೆಗೆ ಕರೆಯಿಸಿ ತದನಂತರ ಅವರನ್ನು ಸೌಜನ್ಯದಿಂದ ವಿಚಾರಣೆಯನ್ನು ಮಾಡದೇ, ವಿಚಾರಣೆಯ ನೆಪದಲ್ಲಿ ದೈಹಿಕವಾಗಿ ಅಮಾನವೀಯ ರೀತಿಯಲ್ಲಿ ಕೈ–ಕಾಲುಗಳಿಂದ ತೀವ್ರತರವಾಗಿ ಹಲ್ಲೆ ನಡೆಸಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ನೀಡಿ ಅತ್ಯಂತ ಅಮಾನವೀಯವಾಗಿ ವರ್ತಿಸಿ, ಅವರ ವಿರುದ್ದ ಯಾವುದೇ ಪ್ರಕರಣವನ್ನು ದಾಖಲಿಸದೇ ಮಾನವ ಹಕ್ಕುಗಳನ್ನು ಹಾಗೂ ಕಾಲಕಾಲಕ್ಕೆ ನಿಮ್ಮ ಮೇಲಾಧಿಕಾರಿಗಳು ಮತ್ತು ಈ ಕಛೇರಿಯಿಂದ ನೀಡಲಾಗುವ ನಿರ್ದೇಶನಗಳನ್ನು, ಆದೇಶವನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಶಿಸ್ತಿನ ಇಲಾಖೆಯ ಸಿಬ್ಬಂದಿಗೆ ಸಲ್ಲದ ರೀತಿಯಲ್ಲಿ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 24–8–2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 24–01–2011ರ ಆದೇಶದಲ್ಲಿ ಅನುಕಂಪದ ಕಾರಣ ನೀಡಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳಿಗೆ ದಕ್ಕೆ ಬಾರದ ಹಾಗೆ ಮೂರು ತಿಂಗಳ ಕಾಲ ಮುಂದೂಡಲಾದ ದಂಡನೆಯನ್ನು ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 115 ಪೊಸಿಅ 2011 ಬೆಂಗಳೂರು, ದಿನಾಂಕ: 28–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಎಸ್. ಮಂಜುನಾಥಸ್ವಾಮಿ, ಸಿ.ಹೆಚ್.ಸಿ., ಬಸವನಗರ ಪೊಲೀಸ್ ಠಾಣೆ, ದಾವಣಗೆರೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1302

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಆರ್.ಎಸ್. ಮಹದೇವಪ್ಪ, ಸಿಪಿಸಿ–240, ಮ.ಮ. ಬೆಟ್ಟ, ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧಿಕ್ಷಕರು, ಚಾಮರಾಜ ನಗರ, ಇವರ ಆದೇಶ ಸಂಖ್ಯೆ: ಡಿಇ/09/2009–10 (ಓ.ಬಿ. ಸಂಖ್ಯೆ: 44/2010–11) ದಿನಾಂಕ: 29–01–2011

2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು/80/2010–11 (ಓ.ಬಿ. ಸಂಖ್ಯೆ: 18/2011–12) ದಿನಾಂಕ: 17–6–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 27–8–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)39/2011–12 ದಿನಾಂಕ: 04–01–2012

ಪ್ರಸ್ತಾವನೆ:

ಶ್ರೀ ಆರ್.ಎಸ್. ಮಹದೇವಪ್ಪ, ಸಿಪಿಸಿ–240, ಮ.ಮ. ಬೆಟ್ಟ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ನೀವು ಮ.ಮ. ಬೆಟ್ಟ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕ: 07–6–2009 ರಿಂದ 01–7–2009 ರವರೆಗೆ 25 ದಿನಗಳು ಅನಧಿಕೃತವಾಗಿ ಗೈರುಹಾಜರಾಗಿದ್ದು ನಂತರ ದಿ: 22–8–2009 ರಿಂದ ಇದುವರೆವಿಗೂ ಯಾವುದೇ ಮಾಹಿತಿಯನ್ನು ನೀಡದೇ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಅಶಿಸ್ತನ್ನು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧಿಕ್ಷಕರು, ಚಾಮರಾಜ ನಗರ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 29–01–2011ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ಮಟ್ಟಕ್ಕೆ 5 ವರ್ಷಗಳವರೆಗೆ ಮುಂದಿನ ವಾರ್ಷಿಕ ವೇತನ ಬಡ್ತಿಗಾಗಿ ದಕ್ಕೆಯಾಗದಂತೆ ಇಳಿಸಲಾಗಿದೆ. ದಿನಾಂಕ: 23–8–2009 ರಿಂದ 29–4–2010ರ ವರೆಗಿನ ಅನಧಿಕೃತ ಗೈರುಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 17–6–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 93 ಪೊಸಿಅ 2011 ಬೆಂಗಳೂರು, ದಿನಾಂಕ: 28–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಎಸ್. ಮಹದೇವಪ್ಪ, ಸಿಪಿಸಿ–240, ಮ.ಮ. ಬೆಟ್ಟ, ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1303

ಒಳಾಡಳಿತ ಸಚಿವಾಲಯ

ವಿಷಯ: ಶ್ರೀಮತಿ ಶಶಿಕಲಾ, ಮ.ಪಿ.ಸಿ. 192, ಬಂಗಾರಪೇಟೆ ಪೊಲೀಸ್ ಠಾಣೆ ಮತ್ತು ಶ್ರೀಯುತರುಗಳಾದ ಅನೀಸ್ ಪಾಷ ಸಿ.ಪಿ.ಸಿ.–48, ಬೇತಮಂಗಲ ಪೊಲೀಸ್ ಠಾಣೆ, ಮತ್ತು ಎಸ್. ಮಂಜುನಾಥ ಸಿ.ಪಿ.ಸಿ.–71, ಬೆಮಲ್ ನಗರ ಪೊಲೀಸ್ ಠಾಣೆ, ಕೆ.ಜಿ.ಎಫ್. ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧಿಕ್ಷಕರು, ಕೆ.ಜಿ.ಎಫ್, ಇವರ ಆದೇಶ ಸಂಖ್ಯೆ: ಸಿಬ್ಬಂದಿ(1)ಡಿಇ/05/2008 (ಓ.ಬಿ. ಸಂಖ್ಯೆ: 93/2010) ದಿನಾಂಕ: 28–05–2010
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/25/ಫನ್ಸಿ/ 2010–11 (ಓ.ಬಿ. ಸಂಖ್ಯೆ: 193/2010–11) ದಿನಾಂಕ: 15–03–2011
3) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/21/ಪನ್ಸಿ/ 2010–11 (ಓ.ಬಿ. ಸಂಖ್ಯೆ: 198/2010–11) ದಿನಾಂಕ: 23–03–2011
4) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/20/ಪನ್ಸಿ/ 2010–11 (ಓ.ಬಿ. ಸಂಖ್ಯೆ: 197/2010–11) ದಿನಾಂಕ: 23–03–2011
5) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 02–6–2011 ಮತ್ತು 27–6–2011
6) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)26/2011–12 ದಿನಾಂಕ: 11–9–2011 ಮತ್ತು ಅಪೀಲು(2)19/2011–12 ದಿನಾಂಕ: 16–9–2011

ಪ್ರಸ್ತಾವನೆ:

ಶ್ರೀಮತಿ ಶಶಿಕಲಾ, ಮ.ಪಿ.ಸಿ. 192, ಬಂಗಾರಪೇಟೆ ಪೊಲೀಸ್ ಠಾಣೆ ಮತ್ತು ಶ್ರೀಯುತರುಗಳಾದ ಅನೀಸ್ ಪಾಷ ಮತ್ತು ಮಂಜುನಾಥ ಸಿ.ಪಿ.ಸಿ. ರಾಬರ್ಟಸನ್ ಪೊಲೀಸ್ ಠಾಣೆ, ಕೆ.ಜಿ.ಎಫ್. (ಸಂಚಾರ ನಿಯಂತ್ರಣ ಕರ್ತವ್ಯ) ಇವರುಗಳು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ಅಶಿಸ್ತು ಘೋರ ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರುಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮ) ನಿಯಮಗಳು 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆ ಹೊರಿಸಲಾಗಿದೆ.

ದೋಷಾರೋಪಣೆ:–

"ಶ್ರೀಮತಿ ಶಶಿಕಲಾ ಮಹಿಳಾ ಪಿ.ಸಿ. 192 ಉರಿಗಾಂ ಪೊಲೀಸ್ ಠಾಣೆ ಕೆ.ಜಿ.ಎಫ್. ಶ್ರೀ ಅನೀಸ್ ಪಾಷ, ಸಿಪಿಸಿ 48 ಮತ್ತು ಶ್ರೀ ಮಂಜುನಾಥ ಸಿ.ಪಿ.ಸಿ. 71, ರಾಬರ್ಟ್‌ಸನ್‌ಪೇಟೆ ಪೊಲೀಸ್ ಠಾಣೆ ಕೆ.ಜಿ.ಎಫ್, (ಸಂಚಾರ ನಿಯಂತ್ರಣ ಕರ್ತವ್ಯ) ಅದ ನೀವುಗಳು ದಿನಾಂಕ: 22–8–07 ರಂದು ಸಂಜೆ ಸುಮಾರು 06–15 ಗಂಟೆಯಲ್ಲಿ ಶ್ರೀ ರಾಮಚಂದ್ರರೆಡ್ಡಿ, ನಿವೃತ್ತ ಪಿ.ಎಸ್.ಐ. ರವರು ರಾಬರ್ಟ್‌ಸನ್ ಪೇಟೆಯ ಸೂರಜ್‌ಮಲ್ ವೃತ್ತದ ಬಳಿ ಹೋಗುತ್ತಿರುವಾಗ ಶ್ರೀಮತಿ ಶಶಿಕಲಾ ಮಹಿಳಾ ಪೇದೆ 192, ಆದ ಇವರು ವಿನಾಕಾರಣ ಸದರಿ ನಿವೃತ್ತ ಪಿ.ಎಸ್.ಐ ರವರೊಂದಿಗೆ ಪೂರ್ವ–ಯೋಜನೆಯಂತೆ ಜಗಳ ಮಾಡಿ, ಸಂಚಾರಿ ನಿಯಂತ್ರಣ ಕರ್ತವ್ಯದ ಮೇಲಿದ್ದ ಶ್ರೀ ಮಂಜುನಾಥ, ಸಿ.ಪಿ.ಸಿ. 71 ಮತ್ತು ಶ್ರೀ ಅನಿಸ್ ಪಾಷ, ಸಿಪಿಸಿ 48 ರವರುಗಳು ನಿವೃತ್ತ ಪಿ.ಎಸ್.ಐ ರವರನ್ನು ಹಿಡಿದುಕೊಂಡಾಗ, ಸಾರ್ವಜನಿಕ ಸ್ಥಳದಲ್ಲಿ ಮಹಿಳಾ ಪೇದೆ 192 ರವರು ಉದ್ದೇಶಪೂರ್ವಕವಾಗಿ ಅವಾಚ್ಯ ಮಾತುಗಳಿಂದ ಬೈದು ತನ್ನ ಕಾಲಿನ ಚಪ್ಪಲಿಯಿಂದ ಹೊಡೆದು, ಹಲ್ಲೆ ಮಾಡಿ ಒಬ್ಬ ಜವಾಬ್ದಾರಿಯುತ ನಿವೃತ್ತ ಪಿ.ಎಸ್.ಐ ರವರೊಂದಿಗೆ ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡಿ ಅನುಚಿತವಾಗಿ ವರ್ತಿಸಿರುತ್ತೀರೆಂದು ಆರೋಪವಾಗಿರುತ್ತೆ.

ನೀವುಗಳು ಶಿಸ್ತಿನ ಇಲಾಖೆಯಾದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಕಾನೂನು ಕಾಪಾಡುವ ಜವಾಬ್ದಾರಿಯುತ ಹುದ್ದೆಯಲ್ಲಿ ಭರ್ತಿಯಾಗಿರುವುದಾಗಿ ತಿಳಿದಿದ್ದರೂ ಸಹ ನೀವುಗಳು ಶಿಸ್ತಿನ್ನು ಕಾಪಾಡುವ ಬದಲು ನೀವುಗಳೇ ಹಗಲಿನಲ್ಲೇ ಸಾರ್ವಜನಿಕ ರಸ್ತೆಯಲ್ಲಿ ನಡೆದುಕೊಂಡು ಹೊಗುತ್ತಿದ್ದ ಮಾರ್ಯದಸ್ಥ ಹಾಗೂ ನಿವೃತ್ತ ಪೊಲೀಸ್ ಸಬ್–ಇನ್ಸಪೆಕ್ಟರ್ ಆಗಿದ್ದ ಶ್ರೀ ರಾಮಚಂದ್ರರೆಡ್ಡಿ ರವರು ಪೊಲೀಸ್ ಅಧಿಕಾರಿ ಎಂದು ನಿಮ್ಮಗಳಿಗೆ ಗೊತ್ತಿದ್ದರೂ ಸಹ ಅವರನ್ನು ಅವಾಚ್ಯವಾಗಿ ಬೈದು, ಹಿಡಿದುಕೊಂಡು ಚಪ್ಪಲಿಯಿಂದ ಹೊಡೆದು ಅವರ ಮಾನಕ್ಕೆ, ದಕ್ಕೆಯಾಗುವ ರೀತಿಯಲ್ಲಿ ಕುಂದುಂಟು ಮಾಡಿ ನಿಮ್ಮ ಕರ್ತವ್ಯದಲ್ಲಿ ಅತೀವ ಅಶಿಸ್ತು ಘೋರ ದುರ್ನಡತೆ ಮತ್ತು ಬೇಜವಾಬ್ದಾರಿತನವನ್ನು ತೋರ್ಪಡಿಸಿ ಇಲಾಖೆಯ ಘನತೆಗೆ ಧಕ್ಕೆ ಉಂಟು ಮಾಡಿರುತ್ತೀರಿ ಎಂದು ದೋಷಾರೋಪಣೆ ಮಾಡಲಾಗಿದೆ."

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 28-05-2010ರ ಆದೇಶದಲ್ಲಿ ಶ್ರೀಮತಿ ಶಶಿಕಲಾ ಮ.ಪಿ.ಸಿ., ಶ್ರೀ ಎಸ್. ಮಂಜುನಾಥ ಸಿ.ಪಿ.ಸಿ., ಹಾಗೂ ಶ್ರೀ ಅನೀಸ್ ಪಾಷ ಸಿ.ಪಿ.ಸಿ., ಇವರುಗಳ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನಗಳಿಗೆ ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಐದು ವರ್ಷಗಳ ಕಾಲ ಇಳಿಸಲಾಗಿದೆ ಐದು ವರ್ಷಗಳ ನಂತರ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುತ್ತಾರೆ. ಶ್ರೀಮತಿ ಶಶಿಕಲಾ, ಮ.ಪಿ.ಸಿ ಇವರು ದಿನಾಂಕ: 03-12-2008 ರಿಂದ 10-04-2009 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಶ್ರೀಮತಿ ಶಶಿಕಲಾ, ಮ.ಪಿ.ಸಿ., ಇವರು ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 15-3-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ ಹಾಗೂ ಶ್ರೀಯುತರಾದ ಅನೀಸ್ ಪಾಷ ಹಾಗೂ ಮಂಜುನಾಥ್, ಸಿ.ಪಿ.ಸಿ., ಇವರುಗಳು ಸಲ್ಲಿಸಿದ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (3 & 4) ರಲ್ಲಿ ಓದಲಾದ ದಿನಾಂಕ: 23-3-2011ರ ಆದೇಶಗಳಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ ಇವರುಗಳ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ 2 ವರ್ಷಗಳ ಕಾಲ ಮುಂದೂಡಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರುಗಳು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರುಗಳು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ಅತೀವ ಅಶಿಸ್ತು ಘೋರ ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 70 ಪೊಸಿಅ 2011 ಬೆಂಗಳೂರು, ದಿನಾಂಕ: 28-4-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಮತಿ ಶಶಿಕಲಾ, ಮ.ಪಿ.ಸಿ. 192, ಬಂಗಾರಪೇಟೆ ಪೊಲೀಸ್ ಠಾಣೆ ಮತ್ತು ಶ್ರೀಯುತರುಗಳಾದ ಅನೀಸ್ ಪಾಷ ಸಿ.ಪಿ.ಸಿ.-48, ಬೇತಮಂಗಲ ಪೊಲೀಸ್ ಠಾಣೆ, ಮತ್ತು ಎಸ್. ಮಂಜುನಾಥ ಸಿ.ಪಿ.ಸಿ.-71, ಬೆಮಲ್ ನಗರ ಪೊಲೀಸ್ ಠಾಣೆ, ಕೆ.ಜಿ.ಎಫ್. ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1304

ಒಳಾಡಳಿತ ಸಚಿವಾಲಯ

ವಿಷಯ: ಶ್ರೀಯುತರಾದ ಎಸ್. ನಾರಾಯಣಸ್ವಾಮಿ, ಮಾಜಿ ಪಿ.ಸಿ., ಫ್ರೇಜರ್‌ಟೌನ್ ಪೊಲೀಸ್ ಠಾಣೆ, ಕೆ.ಎನ್. ನರಸಿಂಹಾಚಾರ್, ಮಾಜಿ ಪಿ.ಸಿ., ಹುಳಿಮಾವು ಪೊಲೀಸ್ ಠಾಣೆ, ಬೆಂಗಳೂರು ನಗರ, ಮತ್ತು ಎಸ್. ರಾಮಕೃಷ್ಣ, ಮಾಜಿ ಎ.ಪಿ.ಸಿ., ಸಿ.ಎ.ಆರ್. (ಕೇಂದ್ರ), ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 6/ಡಿ.ಇ-1/ಆರ್-6/1997 ದಿನಾಂಕ: 15-9-09
2) ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು(4)/ 48/2009-10 (ಓ.ಬಿ. ಸಂಖ್ಯೆ: 02/2010-11) ದಿನಾಂಕ: 21-4-2010
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 03-6-2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)22/2010-11 ದಿನಾಂಕ: 29-7-2010

ಪ್ರಸ್ತಾವನೆ:

ಶ್ರೀಯುತರಾದ ಎಸ್. ನಾರಾಯಣಸ್ವಾಮಿ, ಕೆ.ಎನ್. ನರಸಿಂಹಾಚಾರ್, ಬೆಂಗಳೂರಿನ ಅಶೋಕ ನಗರ ಪೊಲೀಸ್ ಠಾಣೆ ಮತ್ತು ಎಸ್. ರಾಮಕೃಷ್ಣ, ಎ.ಪಿ.ಸಿ., ಸಿ.ಎ.ಆರ್ (ಕೇಂದ್ರ) ಬೆಂಗಳೂರು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ನೋರ್ವ ಅಧಿಕಾರಿಯನ್ನೊಳಗೊಂಡಂತೆ ಇವರುಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

<u>ದೋಷಾರೋಪಣೆ:–</u>

"ಬೆಂಗಳೂರು ನಗರ, ಅಶೋಕನಗರ ಪೊಲೀಸು ಠಾಣೆಯ ಪಿ.ಎಸ್.ಐ. ಡಿ.ಆರ್. ಶಿವಾನಂದ 2) ಪಿ.ಸಿ. 6451 ನಾರಾಯಣಸ್ವಾಮಿ 3) ಶ್ರೀ ನರಸಿಂಹಾಚಾರ್. ಪಿ.ಸಿ. 4352, ಎಸ್.ಆರ್. ನಗರ ಪೊಲೀಸು ಠಾಣೆ ಮತ್ತು 4) ಎಪಿಸಿ 1155 ಎನ್ ರಾಮಕೃಷ್ಣ ಸಿ–ಕಂಪನಿ, ಸಿ.ಎ.ಆರ್. (ಕೇಂದ್ರ) ಆದ ನೀವುಗಳು ಖಾಸಗಿ ವ್ಯಕ್ತಿಗಳಾದ ರಾಮಕೃಷ್ಣ ಮಂಜು ಮತ್ತು ನಾರಾಯಣಸ್ವಾಮಿ ಎಂಬುವವರೊಂದಿಗೆ ಸಮಾನ ಭಾವನೆಯಿಂದ ಸೇರಿ ದಿನಾಂಕ: 24–5–97 ರಂದು ರಾತ್ರಿ 10–00 ಗಂಟೆ ಸಮಯದಲ್ಲಿ ಅಕ್ರಮಕೂಟ ಕೂಡಿಕೊಂಡು ಬೆಂಗಳೂರು ನಗರ ಸುಬಾಷ್‌ನಗರ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಕ್ಯಾಲಿಕಟ್‌ಗೆ ಹೋಗುವ ಬಸ್‌ನಲ್ಲಿ ಕುಳಿತಿದ್ದ ಶ್ರೀ ಗಿರೀಶ್ 2) ಸ್ಟೀಫನ್ 3) ಮಂಜುನಾಥ 4) ಜಯಪ್ರಕಾಶ್ ಎಂಬುವರು ಹೊಂದಿದ್ದ ರೂ. 24,55,000–00 ನಗದು ಹಣದೊಂದಿಗೆ ಕುಳಿತಿದ್ದು, ನೀವುಗಳು ಬಸ್‌ನೊಳಕ್ಕೆ ಹೋಗಿ ಸದರಿ ನಾಲ್ಕು ಜನರನ್ನು ಬಸ್‌ನಿಂದ ಹೊರಗೆಳೆದು ಅಂಬಾಸಿಡರ್ ಕಾರಿನಲ್ಲಿ ಬಲವಂತವಾಗಿ ಅಪಹರಿಸಿಕೊಂಡು ರಾಜಾಜಿನಗರ ಭ್ಯಾಷ್ಯಂ ವೃತ್ತದವರೆಗೆ ಎಳೆದುಕೊಂಡು ಹೋಗಿ, ಅಲ್ಲಿ ಬೆದರಿಕೆ ಹಾಕಿ, ಅವರಿಗೆ ಹೊಡೆದು ಅವರ ಬಳಿ ಇದ್ದ ರೂ. 24,55,000–00 ನಗದು ಹಣವನ್ನು ಬಲತ್ಕಾರವಾಗಿ ಕಿತ್ತುಕೊಂಡು ಸಂಜ್ಞೆಯ ಪ್ರಕರಣದಲ್ಲಿ ಭಾಗಿಯಾಗಿದ್ದು, ಶಿಸ್ತು ಇಲಾಖೆಯಲ್ಲಿರುವ ನೀವು ಅಧಿಕಾರ ದುರುಪಯೋಗಪಡಿಸಿಕೊಂಡು ಇಲಾಖೆಗೆ ಸಲ್ಲದ ದುರ್ನಡೆ ಪ್ರದರ್ಶಿಸಿರುತ್ತೀರಿ.

ಅಶೋಕನಗರ ಪೊಲೀಸು ಠಾಣೆಯ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಆಗಿದ್ದ ಡಿ.ಆರ್. ಶಿವಾನಂದ ಆದ ನೀವು ದಿನಾಂಕ: 26–5–97 ರಂದು ಪಿರ್ಯಾದುದಾರರಾದ ಶ್ರೀ ಮೋತಿಲಾಲ್ ಜೈನ್ ರವರು ಈ ವಿಚಾರವನ್ನು ಅಶೋಕನಗರ ಪೊಲೀಸು ಠಾಣೆಯಲ್ಲಿ ಹಾಜರಾಗಿ ಪಿ.ಐ. ರವರಿಗೆ ತಿಳಿಸಿದಾಗ, ಅದೇ ದಿನ ನೀವು ರೂ. 21,95,000–00 ಗಳನ್ನು ಹಣವನ್ನು ಹಿಂತಿರುಗಿಸಿದ್ದು, ಉಳಿದ ಹಣವಾದ ರೂ. 2,60,000–00 ಗಳನ್ನು ವಾಪಸ್ಸು ಕೊಡುವುದಾಗಿ ಆಶ್ವಾಸನೆ ನೀಡಿ ಹಣ ಹಿಂತಿರುಗಿಸದೇ ನೀವು ಸಂಜ್ಞೆಯ ಪ್ರಕರಣದಲ್ಲಿ ಭಾಗಿಯಾಗಿದ್ದು, ಶಿಸ್ತು ಇಲಾಖೆ–ಯಲ್ಲಿರುವ ನೀವು ಅಧಿಕಾರ ದುರುಪಯೋಗ ಪಡಿಸಿಕೊಂಡು ಇಲಾಖೆಗೆ ಸಲ್ಲದ ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರುಗಳ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 15–9–2009ರ ಆದೇಶದಲ್ಲಿ ಅರ್ಜಿದಾರರುಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರುಗಳ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 21–4–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರುಗಳು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಹಾಗೂ ದುರ್ನಡತೆ ಪ್ರದರ್ಶಿಸಿ–ರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 94 ಪೊಸಿಅ 2010 ಬೆಂಗಳೂರು, ದಿನಾಂಕ: 27–04–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಯುತರಾದ ಎಸ್. ನಾರಾಯಣಸ್ವಾಮಿ, ಮಾಜಿ ಪಿ.ಸಿ., ಫ್ರೇಜರ್‌ಟೌನ್ ಪೊಲೀಸ್ ಠಾಣೆ, ಕೆ.ಎನ್.

ನರಸಿಂಹಾಚಾರ್, ಮಾಜಿ ಪಿ.ಸಿ., ಹುಳಿಮಾವು ಪೊಲೀಸ್ ಠಾಣೆ, ಬೆಂಗಳೂರು ನಗರ, ಮತ್ತು ಎಸ್. ರಾಮಕೃಷ್ಣ, ಮಾಜಿ ಎ.ಪಿ.ಸಿ., ಸಿ.ಎ.ಆರ್. (ಕೇಂದ್ರ), ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1276

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಪಿ. ಆರ್. ವೆಂಕಟೇಶ್, ಸಿ.ಪಿ.ಸಿ., ರಾಬರ್ಟಸನ್ ಪೇಟೆ ಪೊಲೀಸ್ ಠಾಣೆ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರ ಆದೇಶ ಸಂಖ್ಯೆ: ಸಿಬ್ಬಂದಿ(1)/ಶಿಕ್ಷೆ/06/2007 (ಓ.ಬಿ. ಸಂಖ್ಯೆ: 11/2009) ದಿನಾಂಕ: 15–01–2009
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು(39)/ ಫನ್ಸ್/2010–11 (ಓ.ಬಿ. ಸಂಖ್ಯೆ: 181/2010–11) ದಿನಾಂಕ: 14–02–11
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 31–5–2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)20/2011–12 ದಿನಾಂಕ: 23–01–12
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 213 ಸಿಎನ್‌ಎಸ್ 2011 ದಿನಾಂಕ: 09–4–2012

ಪ್ರಸ್ತಾವನೆ:

ಶ್ರೀ ಪಿ.ಆರ್. ವೆಂಕಟೇಶ್, ಸಿ.ಪಿ.ಸಿ., ರಾಬರ್ಟಸನ್ ಪೇಟೆ ಪೊಲೀಸ್ ಠಾಣೆ, ಕೆ.ಜಿ.ಎಫ್., ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

<u>ದೋಷಾರೋಪಣೆ:</u>

> "ಶ್ರೀ ಪಿ.ಆರ್. ವೆಂಕಟೇಶ್ ಸಿ.ಪಿ.ಸಿ.–131, ರಾಬರ್ಟಸನ್ ಪೇಟೆ ಪೊಲೀಸ್ ಠಾಣೆ, ಕೆ.ಜಿ.ಎಫ್., ಆದ ನೀವು ದಿನಾಂಕ: 09–06–2007 ರಿಂದ 20–7–2007 ರವರೆಗೆ ಒಟ್ಟು 42 ದಿನಗಳ ಕಾಲ ಯಾವುದೇ ರಜೆ, ಅನುಮತಿಯನ್ನು ಪಡೆಯದೆ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ತಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಮತ್ತು ಅಶಿಸ್ತನ್ನು ತೋರ್ಪಡಿಸಿ, ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರೆಂದು ಆರೋಪವಾಗಿರುತ್ತೆ. ನೀವೊಬ್ಬ ಶಿಸ್ತಿನ ಇಲಾಖೆಯಾದ ಪೊಲೀಸ್ ಇಲಾಖೆಯ ಪೇದೆಯಾಗಿ ಜವಾಬ್ದಾರಿಯುತ ಹುದ್ದೆಯಲ್ಲಿ, ಭರ್ತಿಯಾಗಿರುವುದಾಗಿ ತಿಳಿದಿದ್ದರೂ ಸಹ ನೀವು ಶಿಸ್ತನ್ನು ಮೀರಿ 42 ದಿನಗಳ ಕಾಲ ಯಾವುದೇ ರಜೆ, ಅನುಮತಿಯನ್ನು ಪಡೆಯದೆ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ನಿಮ್ಮ ಕರ್ತವ್ಯದಲ್ಲಿ ಅತೀವ ಅಶಿಸ್ತು ಘೋರ ದುರ್ನಡತೆ ಮತ್ತು ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರೆಂದು ದೋಷಾರೋಪಣೆ ಮಾಡಲಾಗಿದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ಆದರೆ ಶಿಸ್ತು ಪ್ರಾಧಿಕಾರವು ವಿಚಾರಣಾಧಿಕಾರಿಗಳ ಅಭಿಪ್ರಾಯವನ್ನು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 15–01–2009ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನಕ್ಕೆ ಎರಡು ವರ್ಷಗಳ ಕಾಲ ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಇಳಿಸಲಾಗಿದೆ. ಅನಧಿಕೃತವಾಗಿ ಗೈರುಹಾಜರಾದ ದಿನಾಂಕ: 09–06–2007 ರಿಂದ 20–07–2007ರ ಅವಧಿಯನ್ನು ವೇತನ ರಹಿತ ರಜೆಯೆಂದು ದಿನಾಂಕ: 28–07–2007 ರಿಂದ 12–08–2007ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 14-02-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ, ದಿನಾಂಕ: 15-01-2009ರ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 57 ಪೊಸಿಅ 2011 ಬೆಂಗಳೂರು, ದಿನಾಂಕ: 21-4-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಆರ್. ವೆಂಕಟೇಶ್, ಸಿ.ಪಿ.ಸಿ., ರಾಬರ್ಟಸನ್ ಪೇಟೆ ಪೊಲೀಸ್ ಠಾಣೆ, ಕೆ.ಜಿ.ಎಫ್., ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ: 15-01-2009ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶ: ಮಾರ್ಪಡಿಸಿ, ಇವರ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನಕ್ಕೆ ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಇಳಿಸುವ ದಂಡನೆಯನ್ನು ವಿಧಿಸಿ, ಅನಧಿಕೃತವಾಗಿ ಗೈರುಹಾಜರಾದ ದಿನಾಂಕ: 09-6-2007 ರಿಂದ 20-7-2007 ರವರೆಗಿನ ಅವಧಿಯನ್ನು ವೇತನ ರಹಿತ ರಜೆಯೆಂದು ಹಾಗೂ ದಿನಾಂಕ: 28-7-2007 ರಿಂದ 12-8-2007 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1254

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕೆ. ಕೇಶವ, ಸಿ.ಹೆಚ್.ಸಿ.-95, ಮೇಲುಕೋಟೆ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)ಪಿಆರ್/89/2010-11 (ಓ.ಬಿ. ಸಂಖ್ಯೆ: 441/10-11) ದಿನಾಂಕ: 17-02-2011
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು/13/2011-12 (ಓ.ಬಿ. ಸಂಖ್ಯೆ: 23/2011-12) ದಿನಾಂಕ: 27-7-2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 25-8-2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)40/2011-12 ದಿನಾಂಕ: 23-11-2011
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 209 ಸಿಎನ್‌ಎಸ್ 2011 ದಿನಾಂಕ: 09-4-2012

ಪ್ರಸ್ತಾವನೆ:

ಶ್ರೀ ಕೆ. ಕೇಶವ, ಸಿ.ಹೆಚ್.ಸಿ. ಮೇಲುಕೋಟೆ ಪೊಲೀಸ್ ಠಾಣೆ, ಇವರು ಈ ಹಿಂದೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಕೆ. ಕೇಶವ, ಸಿ.ಹೆಚ್.ಸಿ.95 ಆದ ನೀವು ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಹಿಂದೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕೆ.ಆರ್. ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ಸಿ.ಸಿ. ನಂಬರ್: 229/2009 (ಮೊ.ಸಂ. 31/06) ಸಿ.ಸಿ. ನಂ.134/09 (ಮೊ.ಸಂ. 102/06) ಸಿ.ಸಿ. ನಂಬರ್:

583/09 (ಮೊ.ಸಂ. 110/05) ರಲ್ಲಿ ನ್ಯಾಯಾಲಯದಿಂದ ಹೊರಡಿಸಲಾದ ಸಮನ್ಸ್‌ನ್ನು ಜಾರಿ ಮಾಡಲು ನಿಮ್ಮನ್ನು ನೇಮಕ ಮಾಡಿದ್ದು, ಸದರಿ ಸಮನ್ಸ್ ಅನ್ನು ಸಾಕ್ಷಿದಾರರನ್ನು ಪತ್ತೆ ಮಾಡಿ ಖುದ್ದು ಜಾರಿ ಮಾಡಲು ವಿಫಲರಾಗಿರುತ್ತೀರಿ. ನ್ಯಾಯಾಲಯದಿಂದ ಬಂದಂತ ಸಮನ್ಸ್/ವಾರೆಂಟ್ ಗಳನ್ನು ಪ್ರಾಮಾಣಿಕವಾಗಿ ಜಾರಿ ಮಾಡುವಂತೆ ಸಲಹೆ ಸೂಚನೆಗಳನ್ನು ನೀಡಿದ್ದರೂ ಸಹಾ ನೀವು ಸಿ.ಸಿ. ನಂ. 229/2009 (ಮೊ.ಸಂ.313/06) ಸಿ.ಸಿ. ನಂ. 134/09 (ಮೊ.ಸಂ. 102/06), ಸಿ.ಸಿ. ನಂ: 583/09 (ಮೊ.ಸಂ. 110/05)ರಲ್ಲಿ ಸಾಕ್ಷಿದಾರರುಗಳಿಗೆ ಸಮನ್ಸ್ ಜಾರಿ ಮಾಡಲು ವಿಫಲರಾಗುವ ಮೂಲಕ ನೀವು ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 17–02–2011ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು 6 ತಿಂಗಳ ಕಾಲ ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 27–7–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸುವ ಸಲುವಾಗಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 94 ಪೊಸಿಅ 2011 ಬೆಂಗಳೂರು, ದಿನಾಂಕ: 21–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಕೇಶವ, ಸಿ.ಹೆಚ್.ಸಿ.–95, ಮೇಲುಕೋಟೆ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರಿಗೆ ದಿನಾಂಕ: 17–02–2011 ರಂದು ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಭಾಗಶ: ಮಾರ್ಪಡಿಸಿ "ವಾಗ್ದಂಡನೆ" ಯನ್ನು ವಿಧಿಸಿ ಇನ್ನು ಮುಂದೆ ಇಂತಹ ಲೋಪವನ್ನು ಎಸಗದಂತೆ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1256 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಮಹಮ್ಮದ್ ಮುಖಾರಾಮ್, ಪಿ.ಎಸ್.ಐ., ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: ಡಿಇ(2)/ಸಿಓಪಿ/6/ಆರ್–7/2010 ದಿನಾಂಕ: 30–3–2010
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಹಿಂಬರಹ ಸಂಖ್ಯೆ: ಅಪೀಲು(4)/83/2010–11 ದಿನಾಂಕ: 24–3–2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 12–5–2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)13/2011–12 ದಿನಾಂಕ: 16–7–2011
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 216 ಸಿಎನ್‌ಎಸ್ 2011 ದಿನಾಂಕ: 09–4–2012

ಪ್ರಸ್ತಾವನೆ:

ಶ್ರೀ ಮಹಮ್ಮದ್ ಮುಖಾರಾಮ್, ಪಿ.ಎಸ್.ಐ., ಇವರು ಬೆಂಗಳೂರಿನ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಅಧಿಕಾರ ದುರುಪಯೋಗ ಹಾಗೂ ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಮಹಮ್ಮದ್ ಮುಖಾರಾಮ್, ಪಿ.ಎಸ್.ಐ., ಆದ ನೀವು ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ: 07–12–2009 ರಂದು ರಾತ್ರಿ 8–30 ಗಂಟೆಗೆ ರಾತ್ರಿ ಗಸ್ತಿಗೆ ಠಾಣೆಯ ಸಿಬ್ಬಂದಿಗಳನ್ನು ನೇಮಿಸಿ ಈ ಬೀಟ್ ರೀಡರ್‌ಗಳನ್ನು ಕೊಟ್ಟು ಕಳುಹಿಸಿದ್ದ ಸಿಬ್ಬಂದಿಗಳ ಪೈಕಿ 2 ಮತ್ತು 3ನೇ ಬೀಟಿಗೆ ನೇಮಿಸಿದ್ದ ಶ್ರೀ ನರಸಿಂಹಯ್ಯ, ಹೆಚ್.ಸಿ. 558 ಮತ್ತು ಶ್ರೀ ಸುರೇಶ್, ಪಿ.ಸಿ. 3311 ರವರನ್ನು ದಿನಂಕ: 08–12–2009 ರಂದು ಬೆಳಿಗಿನ ಜಾವ 4–15 ಗಂಟೆಯಲ್ಲಿ ನಿಮ್ಮ ಸೂಚನೆಯಂತೆ ಠಾಣಾ ಪ್ರಭಾರದಲ್ಲಿದ್ದ ಹೆಚ್.ಸಿ. 1893, ಶ್ರೀ ಜಗದೀಶ್ ರವರ ಮೂಲಕ ನಿಸ್ತಂತು ಸಂದೇಶ ನೀಡಿಸಿ ಠಾಣೆಗೆ ಕರೆಸಿಕೊಂಡು ಸದರಿ ಹೆಚ್.ಸಿ. ಮತ್ತು ಪಿ.ಸಿ. ರವರಿಗೆ ಡಾಬಸ್‌ಪೇಟೆಗೆ ಹೋಗಿ ಸುಲ್ತಾನ್ ಎಂಬುವರು ತೋರಿಸುವ ವ್ಯಕ್ತಿ ಶ್ರೀ ಗೌಸ್‌ಪಾಷ ರವರನ್ನು ಅವರ ಕ್ಯಾಂಟರ್ ವಾಹನದೊಂದಿಗೆ ಕರೆದುಕೊಂಡು ಬರುವಂತೆ ತಿಳಿಸಿದ ಮೇರೆಗೆ ಸದರಿ ಸಿಬ್ಬಂದಿ ಇಬ್ಬರೂ ಸುಲ್ತಾನ್‌ನೊಂದಿಗೆ ಬಸ್ಸಿನಲ್ಲಿ ಡಾಬಸ್‌ಪೇಟೆಗೆ ಹೋಗಿ ಡಾಬಸ್‌ಪೇಟೆ ದೊಡ್ಡಬಳ್ಳಾಪುರಕ್ಕೆ ಹೋಗುವ ತಿರುವಿನಲ್ಲಿ ಸದರಿ ಕ್ಯಾಂಟರ್ ಗಾಡಿ ಸಂಖ್ಯೆ: ಕೆಎ–43–63 ಅನ್ನು ಹಾಗೂ ಅದನ್ನು ಚಲಿಸುತ್ತಿದ್ದ ಗೌಸ್ ಪಾಷ ರವರನ್ನು ವಾಹನದೊಂದಿಗೆ ಕರೆಕೊಂಡು ಬಂದು ಯಶವಂತಪುರ ಪೊಲೀಸ್ ಠಾಣೆಯ ಬಳಿ ಇರುವ ಮೈಸೂರು ಲ್ಯಾಂಪ್ ರಸ್ತೆ ಬದಿಯಲ್ಲಿ ನಿಲ್ಲಿಸಿ ನಂತರ ಶ್ರೀ ಗೌಸ್‌ಪಾಷ ರವರನ್ನು ಕರೆದುಕೊಂಡು ಬಂದು ನಿಮ್ಮ ಬಳಿ ಹಾಜರುಪಡಿಸಿರುತ್ತಾರೆ. ಸದರಿ ಗೌಸ್‌ಪಾಷ ರವರನ್ನು ಸುಲ್ತಾನ್ ಬರುವವರೆಗೆ ಕೊಠಡಿಯ ಹೊರಗೆ ಇರುವಂತೆ ತಿಳಿಸಿರುತ್ತೀರಿ. ಸದರಿ ವ್ಯಕ್ತಿಯನ್ನು ಠಾಣೆಯಲ್ಲಿ ಕೂರಿಸಿರುವ ಬಗ್ಗೆ ಕ್ಯಾಂಟರ್ ವಾಹನವನ್ನು ಠಾಣೆಯ ಹೊರಭಾಗದಲ್ಲಿ ನಿಲ್ಲಿಸಿರುವ ಬಗ್ಗೆಯಾಗಲೀ ಠಾಣಾ ದಿನಚರಿಯಲ್ಲಿ ನಮೂದಿಸಿರುವುದಿಲ್ಲ ಹಾಗೂ ಸದರಿ ವ್ಯಕ್ತಿಯನ್ನು ಹಾಗೂ ಕ್ಯಾಂಟರ್ ವಾಹನವನ್ನು ಯಾವ ಕಾರಣಕ್ಕಾಗಿ ಕರೆತಂದಿರುತ್ತೀರಿ ಎಂಬ ಬಗ್ಗೆ ಠಾಣಾಧಿಕಾರಿಯವರ ಗಮನಕ್ಕೆ ತಂದಿರುವುದಿಲ್ಲ. ಯಶವಂತಪುರ ಪೊಲೀಸ್ ಠಾಣಾ ಸರಹದ್ದಿನಲ್ಲಿ ವಾಸವಾಗಿಲ್ಲದೇ ಇರುವಂತಹ ವ್ಯಕ್ತಿಗಳಾದ ಶ್ರೀ ಗೌಸ್‌ಪಾಷ ಮತ್ತು ಶ್ರೀ ಸುಲ್ತಾನ್ ಅವರ ಮಧ್ಯೆ ಹಣಕಾಸಿನ ತಕರಾರನ್ನು ಬಗೆಹರಿಸುವ ಸಲುವಾಗಿ ಶ್ರೀ ಗೌಸ್‌ಪಾಷ ರವರ ಕ್ಯಾಂಟರ್ ವಾಹನವನ್ನು ಠಾಣೆಗೆ ಕರೆತಂದಿರುತ್ತೀರಿ. ಈ ರೀತಿ ಬೇಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾದ ನೀವು ಪೊಲೀಸ್ ಠಾಣಾ ವ್ಯಾಪ್ತಿಗೊಳಪಡದಂತಹ ಸಿವಿಲ್ ವಿಚಾರದಲ್ಲಿ ಭಾಗಿಯಗಿರುವುದಲ್ಲದೇ ಹಣಕಾಸಿನ ತಕರಾರನ್ನು ಬಗೆಹರಿಸುವ ಸಲುವಾಗಿ ರಾತ್ರಿ ಗಸ್ತಿನಲ್ಲಿದ್ದ ಅಧೀನ ಸಿಬ್ಬಂದಿಗಳನ್ನು ಸಹ ಉಪಯೋಗಿಸಿಕೊಂಡು ತಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಅಧಿಕಾರ ದುರುಪಯೋಗ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 30–3–2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ವಿಳಂಬವಾಗಿ ಮೇಲ್ಮನವಿ ಸಲ್ಲಿಸಿದ ಕಾರಣದ ಮೇಲೆ ಪರಿಶೀಲಿಸಲು ಸಾಧ್ಯವಿಲ್ಲವೆಂದು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 24–3–2011 ರಂದು ಹಿಂಬರಹ ನೀಡಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ ದಿನಾಂಕ: 30–3–2010ರ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 48 ಪೊಸಿಅ 2011 ಬೆಂಗಳೂರು, ದಿನಾಂಕ: 21–4–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಮಹಮ್ಮದ್ ಮುಖಾರಾಮ್, ಪಿ.ಎಸ್.ಐ., ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ: 30–3–2010ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶ: ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ

ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1255

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲುಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರಿ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ : 7–8–1995.
2. ಉಪಾಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ : ರಾಕಾ/ನಾನಿ/119/2012, ದಿನಾಂಕ : 30–1–2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಉಪಾಧ್ಯಕ್ಷರು ಭಾರತೀಯ ಜನತಾ ಪಾರ್ಟಿ ಬೆಂಗಳೂರು ಇವರ ಶಿಫಾರಸ್ಸಿನ ಮೇರೆಗೆ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 71 ಯೋವಿವಿ 2009, ಬೆಂಗಳೂರು, ದಿನಾಂಕ : 7ನೇ ಏಪ್ರಿಲ್, 2012.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಕೆಳಕಂಡ ಆರು ಜನರನ್ನು ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು

ಕ್ರ.ಸಂ.	ಹೆಸರು	ವರ್ಗ
1.	ಶ್ರೀ ಕೆ.ಎಸ್. ವೃಷಭೇಂದ್ರ ಬಿನ್ ಶಿವಮೂರ್ತಿ, ಕಗ್ಗಲಿಪುರ ಅಂಚೆ & ಗ್ರಾಮ ಬಿ.ಜಿ.ಪುರ ಹೋಬಳಿ, ಮಳವಳ್ಳಿ ತಾಲ್ಲೂಕು	ಸಾಮಾನ್ಯ
2.	ಶ್ರೀಮತಿ ಹೆಚ್.ಟಿ. ಗೀತಾ ಕೋಂ. ಸಿದ್ದರಾಜು, ಬೆಳಕವಾಡಿ ಗ್ರಾಮ, ಚಿಕ್ಕಗಾಣಿಗರ ಬೀದಿ, ಮಳವಳ್ಳಿ ತಾಲ್ಲೂಕು	ಮಹಿಳೆ
3.	ಶ್ರೀ ಡಿ. ಬಸವರಾಜ್ ಅರಸ್ ಬಿನ್ ದೇವರಾಜು ಅರಸ್, ತ್ಯಾಗರಾಜ ರಸ್ತೆ, ಮಳವಳ್ಳಿ ಟೌನ್	ಹಿಂ. ವರ್ಗ
4.	ಶ್ರೀ ನಂಜಯ್ಯ ಬಿನ್ ಮಾದಯ್ಯ ನೇಣನೂರು ಗ್ರಾಮ ಕಿರುಗಾವಲು ಹೋಬಳಿ, ಮಳವಳ್ಳಿ, ತಾಲ್ಲೂಕು	ಎಸ್.ಸಿ.
5.	ಶ್ರೀ ಉಮೇಶ್ ಬಿನ್ ಸಿದ್ದೇಗೌಡ ವಳಿಗೆರೆದೊಡ್ಡಿ, ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು	ಸಾಮಾನ್ಯ
6.	ಶ್ರೀ ಸೈಯದ್ ಅನ್ವರ್ ಪಾಷ ಬಿನ್ ಸೈಯದ್ ಅಮೀರ್ ಸಾಬ್, ಮುಸ್ಲಿಂ ಬ್ಲಾಕ್, ಮಳವಳ್ಳಿ ಟೌನ್	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ರವೀಂದ್ರ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, 1&2(ಪ್ರ),

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 1197

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಯಚೂರು ಜಿಲ್ಲೆ ಮತ್ತು ರಾಯಚೂರು ತಾಲ್ಲುಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರಿ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ : 7–8–1995.
2. ಭಾರತೀಯ ಜನತಾ ಪಾರ್ಟಿಯ ರಾಜಾಧ್ಯಕ್ಷರ ಪತ್ರ ಸಂ.: ರಾಕಾ/ನಾನಿ/924/2011, ದಿನಾಂಕ : 9–12–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಭಾರತೀಯ ಜನತಾ ಪಾರ್ಟಿಯ ರಾಜಾಧ್ಯಕ್ಷರು ನಮೂದಿಸಿರುವ ಸದಸ್ಯರುಗಳನ್ನು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ರಾಯಚೂರು ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 47 ಯೋವಿವಿ 2010, ಬೆಂಗಳೂರು, ದಿನಾಂಕ : 2ನೇ ಏಪ್ರಿಲ್, 2012.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಯಚೂರು ಜಿಲ್ಲೆ ರಾಯಚೂರು ತಾಲ್ಲೂಕು ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರಗಳನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ರಾಯಚೂರು ಜಿಲ್ಲೆ ರಾಯಚೂರು ತಾಲ್ಲೂಕು ಕೆಡಿಪಿ

ಕ್ರ.ಸಂ.	ಹೆಸರು	ವರ್ಗ
1.	ಶ್ರೀ ಕೆ. ತಿರುಮಲ ರೆಡ್ಡಿ ಮಕ್ಕಲ್ ಪೇಟೆ, ರಾಯಚೂರು	ಸಾಮಾನ್ಯ
2.	ಶ್ರೀ ಸೋಮಪ್ಪ ಬಾಯಿದೊಡ್ಡಿ, ಮುಕ್ಕಾಂ & ಪೋಸ್ಟ್ ಬಾಯಿದೊಡ್ಡಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ	ಸಾಮಾನ್ಯ
3.	ಶ್ರೀ ಗೇಟ್ ರಂಗಾ ರೆಡ್ಡಿ ಬೇಸ್ತವಾರ ಪೇಟೆ, ರಾಯಚೂರು	ಹಿಂ. ವರ್ಗ
4.	ಶ್ರೀಮತಿ ಇಂದ್ರಮ್ಮ ಕೋಂ. ಕೆ ನರಸಯ್ಯ ಮಡ್ಡಿಪೇಟೆ, ರಾಯಚೂರು	ಮಹಿಳೆ
5.	ಶ್ರೀ ಹನುಮಂತನಾಯ್ಕ ಬಿನ್ ಭೂದ್ಯಪ ಮುಕ್ಕಾಂ ಬಾಯಿದೊಡ್ಡಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ	ಎಸ್.ಟಿ.
6.	ಶ್ರೀ ಚಾಂದಪಾಷ ಟೇಲರ್, ಮುಕ್ಕಾಂ & ಪೋಸ್ಟ್ ಮಟಮಾರಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ರವೀಂದ್ರ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ, 1&2(ಪ್ರ),
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 1196

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಬೀದರ್ ನಗರದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ.42 ಮತ್ತು 43 ರ (ಪೊಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಿಗೆ ರಸ್ತೆ ಕೆಳ ಸೇತುವೆಯನ್ನು ನಿರ್ಮಾಣ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಪತ್ರ ಸಂಖ್ಯೆ. ಮುಇಂ (ಉ)/ ತಾಸ–4/ ಸಿಂ–1/ ಬೀದರ/ 2011–12/ 05519 ದಿನಾಂಕ 6.09.2011 ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರಿಂದ.
2. ಸರ್ಕಾರದ ಪತ್ರ ಸಂಖ್ಯೆ. ಮೂಅಇ 63 ರಾರಾಹೆ 2009 ದಿನಾಂಕ 17.11.2011.
3. ಪತ್ರ ಸಂಖ್ಯೆ. ಮುಇಂ (ಉ)/ ತಾಸ–4/ ಸಿಂ–1/ ಬೀದರ/ 2011–12/ 09349 ದಿನಾಂಕ 13.12.2011 ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರಿಂದ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರು ರೈಲ್ವೆ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಬೀದರ್ ನಗರದಲ್ಲಿನ ರೈಲು ಮಾರ್ಗದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 & 43 ರ ಬದಲಾಗಿ (ಪೊಲೀಸ್ ಕಲ್ಯಾಣ ಮಂಟಪದ ಹತ್ತಿರ) ರಸ್ತೆ ಕೆಳಸೇತುವೆಯ ಕೂಡು ರಸ್ತೆಗಳ ನಿರ್ಮಾಣಕ್ಕೆ ಅಂದಾಜು ವೆಚ್ಚ ರೂ.260.00 ಲಕ್ಷಗಳಾಗುತ್ತದೆಂದು ತಿಳಿಸುತ್ತಾ, ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

2. ಮೇಲೆ ಓದಲಾದ ಕ್ರ.ಸಂ. (2) ರ ಸರ್ಕಾರದ ಪತ್ರದಲ್ಲಿ ಬೀದರ್ ನಗರದಲ್ಲಿನ ವಿವಿಧ ಎಲ್.ಸಿ.ಗಳ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ ಮಾಡುವ ಬಗ್ಗೆ ಕ್ರೋಢೀಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ರೈಲ್ವೆಯ ಮೇಲು ಸಹಿಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರನ್ನು ಕೋರಲಾಗಿತ್ತು.

3. ಮೇಲೆ ಓದಲಾದ ಕ್ರ.ಸಂ. (3) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರು 3 ರಸ್ತೆ ಕೆಳಸೇತುವೆಗಳಿಗೆ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗಳು ಬೀದರ್ ನಗರದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿದ್ದು, ಈ ರಸ್ತೆ ಕೆಳಸೇತುವೆಗಳ ಕೂಡು ರಸ್ತೆ ಹಾಗೂ ಕೂಡು ರಸ್ತೆ ನಿರ್ಮಾಣದಲ್ಲಿ ಬರುವ ಯುಟಿಲಿಟಿಗಳನ್ನು ಸ್ಥಳಾಂತರಿಸುವ ಬಗ್ಗೆ ಕ್ರೋಢೀಕೃತ ಅಂದಾಜು ಪಟ್ಟಿಯನ್ನು ತಯಾರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ರಸ್ತೆ ಕೆಳಸೇತುವೆಗಳ ಕೂಡು ರಸ್ತೆ ಹಾಗೂ ಯುಟಿಲಿಟಿ ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆಯ ವಿವರಗಳು ಕೆಳಕಂಡಂತಿದ್ದು, ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅಂದಾಜು ವೆಚ್ಚ ರೂ.260.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

			(ಲಕ್ಷ ರೂ.ಗಳಲ್ಲಿ)
1)	ಕೂಡು ರಸ್ತೆ ನಿರ್ಮಾಣ	–	150.00
2)	ಭೂಸ್ವಾಧೀನ	–	29.46
3)	ವಿದ್ಯುತ್ ಕಂಬಗಳ ಸ್ಥಳಾಂತರ	–	1.00
4)	ನೀರು ಸರಬರಾಜು ಮತ್ತು ಪೈಪ್ ಸ್ಥಳಾಂತರ	–	72.00
5)	ಟೆಂಡರ್ ಪ್ರೀಮಿಯಂ	–	7.55
	ಒಟ್ಟು	–	**260.00**

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಮೂಅಇ 63 ರಾರಾಹೆ 2009, ಬೆಂಗಳೂರು, ದಿನಾಂಕ: 27.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 ಮತ್ತು 43 ರ (ಪೊಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಾಗಿ ರಸ್ತೆ ಕೆಳ ಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು ರೂ.260.00 (ರೂಪಾಯಿ ಇನ್ನೂರು ಅರವತ್ತು ಲಕ್ಷಗಳು ಮಾತ್ರ) ಲಕ್ಷಗಳ ಅಂದಾಜು ವೆಚ್ಚಕ್ಕೆ ಭೂಸ್ವಾಧೀನ ವೆಚ್ಚವನ್ನು ಹೊರತುಪಡಿಸಿ ರಾಜ್ಯ ಹಾಗೂ ರೈಲ್ವೆ ಮಂತ್ರಾಲಯ ಶೇಕಡ 50:50 ರಷ್ಟು ವೆಚ್ಚ ಭರಿಸಲು ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

- ಆಡಳಿತಾತ್ಮಕ ಅನುಮೋದನೆ ನೀಡಿರುವ ವೆಚ್ಚಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
- ಯೋಜನೆಗೆ ಕಾಲಮಿತಿಯನ್ನು ನಿಗದಿಪಡಿಸಿ ಆ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು;
- ಕಾಮಗಾರಿಯಲ್ಲಿ ಹೆಚ್ಚಳ / ಪರಿಷ್ಕೃತ ಅಂದಾಜು ವೆಚ್ಚವನ್ನು ಸರ್ಕಾರವು ಪರಿಗಣಿಸುವುದಿಲ್ಲ.
- ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಲೋಕೋಪಯೋಗಿ ಇಲಾಖೆಯೇ ಹೆಚ್ಚುವರಿ ಮೊತ್ತವನ್ನು ಭರಿಸತಕ್ಕದ್ದು.
- ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಾಗ ಕೆಟಿಪಿಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2. ಈ ಆದೇಶವನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಟಿಪ್ಪಣಿ ಸಂಖ್ಯೆ. ಲೋಇ 43 ಸಿಬಿಆರ್ 2012 ದಿನಾಂಕ 31.03.2012 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜೆ. ಸಂಪತ್ ಕುಮಾರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. 1287

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಬೀದರ್ ನಗರದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ.45 ಮತ್ತು 46 ರ ಬದಲಿಗೆ (ಆರ್.ಟಿ.ಓ ಕಛೇರಿ ಹತ್ತಿರ) ರಸ್ತೆ ಕೆಳ ಸೇತುವೆಯನ್ನು ನಿರ್ಮಾಣ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಪತ್ರ ಸಂಖ್ಯೆ. ಮುಇಂ (ಉ)/ ತಾಸ–4/ ಸಿಂ–1/ ಬೀದರ/ 2011–12/ 05519 ದಿನಾಂಕ 6.09.2011 ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರಿಂದ.
2. ಸರ್ಕಾರದ ಪತ್ರ ಸಂಖ್ಯೆ. ಮೂಅಇ 63 ರಾರಾಹೆ 2009 ದಿನಾಂಕ 17.11.2011.
3. ಪತ್ರ ಸಂಖ್ಯೆ. ಮುಇಂ (ಉ)/ ತಾಸ–4/ ಸಿಂ–1/ ಬೀದರ/ 2011–12/ 09373 ದಿನಾಂಕ 13.12.2011 ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರಿಂದ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರು ರೈಲ್ವೆ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಬೀದರ್ ನಗರದಲ್ಲಿನ ರೈಲು ಮಾರ್ಗದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 45 & 46 ರ ಬದಲಾಗಿ (ಆರ್.ಟಿ.ಓ ಕಛೇರಿ ಹತ್ತಿರ) ರಸ್ತೆ ಕೆಳಸೇತುವೆಯ ಕೂಡು ರಸ್ತೆಗಳ ನಿರ್ಮಾಣಕ್ಕೆ ಅಂದಾಜು ವೆಚ್ಚ ರೂ. 125.00 ಲಕ್ಷಗಳಾಗುತ್ತದೆಂದು ತಿಳಿಸುತ್ತಾ, ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

2. ಮೇಲೆ ಓದಲಾದ ಕ್ರ.ಸಂ. (2) ರ ಸರ್ಕಾರದ ಪತ್ರದಲ್ಲಿ ಬೀದರ್ ನಗರದಲ್ಲಿನ ವಿವಿಧ ಎಲ್.ಸಿ.ಗಳ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ ಮಾಡುವ ಬಗ್ಗೆ ಕ್ರೋಢೀಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ರೈಲ್ವೆಯ ಮೇಲುಸಹಿಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರನ್ನು ಕೋರಲಾಗಿತ್ತು.

3. ಮೇಲೆ ಓದಲಾದ ಕ್ರ.ಸಂ. (3) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರು 3 ರಸ್ತೆ ಕೆಳಸೇತುವೆಗಳಿಗೆ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗಳು ಬೀದರ್ ನಗರದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿದ್ದು, ಈ ರಸ್ತೆ ಕೆಳಸೇತುವೆಗಳ ಕೂಡು ರಸ್ತೆ ಹಾಗೂ ಕೂಡು ರಸ್ತೆ ನಿರ್ಮಾಣದಲ್ಲಿ ಬರುವ ಯುಟಿಲಿಟಿಗಳನ್ನು ಸ್ಥಳಾಂತರಿಸುವ ಬಗ್ಗೆ ಕ್ರೋಢೀಕೃತ ಅಂದಾಜು ಪಟ್ಟಿಯನ್ನು ತಯಾರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ರಸ್ತೆ ಕೆಳಸೇತುವೆಗಳ ಕೂಡು ರಸ್ತೆ ಹಾಗೂ ಯುಟಿಲಿಟಿ ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆಯ ವಿವರಗಳು ಕೆಳಕಂಡಂತಿದ್ದು, ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅಂದಾಜು ವೆಚ್ಚ ರೂ.215.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

			(ಲಕ್ಷ ರೂ.ಗಳಲ್ಲಿ)
1)	ಕೂಡು ರಸ್ತೆ ನಿರ್ಮಾಣ	–	125.00
2)	ಭೂಸ್ವಾಧೀನ	–	87.144
3)	ವಿದ್ಯುತ್ ಕಂಬಗಳ ಸ್ಥಳಾಂತರ	–	0.30
4)	ನೀರು ಸರಬರಾಜು ಮತ್ತು ಪೈಪ್ ಸ್ಥಳಾಂತರ	–	2.00
5)	ಟೆಂಡರ್ ಪ್ರೀಮಿಯಂ	–	0.556
	ಒಟ್ಟು	–	**215.00**

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 51 ರಾರಾಹೆ 2011, ಬೆಂಗಳೂರು, ದಿನಾಂಕ: 27.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ.45 ಮತ್ತು 46 ರ (ಆರ್.ಟಿ.ಓ ಕಛೇರಿ ಹತ್ತಿರ) ಬದಲಾಗಿ ರಸ್ತೆ ಕೆಳ ಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು (ಕಾಮಗಾರಿಗೆ ತಗಲುವ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರದಿಂದಲೇ ಭರಿಸಲು) ರೂ.215.00 (ರೂಪಾಯಿ ಇನ್ನೂರು ಹದಿನೈದು ಲಕ್ಷಗಳು ಮಾತ್ರ) ಲಕ್ಷಗಳಿಗೆ ಕೆಳಕಂಡ ಷರತ್ತಿಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

- ಆಡಳಿತಾತ್ಮಕ ಅನುಮೋದನೆ ನೀಡಿರುವ ವೆಚ್ಚಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
- ಯೋಜನೆಗೆ ಕಾಲಮಿತಿಯನ್ನು ನಿಗದಿಪಡಿಸಿ ಆ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು;
- ಕಾಮಗಾರಿಯಲ್ಲಿ ಹೆಚ್ಚಳ / ಪರಿಷ್ಕೃತ ಅಂದಾಜು ವೆಚ್ಚವನ್ನು ಸರ್ಕಾರವು ಪರಿಗಣಿಸುವುದಿಲ್ಲ.
- ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಲೋಕೋಪಯೋಗಿ ಇಲಾಖೆಯೇ ಹೆಚ್ಚುವರಿ ಮೊತ್ತವನ್ನು ಭರಿಸತಕ್ಕದ್ದು.
- ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಾಗ ಕೆಟಿಪಿಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2. ಈ ಆದೇಶವನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಟಿಪ್ಪಣಿ ಸಂಖ್ಯೆ. ಲೋಇ 44 ಸಿಬಿಆರ್ 2012 ದಿನಾಂಕ 31.03.2012 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜೆ. ಸಂಪತ್ ಕುಮಾರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. 1286

ಜಲಸಂಪನ್ಮೂಲ ಸಚಿವಾಲಯ

ವಿಷಯ: ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯನ್ನು (Dam Safety Review Panel) ಪುನರಚಿಸಿ, ಸದಸ್ಯರಿಗೆ ನೀಡುವ ಸಭಾ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: **1**. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಇಂಸಂಕೇ 2004 ಬೆಂಗಳೂರು, ದಿ: 23–01–07.

2. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 18 ಅಭಯೋ 2006, ಬೆಂಗಳೂರು ದಿ: 28–5–07.

3. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 22 ಅಭಯೋ 2005, ಬೆಂಗಳೂರು ದಿ: 4–12–06.

4, ಸರ್ಕಾರಿ ಸೇರ್ಪಡೆ ಆದೇಶ ಸಂಖ್ಯೆ: ಜಸಂಇ 01 ಅಭಯೋ 2008, ಬೆಂಗಳೂರು ದಿ: 13–10–10.

5. ಅಧೀಕ್ಷಕ ಅಭಿಯಂತರರು, ಉ ಮತ್ತು ಮೌ, ಬೆಂಗಳೂರು, ರವರ ಪತ್ರ ಸಂ ಅಅ/ಮಾ ಮತ್ತು ಇ/ಅಣೆಕಟ್ಟು ಸುರಕ್ಷತೆ/2011–12/1040, ದಿನಾಂಕ: 22–12–11.

6.ಅಧೀಕ್ಷಕ ಅಭಿಯಂತರರು, ಉ ಮತ್ತು ಮೌ, ಬೆಂಗಳೂರು, ರವರ ಪತ್ರ ಸಂ ಅಅ/ಉ ಮತ್ತು ಮೌ/ಸ.ಇಂ–5/ಭಾರಿ ಅಣೆಕಟ್ಟುಗಳ ಪರಿವೀಕ್ಷಣೆ/11–12/781, ದಿ: 14–9–11.

ಪ್ರಸ್ತಾವನೆ:

ಕೇಂದ್ರ ಜಲ ಆಯೋಗದ ಅಣೆಕಟ್ಟು ಸುರಕ್ಷತಾ ಕಾರ್ಯ ವಿಧಾನದ ವರದಿಯ ಅನುಸಾರ ರಾಜ್ಯಗಳು ತಮ್ಮಲ್ಲಿರುವ 15 ಮೀಟರ್‌ಗಿಂತ ಎತ್ತರವಿರುವ ಅಣೆಕಟ್ಟುಗಳು ಅಥವಾ 60 ಮಿಲಿಯನ್ ಘನ ಮೀಟರ್‌ಗಿಂತ ಹೆಚ್ಚು ನೀರು ಶೇಖರಣಾ ಸಾಮರ್ಥ್ಯ ಹೊಂದಿರುವ ಅಣೆಕಟ್ಟುಗಳ ಸುರಕ್ಷತೆಯನ್ನು 10 ವರ್ಷಗಳಿಗೆ ಒಂದು ಬಾರಿ ಪರಿಶೀಲಿಸುವ ಸಲುವಾಗಿ ಒಂದು ಶಾಶ್ವತವಾದ ತಜ್ಞರ ಸಮಿತಿಯನ್ನು ನೇಮಿಸಬೇಕಾಗಿದ್ದು, ಅದರಂತೆ ರಾಜ್ಯದಲ್ಲಿರುವ ಅಣೆಕಟ್ಟುಗಳ ಸುರಕ್ಷತೆ ಪರಿಶೀಲಿಸುವ ಸಲುವಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಡಾ॥ ವೈ.ಕೆ.ಮೂರ್ತಿ, ಮಾಜಿ ಅಧ್ಯಕ್ಷರು, ಕೇಂದ್ರ ಜಲ ಆಯೋಗ, ಇವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಹಾಗೂ, ಮೇಲೆ ಓದಲಾದ ಕ್ರಮ ಸಂಖ್ಯೆ (2) ಹಾಗೂ (3) ರಲ್ಲಿ, ಡಾ॥ ವೈ.ಕೆ.ಮೂರ್ತಿ, ರವರ ಸಲಹೆಯಂತೆ, ಅಧಿಕಾರಿಗಳುಳ್ಳ 4 ಅಣೆಕಟ್ಟು ಸುರಕ್ಷಣಾ ಪರಿಶೀಲನಾ ತಂಡಗಳನ್ನು ರಚಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ, ಶ್ರೀ. ವೈ.ಎಸ್ ಕಾಂಬ್ಳೆ, ಸದಸ್ಯರು, ನಿಧನ ಹೊಂದಿದ ಕಾರಣ, ಅವರ ಸ್ಥಾನಕ್ಕೆ ಶ್ರೀ. ಎಂ.ಎಸ್ ರಾಮರಾವ್, ಮು.ಅ.(ನಿ) ರವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಮುಂದುವರೆಯುತ್ತ, ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ, ಅಧೀಕ್ಷಕ ಅಭಿಯಂತರರು, ಉ ಮತ್ತು ಮೌ,

ರವರು ಈ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಹಾಗೂ, ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ, ಅಧೀಕ್ಷಕ ಅಭಿಯಂತರರು, ಉ ಮತ್ತು ಮೌ, ರವರು ಡಿ.ಎಸ್.ಆರ್.ಪಿ ಅಧ್ಯಕ್ಷರಿಗೆ/ಸದಸ್ಯರಿಗೆ ನೀಡಲಾಗುತ್ತಿರುವ ಸಂಭಾವನೆಯನ್ನು ಪರಿಷ್ಕರಿಸಲು ಪ್ರಸ್ಥಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, 'ಅ ರಿಂದ ಏ' ವರೆಗೆ, ಒಟ್ಟು 9 ನಿಬಂಧನೆಗಳಿಗೆ ಒಳಪಟ್ಟಂತೆ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಜಸಂಇ 10 ಅಭಯೋ 2011 ಬೆಂಗಳೂರು, ದಿನಾಂಕ: 27–04–2012

I. ರಾಜ್ಯದಲ್ಲಿನ 15 ಮೀಟರ್‌ಗಿಂತ ಎತ್ತರವಿರುವ ಅಥವಾ 60 ಮಿಲಿಯನ್ ಘನ ಮೀಟರ್‌ಗಿಂತ ಹೆಚ್ಚು ನೀರು ಶೇಖರಣಾ ಸಾಮರ್ಥ್ಯ ಹೊಂದಿರುವ ಅಣೆಕಟ್ಟುಗಳ ಸುರಕ್ಷತೆಯನ್ನು ಪರಿಶೀಲಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ ಜಸಂಇ 35 ಇಂಸಂಕೇ 2004 ಬೆಂಗಳೂರು, ದಿ: 23–01–2007 ರಲ್ಲಿ, ಪುನರರಚಿಸಲಾದ ರಾಜ್ಯ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

ಕ್ರ.ಸಂ	ತಜ್ಞರ ಹೆಸರು – ಶ್ರೀಯುತ	ಪರಿಣಿತರ ವಿಷಯ	ಸ್ಥಾನ
1.	ಡಾ॥ ವೈ.ಕೆ. ಮೂರ್ತಿ, ಮಾಜಿ ಅಧ್ಯಕ್ಷರು, ಕೇಂದ್ರ ಜಲ ಆಯೋಗ "ಚಂಪ" ಡಿ–44, ಗುಲ್‌ಮೋಹರ್ ಪಾರ್ಕ್, ನವದೆಹಲಿ – 110 049	ಅಣೆಕಟ್ಟು ಸುರಕ್ಷತೆ	ಪ್ರಧಾನ ಸಲಹೆಗಾರರು
2.	ಎ.ಕೆ. ಬಜಾಜ್, ಮಾಜಿ ಅಧ್ಯಕ್ಷರು, ಕೇಂದ್ರ ಜಲ ಆಯೋಗ ಎ–167, ಡಿಫೆನ್ಸ ಕಾಲೋನಿ, ನವದೆಹಲಿ – 110 024.	ಡ್ಯಾಂ ಕನ್‌ಸ್ಟ್ರಕ್ಷನ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್	ಅಧ್ಯಕ್ಷರು
3.	ಎಸ್.ಬಿ. ಕೊಯಮತ್ತೂರು, ಅಧೀಕ್ಷಕ ಇಂಜಿನಿಯರ್ (ನಿವೃತ್ತ), ಕೊಯಮತ್ತೂರು ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ನಾರಾಯಣಪುರ, ಧಾರವಾಡ –580 008	ಡ್ಯಾಂ ಸೇಫ್ಟಿ ಸರ್ವೈಲೆನ್ಸ ಮೇಸನರಿ:ಕಾಂಕ್ರೀಟ್ ಡ್ಯಾಂ	ಉಪಾಧ್ಯಕ್ಷರು/ಸದಸ್ಯರು
4.	ರಾಮ್ ರಾವ್ ಎಂ.ಎಸ್, ಮುಖ್ಯ ಇಂಜಿನಿಯರ್ (ನಿವೃತ್ತ), # ಪಿ–16, 25ನೇ ಮೈನ್, ಜೆ.ಪಿ ನಗರ್, 1 ಫೇಸ್, ಬೆಂಗಳೂರು – 560 078.	ವಾಟರ್ ರಿಸೋರ್ಸ್‌ಸ್ ಅಂಡ್ ಇಂಜಿನಿಯರಿಂಗ್	ಸದಸ್ಯರು
5.	ಎಂ.ಬಿ. ಪರಪ್ಪಗೌಡರ್, ಪ್ರಧಾನ ಇಂಜಿನಿಯರ್ (ನಿವೃತ್ತ), ಬಸವ ಕೃಪ, ಶಿವಗಿರಿ, ಜಯನಗರ, ಧಾರವಾಡ – 580 007	ಅರ್ಥನ್ ಡ್ಯಾಂ	ಸದಸ್ಯರು
6.	ವೈ. ಆದಿನಾರಾಯಣ ಶಾಸ್ತ್ರಿ, ಮ್ಯಾನೇಜಿಂಗ್ ಡಾರೈಕ್ಟರ್ (ನಿವೃತ್ತ), ಪ್ಲಾಟ್ ನಂ.7, ಸೀತಾರಾಮನಗರ, ಗನ್ ರಾಕ್, ಸಿಖ್ ವಿಲೇಜ್, ಸಿಕಂದರಾಬಾದ್ – 500 009	ಗೇಟ್ಸ್ ಅಂಡ್ ಹಾಯಿಸ್ಟ್ಸ್	ಸದಸ್ಯರು
7.	ಶ್ರೀ. ಕೆ.ಎಸ್. ಕೃಷ್ಣಮೂರ್ತಿ, ಮಾಜಿ ನಿರ್ದೇಶಕರು, ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ # 928, 22ನೇ ಮೈನ್, 4 'ಟಿ' ಬ್ಲಾಕ್, ಜಯನಗರ, ಬೆಂಗಳೂರು – 560047	ಇಂಜಿನಿಯರಿಂಗ್ ಜಿಯಾಲಜಿ	ಸದಸ್ಯರು

ಕ್ರ.ಸಂ	ತಜ್ಞರ ಹೆಸರು – ಶ್ರೀಯುತ	ಪರಿಣಿತರ ವಿಷಯ	ಸ್ಥಾನ
8.	ಬಸವರಾಜ ಕೋಟಿ, ಮು.ಅ. (ನಿ), # 690, 9ನೇ ಕ್ರಾಸ್, ವಿಜಯನಗರ, 1ನೇ ಸ್ಟೇಜ್, ಮೈಸೂರು – 570 017	ಡ್ಯಾಂ ಡಿಸೈನ್ & ಕನ್ಸಟ್ರಕ್ಷನ್ ಆಫ್ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಅಂಡ್ ಮ್ಯಾನೇಜ್ಮೆಂಟ್	ಸದಸ್ಯರು
9.	ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಸಾಗರ.	–	ಖಾಯಂ ಆಹ್ವಾನಿತರು
10.	ಅಧೀಕ್ಷಕ ಅಭಿಯಂತರರು, ಉಸ್ತುವಾರಿ ಮತ್ತು ಮೌಲ್ಯಮಾಪನ, ಬಸವ ಭವನ, ಬಸವೇಶ್ವರ ರಸ್ತೆ, ಬೆಂಗಳೂರು–1.	–	ಸಮಾವೇಶಕರು

II. ಸಮಿತಿಯು ಈ ಕೆಳಕಂಡ ನಿಬಂಧನೆಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತದೆ.

ಅ. ಸಮಿತಿಯು ಕೇಂದ್ರ ಜಲ ಆಯೋಗದ ಅಣೆಕಟ್ಟು ಸುರಕ್ಷಣಾ ಕಾರ್ಯ ವಿಧಾನದ ವರದಿಯ ಕಂಡಿಕೆ 4.3.1.6 ರಲ್ಲಿ ನಮೂದಿಸಿರುವಂತೆ ಅಣೆಕಟ್ಟು ಸುರಕ್ಷತೆಗೆ ಸಂಬಂಧಿಸಿದಂತೆ, National Register of Large Dams ನಲ್ಲಿನಂತೆ, ರಾಜ್ಯದಲ್ಲಿನ 15 ಮೀಟರ್ ಗಿಂತ ಎತ್ತರವಿರುವ ಅಣೆಕಟ್ಟುಗಳು ಮತ್ತು 60 ಮಿ.ಘ.ಮೀ.ಗಿಂತ ಹೆಚ್ಚು ನೀರು ಶೇಖರಣಾ ಸಾಮರ್ಥ್ಯ ಹೊಂದಿರುವ ಅಣೆಕಟ್ಟುಗಳ ಸುರಕ್ಷತೆಯನ್ನು 10 (ಹತ್ತು) ವರ್ಷಗಳಿಗೊಮ್ಮೆ ಪರಿಶೀಲಿಸುತ್ತದೆ. ಸಮಿತಿಯು ಅಡಕ (1) ರಲ್ಲಿನ 'Terms of Reference' ಅನ್ನು ಅನುಸರಿಸುತ್ತದೆ.

ಆ. ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಹಾಗೂ ಉಪ ಕಾರ್ಯದರ್ಶಿ ಯವರನ್ನೊಳಗೊಂಡ ಕೇಂದ್ರ ಕಾರ್ಯಕಾರಿ ತಂಡವು ಸಮಿತಿಯು ಕೈಗೊಳ್ಳಬೇಕಾದ ಪರಿವೀಕ್ಷಣೆಗೆ ಅಣೆಕಟ್ಟುಗಳ ಆದ್ಯತಾ ಪಟ್ಟಿಗೆ ಅನುಮೋದನೆ ನೀಡುವುದು.

ಇ. ಸಮಿತಿಯು ಯೋಜನೆಗಳನ್ನು ಪರಿವೀಕ್ಷಣೆ ಮಾಡುವ ಸಂದರ್ಭಗಳಲ್ಲಿ ಸಂಬಂಧಪಟ್ಟ ಮುಖ್ಯ ಇಂಜಿನಿಯರ್‌ರವರು, ಸಮಿತಿಯ ಸದಸ್ಯರ ಪ್ರವಾಸಕ್ಕೆ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದು.

ಈ. ಸಮಿತಿಯ ಅಧಿಕಾರೇತರ ಸದಸ್ಯರು ಪರಿವೀಕ್ಷಣೆಯ ನಿಮಿತ್ತ ಕೇಂದ್ರ ಸ್ಥಾನದಿಂದ ಹೊರಗಡೆ ಪ್ರಯಾಣ ಮಾಡಿದಾಗ ಪ್ರವಾಸ ಭತ್ಯೆ ಹಾಗೂ ದಿನ ಭತ್ಯೆಯನ್ನು ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದಂತೆ ನಿಯಂತ್ರಿಸುವುದು. ಇದಲ್ಲದೆ, ಸಭೆಗಳಲ್ಲಿ ಭಾಗವಹಿಸಿದ/ಪರಿವೀಕ್ಷಣೆಯ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಿಗೆ ಪ್ರತಿ ಬೇಟಿಗೆ ರೂ.9000/– (ಒಂಬತ್ತು ಸಾವಿರ ರೂಪಾಯಿಗಳು ಮಾತ್ರ) ಹಾಗೂ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಪ್ರತಿ ಭೇಟಿಗೆ ರೂ.6500/– (ಆರು ಸಾವಿರದ ಐನೂರು ರೂಪಾಯಿಗಳು) ಗಳಂತೆ ಸಭಾ ಭತ್ಯೆಯನ್ನು ಪಡೆಯುತ್ತಾರೆ. ಹಾಗೂ, ಸಮಿತಿಯ ಅಧಿಕಾರೇತರ ಸದಸ್ಯರು/ಸಲಹೆಗಾರರು ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡಗಳ ಪರಿವೀಕ್ಷಣೆ ಸಂದರ್ಭದಲ್ಲಿ ರೂ. 6500/–ಗಳಂತೆ ಸಭಾ ಭತ್ಯೆಯನ್ನು ಪಡೆಯುತ್ತಾರೆ. ಮುಂದುವರೆಯುತ್ತ, ಸಮಿತಿಯು ಪರಿವೀಕ್ಷಣೆ ಮಾಡದ ಸಂದರ್ಭಗಳಲ್ಲಿ ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡಗಳು ನಡೆಸುವ ಪರಿವೀಕ್ಷಣೆಯ ವರದಿಗಳನ್ನು ಪರಿಶೀಲಿಸಿ ಅಂತಿಮಗೊಳಿಸಲು ಸಮಿತಿ ಅಧ್ಯಕ್ಷರಿಗೆ ರೂ. 6500/– ಮತ್ತು ಅಧಿಕಾರೇತರ ಸದಸ್ಯರು ರೂ. 4500/– ಗಳಂತೆ ಸಭಾ ಭತ್ಯೆಯನ್ನು ಪಡೆಯುತ್ತಾರೆ. ಮೇಲೆ ಸೂಚಿಸಿರುವ ಸಭಾ ಭತ್ಯೆಯನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ/836/ಅಕೋ–1/11 ದಿನಾಂಕ 07–01–12ರಲ್ಲಿ ನೀಡಿರುವ ಸಹಮತಿಯೊಂದಿಗೆ ನಿಗದಿಪಡಿಸಲಾಗಿದೆ.

ಉ. ಸಮಿತಿಯ ಅಧ್ಯಕ್ಷರಿಗೆ ಹಾಗೂ ಅಧಿಕಾರೇತರ ಸದಸ್ಯರಿಗೆ ದಿನ ಭತ್ಯೆ, ಪ್ರಯಾಣ ಭತ್ಯೆ ಹಾಗೂ ಸಭಾ ಭತ್ಯೆಯನ್ನು ಲೆಕ್ಕ ಮಾಡಲು ಅವರ ನಿವಾಸದಿಂದ ಹೊರಟು ಮತ್ತೆ ಅವರ ನಿವಾಸಕ್ಕೆ ಹಿಂದಿರುಗುವವರೆಗಿನ ಅವಧಿಯನ್ನು 24 ಘಂಟೆಗಳ ಲೆಕ್ಕದಲ್ಲಿ ಪರಿಗಣಿಸಲಾಗುವುದು (6 ಘಂಟೆಗಳಿಗಿಂತ ಕಡಿಮೆ ಅವಧಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ).

ಊ. ಸಮಿತಿಯ ಅಧ್ಯಕ್ಷರಿಗೆ ಹಾಗೂ ಅಧಿಕಾರೇತರ ಸದಸ್ಯರಿಗೆ ದಿನ ಭತ್ಯೆ, ಪ್ರಯಾಣ ಭತ್ಯೆ ಮತ್ತು ಸಭಾ ಭತ್ಯೆಗಳ ವೆಚ್ಚವನ್ನು ಸಂಬಂಧಪಟ್ಟ ಯೋಜನೆಗಳಡಿಯಲ್ಲಿ ಭರಿಸತಕ್ಕದ್ದು. ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ರವರು ಅಧಿಕಾರೇತರ ಸದಸ್ಯರ ಪ್ರಯಾಣ ಭತ್ಯೆ/ದಿನ ಭತ್ಯೆ, ಸಭಾ ಭತ್ಯೆಗಳ ಬಿಲ್ಲುಗಳನ್ನು ಮೇಲು ಸಹಿ ಮಾಡಿ (ಕೌಂಟರ್ ಸೈನ್) ಹಣ ಪಾವತಿ ಮಾಡಲು ಕ್ರಮ ಕೈಗೊಳ್ಳವುದು.

ಋ. ತಜ್ಞರ ಸಮಿತಿಯ ಅಧ್ಯಕ್ಷರು, ಪರಿವೀಕ್ಷಣಾ ವರದಿಯನ್ನು ಅಂತಿಮಗೊಳಿಸಿ ಭಾಗವಹಿಸಿದ ಎಲ್ಲಾ ಸದಸ್ಯರುಗಳ ಸಹಿಯೊಡನೆ (ಅಧ್ಯಕ್ಷರ ಸಹಿಯನ್ನೊಳಗೊಂಡಂತೆ) ವರದಿಯನ್ನು ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ರವರಿಗೆ ಕಳುಹಿಸಿ ಪ್ರತಿಯನ್ನು ನಿರ್ದೇಶಕರು,

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್. ಸಾಗರ, ಅ.ಅ ಉ ಮತ್ತು ಮೌ, (ಸಂಚಾಲಕರು) ಬೆಂಗಳೂರು ಮತ್ತು ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ರವರಿಗೆ ಕಳುಹಿಸುವುದು.

ಎ. ಒಂದು ವೇಳೆ ಹೊರ ಏಜನ್ಸಿಯಿಂದ ತಜ್ಞ ಸಲಹೆಯು ಅಗತ್ಯವಾದಲ್ಲಿ, ಕೇಂದ್ರ ಕಾರ್ಯಕಾರಿ ಸಮಿತಿಯು, ಈ ಸಮಿತಿಯ ತಜ್ಞರಿಗೆ ಅನ್ವಯವಾಗುವ ನಿಬಂಧನೆ ಮತ್ತು ಷರತ್ತುಗಳನ್ನೇ ಅನುಸರಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ವಿಶೇಷ ಸಲಹೆಗಳನ್ನು ನೀಡುವ ಏಜನ್ಸಿಗೆ ಪಾವತಿಸಬೇಕಾದ ಮೊಬಲಗನ್ನು ಮೇಲೆ ನಿಗಧಿಪಡಿಸಿದ ಅಂಶಗಳ ಪ್ರಕಾರ ನಿಗಧಿಪಡಿಸುವುದು. ಹಾಗೆ ಸಾಧ್ಯವಾಗದಿದ್ದಲ್ಲಿ, ಕೇಂದ್ರ ಕಾರ್ಯಕಾರಿ ಸಮಿತಿಯು ಸೂಕ್ತ ರೀತಿಯಲ್ಲಿ ವಿಷಯವನ್ನು ಅಂತಿಮಗೊಳಿಸುವುದು.

ಏ. ತಜ್ಞರ ಸಮಿತಿಯು ಗುರಿ ಸಾಧಿಸಲು ನಿರ್ಧಿಷ್ಟ ಕಾಲಾವಧಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಯಾವುದೇ ನಿರ್ಧಿಷ್ಟ ಸಮಸ್ಯೆಯನ್ನು ಪರೀಕ್ಷಿಸಲು ಸಮಿತಿಯ ಎಲ್ಲಾ ಸದಸ್ಯರ ಗಮನ ಅವಶ್ಯವಿಲ್ಲದಿರುವ ಸಂದರ್ಭಗಳಲ್ಲಿ ಅಥವಾ ಕೆಲವು ಸಂದರ್ಭಗಳಲ್ಲಿ ಯಾವುದೇ ಒಬ್ಬ ತಜ್ಞರ ಕಾರ್ಯಕ್ಷೇತ್ರದಲ್ಲಿ ಸಮಸ್ಯೆಯನ್ನು ವಿವರವಾಗಿ ತನಿಖೆ ಮಾಡುವ ಅಗತ್ಯ ಒದಗಬಹುದು. ಅಂತಹ ಸಂದರ್ಭಗಳಲ್ಲಿ ಕೇಂದ್ರ ಕಾರ್ಯಕಾರಿ ತಂಡವು ಸೂಕ್ತ ಕ್ರಮ ಕೈಗೊಳ್ಳುವುದು.

ಈ ಮೇಲಿನ ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ಹಾಗೂ, ಈ ವಿಷಯ ಕುರಿತು, ಈ ಹಿಂದೆ ಹೊರಡಿಸಲಾದ ಎಲ್ಲಾ ಸರ್ಕಾರದ ಆದೇಶಗಳನ್ನು ಅಧಿಕ್ರಮಿಸಲಾಗಿದೆ (Superseded.)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪ್ರದೀಪ್ ಮಿತ್ರ ಮಂಜುನಾಥ್
ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ)
ಜಲಸಂಪನ್ಮೂಲ ಇಲಾಖೆ

WATER RESOURCES SECRETARIAT

Sub:- Reconstitution of Dam Safety Review Panel(DSRP) and refixation of sitting fee payable to members- Reg.

Read:
1. Govt. Order No. WRD 35 IMSAMKE 2004, Bangalore, dated: 23-1-07.
2. Govt Order No. WRD 18 ABHAYO 2006, Bangalore dt. 28-05-07.
3. Govt Order No. WRD 22 ABHAYO 2005, Bangalore dt. 04-12-06.
4. Govt Addendum Order No. WRD 01 ABHAYO 2008, B'lore dt. 13-10-10.
5. Ltr from SE, M & E, B'lore No. SE/M&E/Dam Safety/2011-12/1040 dt 22-12-11.
6. Ltr from SE, M & E, Bangalore No. SE/M&E/AE-5/Inspection of Large dams/2011-12/781 dt 14-09-11.

PREAMBLE:

As per the report published on Dam Safety proceedings published by the Central Water Commission, the States have to constitute a standing panel of experts for safety review of all dams which are more than 15 mtrs in height or which store 60 MM^3 or more of water, once in 10 (ten) years. Accordingly, vide Government Order read at (1) above, an expert panel had been constituted for safety review of dams in the State under the chairmanship of Dr. Y.K. Murthy, Former Chairman, Central Water Commission. Also, as per suggestion of Dr. Y.K. Murthy, four Dam Safety Review Teams comprising of Officers, has also been constituted vide (2) and (3) above. Also, vide Addendum Order read at (4) above, Sri MS Rama Rao, CE (Retd) has been nominated as member due to the demise of Sri YS Kamble, member, DSRP. The Superintending Engineer, Monitoring and Evaluation, Bangalore, vide (5) above, has submitted proposals for reconstitution of this panel and vide (6) above, the Superintending Engineer, M & E has submitted proposals for refixation of the honorarium payable to the Chairman/Members of DSRP. The proposals have been examined by Government and subject to conditions A to I, following orders are issued.

G.O.No: WRD 10 DSP 2011 , BANGALORE, DATED: 27-04-2012.

I. The DSRP reconstituted vide Govt. Order No. WRD 35 IMSAMKE 2004, Bangalore, dated: 23-1-07 for safety review of all dams in the state which are more than 15 Mtrs. in height or which store more than 60 MM^3 of water, is hereby reconstituted as follows:-

Sl.No	Name - Sriyuths	Field of expertise	
1	Dr. Y.K. Murthy, Former Chairman, Central Water Commission, Champa D-44, Gulmohar Park, New Delhi - 110 049.	Dam safety	Principal Advisor
2	AK Bajaj, Former Chairman, Central Water Commission, A-167, Defence Colony, New Delhi – 110024.	Dam Construction Engineering and Maintenance	Chairman
3	S.B. Koimattur, Superintending Engineer (Retd), Koimattur Layout, Behind Canara Bank, Narayanapur, Dharwad - 580 006.	Dam Safety Surveillance, Masonry/Concrete Dam.	Vice Chairman/ Member
4	Rama Rao MS Chief Engineer (Retd.) # P-16, 25th Main, JP Nagar, I Phase, Bangalore – 560 078.	Water Resources Engineering	Member
5	M.B. Parappa Goudar, Engineer-in-Chief (Retd.) Basava Krupa, Shivagiri, Jayanagar, Dharwad - 580 007.	Earthen Dam	Member
6	Y. Adinarayana Sastri Managing Director (Retd.) Tungabhadra Steel Products Ltd., Plot No.7, Sitaramnagar Gunrock, Sikh village, Secunderabad-500 009.	Gates & Hoists	Member
7	K.S. Krishnamurthy, Former Director, Geological Survey of India No.928, 22nd Main, 4th `T' Block, Jayanagar, Bangalore-560 047.	Engineering Geology	Member

Sl.No	Name - Sriyuths	Field of expertise	
8	Basavaraja Koti, Chief Engineer (Retd.) # 690, 9th Cross, Vijayanagar, I Stage, Mysore – 570 017.	Dam Design and Construction of Hydro- Electric Projects & Management	Member
9	Director. K.E.R.S. K.R. Sagar - 571 607.	-	Permanent Invitee
10	Superintending Engineer, Monitoring & Evaluation, Basava Bhavan, Basaveshwara Road, Bangalore - 1.	-	Convenor

II. This Panel shall function under the following conditions.

a) The Panel shall examine the safety review of dams which are more than 15 Mtrs. in height or which store more than 60 MM^3 of water, once every ten years as per para 4.3.1.6 of the "Report of dam safety procedures" and as per the National Register of Large Dams published by Central Water Commission. The committee shall follow the terms of reference given in Annexure I.

b) The Central Executive Committee comprising of Secretary, Water Resources Department and Deputy Secretary, Water Resources Department shall approve the priority list of dams for inspection of the panel.

c) Whenever the panel visits the projects for inspection, the concerned Chief Engineer shall make all necessary arrangements for the members' travel.

d) Whenever the panel members travel from their Headquarters for inspection, the Travelling Allowance and Daily Allowance shall be regulated as per prevalent Government Order. Apart from this, the Chairman is also entitled for sitting fee at Rs. 9000/- (Rupees Nine thousand only) and the Non-official Members are entitled for sitting fee of Rs. 6500/- (Rupees six thousand five hundred only) per visit for participating in meetings/inspections. During inspections by the Dam safety Review Teams, the Non-official members/advisors of the committee are entitled for a sitting fee of Rs. 6500/- for participation. Further, the DSRP Chairman is entitled for fee of Rs. 6500/-and the Non-Official members are entitled for a sitting fee of Rs. 4500/- for scrutinizing and finalizing the Inspection Reports, in instances where they themselves do not participate in Inspections and the Inspection programs are conducted by the Dam Safety Review Teams.

The above sitting fees are fixed based on the concurrence given by the F.D. in their noting no. PWD/836/Finance Cell-1/11 Dt: 07-01-12.

e) For the Chairman and Non-official Members, the Daily Allowance/Travelling Allowance and Sitting fee shall be regulated considering the time of departure from their residence till their return at 24 hours period (duration less than Six hours shall not be considered)

f) The expenditure on travelling allowance, daily allowance and sitting fee of Chairman and Non-official Members shall be met out of the concerned project funds. The concerned Chief Engineer shall countersign the Travelling Allowance, Daily Allowance & Sitting fee bills of non-official members and arrange for payment.

g) The Chairman, Dam Safety Review Panel shall finalize the inspection reports and with the signature of all the members (including the signature of Chairman) shall forward the report to the Secretary, Water Resources Department, Director, Karnataka Engineering Research Station, the SE, M & E and the concerned Chief Engineer.

h) In case if any expert advice from external agency is required, the Central Executive Committee shall take suitable action as per the terms and conditions applicable to the members of this panel. Payment for the special advice given by any agency

shall be regulated as per the above terms. If this is not possible, the Central Executive Committee shall finalize the matter suitably.

i) Since the expert panel has to function under a fixed time frame, there may be occasions where a specific problem does not require the attention of all the members of panel or the problem related to a specific field requires detailed investigation. In such cases, the Central Executive Committee shall take suitable action.

The above order shall remain in force until further orders. All Government Orders issued previously in this regard shall stand superseded.

By Order & in the Name of the Governor of Karnataka,

Pradeep Mitra Manjunath

Deputy Secretary (KBJN)

Water Resources Department.

ANNEXURE-I TO GOVERNMENT ORDER NO. WRD 10 DSP 2011, BANGALORE, DATED: 27-04-2012.

Terms of Reference for Dam Safety Review Panel.

(for Existing Dams exceeding 15 m. in height or having storage volume of 60 MM^3 - vide CWC letter dt: 02.04.1990)

(The State) (The Projects) Responsibility for all matters relating to Dam safety during design, construction and operation rests with the owner, normally the State. A Dam Safety Review Panel (DSRP) provides independent experts' review and comments on safety matters to the owner, and to the Bank. The functioning of such a panel, which is advisory, in no way detracts from or substitutes for the expertise, resources or responsibilities of the owner. The panel's purview is strictly limited to safety matters, and does not extend to financial or economic issues, selection of alternative designs, construction phasing, or any other features of the facilities, except where safety is involved.

General and Purpose:

1. In situations where a dam has been designed, constructed or brought into operation without participation of a DSRP, or in situations where Bank-supported investments depend upon upstream facilities which have not been subjected to safety review, independent inspections are required. Accordingly, a DSRP shall be established for (the project) by (the State Government) to undertake periodic, comprehensive, independent reviews with the objective of evaluating features and actions pertaining to the safety of the dam, and providing recommendations to (the State Government) of actions that may be needed to upgrade the dam and appurtenances to acceptable safety standards. The DSRP shall be guided by the dam safety assurance objectives of the Government of India, (the State Government), related legislation, regulations, standards and guidelines.

2. The DSRP shall contain a nucleus of members having expertise in the following disciplines:

   (a) Flood hydrology,

   (b) Engineering geology (dam foundations),

   (c) Dam design (concrete, rock fill, earth fill as appropriate),

   (d) Dam construction, engineering and management.

   There should be four to six members of the DSRP, but all four disciplines should be fully represented. Should the project involve hydropower generation as an integral part of the dam and outlet works, an expert on the design and construction of power plants and appurtenant waterways shall also be included as a member of the DSRP.

3. A Chairman shall be appointed amongst the members by (the State Government) to coordinate the communications of the DSRP, to call and chair its meetings, to ensure the membership's objectivity, and to provide balance to its reviews and recommendations. The person responsible for correspondence with the Chairman shall be nominated by (the State Government).

4. The flood hydrology member may be released at the discretion of the DSRP.

5. When, in the judgment of the DSRP, additional specific expertise is required, the Chairman will nominate qualified expert(s) for appointment to the panel to perform special assignments or evaluations on short notice, and report results directly to the panel. The assignments of such experts shall not exceed an aggregate time of ( ) man days per year; additional time may be allowed subject to direct approval by (the State Government) upon written request and justification by the DSRP.

Meetings:

6. The DSRP will meet as frequently as judged necessary by the Chairman to assess the status of (the project) and to present recommendations.

7. DSRP meetings will normally be held at the project site, and attended by all members. Individual inspections of the site, designs or construction work should occur only under special circumstances, and in such cases, the member will send his report of findings to the other panel members for issuance jointly after concurrence by all members.

8. An advance schedule of meetings will be drawn up by the DSRP and (the State Government) and sent to the CWC and the World Bank to allow them to send an observer to meetings, if they so desire. The Bank will not participate in any manner in the proceedings and discussions. The CWC will directly participate only to the extent that it serves as a consultant and, as so requested by (the State Government). The CWC however may attend the sessions in the course of fulfilling its responsibilities for monitoring the country-wide Dam Safety programme.

Specific Actions:

9. The DSRP shall make a general review of the project records and history to become familiar with its operational requirements and their relationship to the facilities. With this background, the specific elements to be reviewed and evaluated by the DSRP shall include, but not be limited to the following:

   a) As built drawings and construction specifications;

   b) Design records, including geological reports, foundation, investigations, materials testing, materials strength parameters and stability analysis;

   c) Construction records and recent operation and maintenance records, including any instrumentation data;

   d) Criteria, methodology and determination of the design flood, flood routing studies, and the spillway sizing. Examine spillway operation records, and evaluate the adequacy of spillway sizing.

   e) Emergency plans including downstream flooding effects, emergency reservoir draw down, notification of impending dangers to downstream municipal authorities, major flood early warning system, major spilling operations plan, and site access during emergencies.

10. The DSRP will carryout a field inspection utilizing a standard check-list prepared in advance, and note the condition of the elements on the check list and categorize their status as satisfactory, poor, or unsatisfactory. Additional narrative will be provided for poor and unsatisfactory elements on the basis of these notes and the design needed to assure the safety of the dam, categorized in regard to urgency.

11. The DSRP may request additional field data including the need for drilling, sampling, laboratory tests, or installation of instruments.

Support Services:

12. (The State Government) shall make the operations and maintenance staff of the dam available to respond to the DSRP's questions at the time of the field inspection. As appropriate, the observations of the operations shall become part of the record of the DSRP's report. (The State Government's) designers and engineering consultants, if any, shall be present during selected DSRP meetings. The DSRP will be provided the necessary background information, any relevant data, notes or explanations regarding the designs, computations or methods used. (The State Government's) Chief Engineer (for the project) will coordinate the assembling of such information. The DSRP may suggest additional studies to assist in evaluation of the matters relating to the dam's Safety Status.

13. (The State Government) shall provide clerical, drafting and reproduction services or the preparation of DSRP reports. The GOI and (the State Government) shall take necessary actions to allow prompt travelling clearance as requested by DSRP members or experts called for the meeting.

Reporting:

14. The report of the meeting will be prepared and signed by all members and presented to (the State Government) prior to departure of the members. The report will include.

a) areas of concern, request for additional analysis and recommendations, if any,

b) information presented to the DSRP (by the State),

c) issues raised by the state for consideration by the DSRP,

d) actions taken in response to recommendations of the DSRP,

e) action pending in response to earlier recommendations of the DSRP.

15. A copy of the DSRP's report and supplementary information shall be transmitted by the State Government to the Central Water Commission and the World Bank.

Pradeep Mitra Manjunath
Deputy Secretary (KBJN)
Water Resources Department.

ANNEXURE-II GOVERNMENT ORDER NO. WRD 10 DSP 2011, BANGALORE, DATED: 27-04-2012.

No. 3/19/DS/97/92

Central Water Commission

Dam Safety Monitoring Directorate

Room 710, Sewa Bhavan,
R.K.Puram, New Delhi - 110 066.
8th January 1998.

The Director (Chief Engineer),
Karnataka Engineering Research Station,
Krishnarajasagar,
Karnataka - 571607.

Sub: Criteria for declaring a dam as a "Dam in Distress."
Ref: KERS/DSG/F-24(17)/9732 dated 27.12.97.

Sir,

With reference to the above, it may be clarified that "after Phase-I inspection, if it is found by the State Dam Safety Committee that the dam is hydrologically or structurally not fulfilling standards set out in Phase-I inspection guidelines, the dam has to undergo Phase-II investigation. After Phase-II investigation, if a dam is unsafe, then the dam can be identified as a "Dam in Distress."

Yours faithfully,

Sd/-
K. Balakrishnan
Dy. director (DSM)

Pradeep Mitra Manjunath
Deputy Secretary (KBJN)
Water Resources Department

PR - 1309

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಯೋಜನಾ ಇಲಾಖೆಯಲ್ಲಿನ ಮೌಲ್ಯಮಾಪನ ವಿಭಾಗವನ್ನು ರದ್ದುಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಪಿಡಿ 08 ಇವಿಎನ್(2) 2011, ದಿನಾಂಕ : 11–7–2011.
2. ಸರ್ಕಾರದ ಆದೇಶ ಸಂಖ್ಯೆ : ಪಿಡಿ 20 ಇವಿಎನ್ 2011, ದಿನಾಂಕ : 5–9–2011.
3. ಅಧಿಕೃತ ಜ್ಞಾಪನ ಸಂಖ್ಯೆ : ಪಿಡಿ 8 ಇವಿಎನ್ 2011, ದಿನಾಂಕ : 30–9–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರಿ ಆದೇಶದಲ್ಲಿ ಹೊಸ ಯೋಜನೆಯಾದ "ಕರ್ನಾಟಕ ಮೌಲ್ಯಮಾಪನ ನೀತಿ" ಮತ್ತು "ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ" ಇದರ ರಚನೆ ಬಗ್ಗೆ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ಯೋಜನಾ ಇಲಾಖೆಯ ಪ್ರಸ್ತುತ ಮೌಲ್ಯಮಾಪನ ವಿಭಾಗದಲ್ಲಿರುವ ವಿವಿಧ ಹುದ್ದೆಗಳನ್ನು ಯೋಜನಾ ಇಲಾಖೆಯ ಇನ್ನುಳಿದ ವಿಭಾಗಗಳಿಗೆ ಮರು ಹೊಂದಾಣಿಕೆ ಮಾಡುವ ಮೂಲಕ ಭರ್ತಿ ಮಾಡುವುದಾಗಿ ಮತ್ತು ಮೇಲಿನ ಪ್ರಾಧಿಕಾರದ ನೋಂದಣಿ ನಂತರ ಹಾಗೂ ಸದರಿ ಪ್ರಾಧಿಕಾರಕ್ಕೆ ಸಿಬ್ಬಂದಿ ಬಂದ ನಂತರ ಮೌಲ್ಯಮಾಪನ ವಿಭಾಗವನ್ನು ಸ್ಥಗಿತಗೊಳಿಸಲಾಗುವುದೆಂದು ಸೂಚಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ನೋಂದಾಯಿಸಲ್ಪಟ್ಟಿರುತ್ತದೆ. ಅದರಂತೆ ಕ್ರಮಾಂಕ (3) ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿರುವುದರಿಂದ ಹಾಗೂ ಯೋಜನಾ ಇಲಾಖೆಯ ಮೌಲ್ಯಮಾಪನ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಗಳು, ಪ್ರಾಧಿಕಾರ ನೋಂದಣಿಯಾದ ದಿನದಿಂದಲೇ ಅಂದರೆ ದಿನಾಂಕ: 19–9–2011 ರಿಂದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಪ್ರಸ್ತುತ ಮೌಲ್ಯಮಾಪನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು 2012 ನೇ ಮಾರ್ಚ್ ಅಂತ್ಯದವರೆಗೆ ಅಥವಾ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಹುದ್ದೆಗಳನ್ನು ತುಂಬುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸುವಂತೆ ಸೂಚಿಸಲಾಗಿದೆ. ಈ ಸಂಬಂಧ 2011–12ನೇ ಸಾಲಿನ ಆರ್ಥಿಕ ಸಮೀಕ್ಷೆಯ ವರದಿಯನ್ನು ತಯಾರಿಸುವ ಕೆಲಸವು ಈಗಾಗಲೇ ಪೂರ್ಣಗೊಂಡಿರುವುದರಿಂದ, ಯೋಜನಾ ಇಲಾಖೆಯಲ್ಲಿನ ಮೌಲ್ಯಮಾಪನ ವಿಭಾಗವನ್ನು ದಿನಾಂಕ : 31–3–2012 ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಬೇಕೆಂದು ತೀರ್ಮಾನಿಸಲಾಗಿದೆ. ಅದರಂತೆಯೇ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಪಿಡಿ 22 ಎಸ್‌ಎಸ್‌ಎಂ 2012, ಬೆಂಗಳೂರು, ದಿನಾಂಕ : 30–3–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಯೋಜನಾ ಇಲಾಖೆಯ ಮೌಲ್ಯಮಾಪನ ವಿಭಾಗ ಹಾಗೂ ಸದರಿ ವಿಭಾಗದ ಈ ಕೆಳಕಂಡ ವಿವಿಧ 11 ಹುದ್ದೆಗಳನ್ನು ದಿನಾಂಕ : 31–3–2012 ಕ್ಕೆ ಅಂತ್ಯಗೊಳಿಸಿ ರದ್ದುಪಡಿಸಲಾಗಿದೆ :–

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಸಂಖ್ಯೆ
1.	ನಿರ್ದೇಶಕರು	1
2.	ಜಂಟಿ ನಿರ್ದೇಶಕರು	1
3.	ಉಪ ನಿರ್ದೇಶಕರು	1
4.	ಸಹಾಯಕ ನಿರ್ದೇಶಕರು	4
5.	ಎ.ಎಸ್.ಓ/ಸೀ. ಇನ್ವೆಸ್ಟಿಗೇಟರ್	3
6.	ಜೂ. ಇನ್ವೆಸ್ಟಿಗೇಟರ್	1
	ಒಟ್ಟು	11

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಕೆ. ಶ್ರೀನಿವಾಸ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ, (ಎಸ್–5).

ಪಿ.ಆರ್. 1195

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2011–12ನೇ ಸಾಲಿನಲ್ಲಿ ಕೊನೆಯ ಕಂತಾಗಿ ರೂ. 425.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಯೋಇ 15 ಮಪ್ರಮಂ 2011, ದಿನಾಂಕ : 3–10–2011.
2. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ : ಮಪ್ರಮಂ: ನಗದು ಅನುದಾನ : 2011–12/183, ದಿನಾಂಕ : 5–12–2011.
3. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ. ಇವರಿಂದ ಬಂದಿರುವ ಪತ್ರ ಸಂಖ್ಯೆ : ಸಂಮಪ್ರಮಂನಗದು : ಅನುದಾನ : 2011–12, ದಿನಾಂಕ : 31–1–2012.
4. ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ : ಆಇ 556 ವೆ–6/2012, ದಿನಾಂಕ : 30–3–2012.

ಪ್ರಸ್ತಾವನೆ :

2011–12ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–05–(ಯೋಜನೆ)" ಅಡಿಯಲ್ಲಿ ರೂ. 100.00 ಲಕ್ಷಗಳನ್ನು ಹಾಗೂ "4515–00–800–0–03" ಅಡಿಯಲ್ಲಿ ರೂ. 3300.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಪೈಕಿ ಒಟ್ಟು ರೂ. 2950.00 ಲಕ್ಷಗಳನ್ನು ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (4) ರ ಅ.ಟಿ.ಯಲ್ಲಿ ಕೊನೆಯ ಕಂತಾಗಿ ರೂ. 425.00 ಲಕ್ಷಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ತಿಳಿಸಿದೆ. ಅಂತೆಯೇ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 15 ಮಪ್ರಮಂ 2011, ಬೆಂಗಳೂರು, ದಿನಾಂಕ : 30–3–2012.

2011–12ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಬಂಡವಾಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "4515–00–800–0–03–132" ಅಡಿಯಲ್ಲಿ ರೂ. 425.00 ಲಕ್ಷಗಳನ್ನು (ನಾಲ್ಕು ನೂರಾ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯುಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2011–12 ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ : ಅ.ಇ. 556 ವೆಚ್ಚ–6/2012. ದಿನಾಂಕ : 30–3–2012 ರ ಅನ್ವಯ ಈ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರವೀಂದ್ರ ಕುಮಾರ್ ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ–1 & 2 (ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 1198

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ. ಎನ್. ಸಚಿನ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಪಂಡರಹಳ್ಳಿ, ಚಿತ್ರದುರ್ಗ ಜಿಲ್ಲೆ. ಇವರನ್ನು ಅನಧಿಕೃತ ಗೈರುಹಾಜರಿ ಪ್ರಕರಣದಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ

ಓದಲಾಗಿದೆ : ಆಯುಕ್ತರು ಆಕುಕ ಸೇವೆಗಳು ಬೆಂಗಳೂರುರವರ ಪತ್ರ ಸಂಖ್ಯೆ : ಡಿಪಿಜಿ/ಬೆಂ.ವಿ–II/ಚಿ/85/2010–11, ದಿನಾಂಕ : 23–1–2012.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 23–1–2012 ರ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಡಾ. ಎನ್. ಸಚಿನ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಪಂಡರಹಳ್ಳಿ, ಚಿತ್ರದುರ್ಗ ಜಿಲ್ಲೆ. ಇವರು ದಿನಾಂಕ : 9–8–2010 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ತದನಂತರ ಸದರಿಯವರು ದಿನಾಂಕ : 28–8–2010 ಮತ್ತು 29–8–2010 ರಂದು ಅನುಮತಿ ರಜೆ ಪಡೆದು ನಂತರ ಯಾವುದೇ ರಜೆಯನ್ನು ಪಡೆಯದೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಿ ಆಗಿರುತ್ತಾರೆ. ದಿನಾಂಕ:

23–2–2011 ರಂದು ಕರ್ತವ್ಯಕ್ಕೆ ಮರು ಹಾಜರಾಗಲು ಜಿಲ್ಲಾ ಆಕುಕ ಅಧಿಕಾರಿ ಚಿತ್ರದುರ್ಗ ಇವರನ್ನು ಅನುಮತಿ ಕೋರಿದ ಮೇರೆಗೆ ಅನುಮತಿಯನ್ನು ನೀಡಲಾಗಿದ್ದು. ಅದರಂತೆ ಸದರಿಯವರು ದಿನಾಂಕ : 19–4–2011ರಂದು ಕರ್ತವ್ಯಕ್ಕೆ ಹಾಜರಾಗಿ ನಂತರ ವೈಯುಕ್ತಿಕ ಕಾರಣಗಳಿಂದ ದಿನಾಂಕ : 10–8–2011 ರಿಂದ 30 ದಿನಗಳ ರಜೆಯನ್ನು ಮಂಜೂರು ಮಾಡಲು ಮನವಿ ಸಲ್ಲಿಸಿದಾಗ 15 ದಿನಗಳ ರಜೆಯ ಮೇಲೆ ತೆರಳಲು ಜಿಲ್ಲಾ ಆಕುಕ ಅಧಿಕಾರಿಗಳು ಅನುಮತಿ ನೀಡಿರುತ್ತಾರೆ. ತದನಂತರ ಡಾ.ಎನ್. ಸಚಿನ್, ಇವರು ದಿನಾಂಕ : 12–9–2011ರಂದು ಲಿಖಿತ ಮನವಿ ಸಲ್ಲಿಸಿ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ಹೋಗಬೇಕಾಗಿರುವುದರಿಂದ ವಿದ್ಯಾಭ್ಯಾಸ ಮುಗಿಯುವವರೆಗೂ ರಜೆ ಮಂಜೂರು ಮಾಡಲು ಕೋರಿದ್ದು. ಸದರಿ ಮನವಿಯಲ್ಲಿ ಯಾವ ಸ್ನಾತಕೋತ್ತರ ಪದವಿ. ಎಷ್ಟು ಅವಧಿ ? ಎಂಬುದನ್ನು ಮನವಿಯಲ್ಲಿ ನಮೂದಿಸದೆ ಅನಧಿಕೃತ ಗೈರುಹಾಜರಾಗಿರುವುದರಿಂದ ಖಾಯಂ ಪೂರ್ವಸೇವಾವಧಿಯ ಘೋಷಣೆಯ ಮುನ್ನವೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಿ ಆಗಿರುವುದರಿಂದ ಸದರಿ ವೈದ್ಯಾಧಿಕಾರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಗಳು 1977ರ ನಿಯಮ (6)(1)(2)ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಲು ಕೋರಿರುತ್ತಾರೆ.

ಸರ್ಕಾರವು ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಡಾ. ಎನ್. ಸಚಿನ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಪಂಡರಹಳ್ಳಿ, ಚಿತ್ರದುರ್ಗ ಜಿಲ್ಲೆ. ಇವರು ಖಾಯಂಪೂರ್ವ ಸೇವಾವಧಿಯಲ್ಲಿದ್ದರೂ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಸತತ ಗೈರುಹಾಜರಾಗಿದ್ದು. ಸದರಿಯವರ ಸೇವೇಯು ತೃಪ್ತಿಕರವಾಗಿಲ್ಲದೆ ಇರುವುದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಗಳು 1977ರ ನಿಯಮ (6)(1)(2)ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ

ಆದೇಶ ಸಂಖ್ಯೆ : ಆಕುಕ 82 ಎಂಎಸ್ಎ 2012, ಬೆಂಗಳೂರು, ದಿನಾಂಕ : 20–3–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಡಾ. ಎನ್. ಸಚಿನ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಪಂಡರಹಳ್ಳಿ, ಚಿತ್ರದುರ್ಗ ಜಿಲ್ಲೆ. ಇವರು ಖಾಯಂಪೂರ್ವ ಸೇವಾವಧಿಯಲ್ಲಿದ್ದರೂ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಸತತ ಗೈರುಹಾಜರಾಗಿದ್ದು, ಸದರಿಯವರ ಸೇವೆಯು ತೃಪ್ತಿಕರವಾಗಿಲ್ಲದೆ ಇರುವುದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಗಳು 1977ರ ನಿಯಮ (6)(1)(2)ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಫ್. ಹುಬ್ಬಳ್ಳಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1182 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಹೊರ ರಾಜ್ಯಗಳಲ್ಲಿರುವ ಛತ್ರಗಳು/ವಸತಿ ಗೃಹಗಳ ಅಭಿವೃದ್ಧಿ ಕಾಮಗಾರಿಗಳ ಉಸ್ತುವಾರಿಗೆ ಉನ್ನತಾಧಿಕಾರ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಅ.ಸ. ಪತ್ರ ಸಂಖ್ಯೆ : ಎಡಿಎಂ 6 ಸಿಆರ್ 91/2011–12, ದಿನಾಂಕ : 25–2–2012.

ಪ್ರಸ್ತಾವನೆ :

ಹೊರ ರಾಜ್ಯಗಳಾದ ಆಂಧ್ರಪ್ರದೇಶದ ತಿರುಮಲ, ಮಂತ್ರಾಲಯ, ಶ್ರೀ ಶೈಲಂ ಹಾಗೂ ಉತ್ತರಪ್ರದೇಶದ ವಾರಣಾಸಿ ಕ್ಷೇತ್ರಗಳಿಗೆ ರಾಜ್ಯದಿಂದ ಭೇಟಿ ನೀಡುವ ಭಕ್ತಾದಿಗಳ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ಛತ್ರಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ಮಹಾರಾಷ್ಟ್ರದ ಗುಡ್ಡಾಪುರದ ಶ್ರೀ ದಾನಮ್ಮ ದೇವಾಲಯ, ಪಂಡಾರಾಪುರ ಕ್ಷೇತ್ರ ಹಾಗೂ ತುಳಜಾಪುರ ಶ್ರೀ ತುಳಜಾ ಭವಾನಿ ದೇವಸ್ಥಾನ, ತಮಿಳುನಾಡಿನ ತಿರುಚಾನಂದೂರು ಕ್ಷೇತ್ರ, ಕೇರಳ ರಾಜ್ಯದ ಶಬರಿ ಮಲೈ ಅಯ್ಯಪ್ಪಸ್ವಾಮಿ ಈ ಕ್ಷೇತ್ರಗಳಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ಹೊಸದಾಗಿ ನಿರ್ಮಿಸಿ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ. ಅಂತಹ ಛತ್ರ ಹಾಗೂ ವಸತಿ ಗೃಹಗಳಲ್ಲಿ ಮೂಲಭೂತ ಸೌಲಭ್ಯ ಹಾಗೂ ವಸತಿ ಸೌಕರ್ಯಗಳನ್ನು ಒದಗಿಸಬೇಕಾದ ಹಿನ್ನೆಲೆಯಲ್ಲಿ ಹೊರ ರಾಜ್ಯಗಳ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಿ ಸಂಬಂಧಪಟ್ಟ ಪ್ರಸ್ತಾವನೆಗಳಿಗೆ ಮಂಜೂರಾತಿ ಪಡೆಯುವುದರ ಜೊತೆಗೆ ಹಾಲಿ ಚಾಲ್ತಿಯಲ್ಲಿರುವ ಕಾಮಗಾರಿಗಳ ಉಸ್ತುವಾರಿ ನೋಡಿಕೊಳ್ಳುವ ಸಲುವಾಗಿ ಉನ್ನತ ಮಟ್ಟದ ಸಮಿತಿ ರಚಿಸಲು ಆಯುಕ್ತರು, ಧರ್ಮಾದಾಯ ದತ್ತಿಗಳ ಇಲಾಖೆ ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 91 ಮುಅಬಿ 2012, ಬೆಂಗಳೂರು, ದಿನಾಂಕ : 31ನೇ ಮಾರ್ಚ್ 2012.

ಹೊರ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ಇವುಗಳಲ್ಲಿನ ರಾಜ್ಯದ ಛತ್ರ ಹಾಗೂ ವಸತಿ ಗೃಹ ಇವುಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಭಾಗದಲ್ಲಿ ತಿಳಿಸಿರುವ ಉದ್ದೇಶಕ್ಕೆ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ :–

1.	ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ	ಅಧ್ಯಕ್ಷರು
2.	ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ	ಸದಸ್ಯರು
3.	ಮುಖ್ಯ ವಾಸ್ತು ಶಿಲ್ಪಿ, ಬೆಂಗಳೂರು	ಸದಸ್ಯರು
4.	ಮುಖ್ಯ ಅಭಿಯಂತರರು ಕರ್ನಾಟಕ ವಾಸ್ತು ಸಂಪರ್ಕ, ಬೆಂಗಳೂರು	ಸದಸ್ಯರು
5.	ಶ್ರೀ ಮನಮೋಹನ, ನಿವೃತ್ತ ಮುಖ್ಯ ಅಭಿಯಂತರರು	ಸಲಹೆಗಾರರು
6.	ಶ್ರೀ ದೊಡ್ಡಚೌಡಪ್ಪ, ನಿವೃತ್ತ ಅಧೀಕ್ಷಕ ಅಭಿಯಂತರರು ಕರ್ನಾಟಕ ಲೋಕಾಯುಕ್ತಾ ಬೆಂಗಳೂರು	ಸಲಹೆಗಾರರು
7.	ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು	ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ, (ಮುಜರಾಯಿ).

ಪಿ.ಆರ್. 1186

COMMERCE AND INDUSTRIES SECRETARIAT

Sub : Formation of PPP Cell in the Commerce and Industries Department under the IDD engagement reg.

Ref: Letter from the Manager, Crisil Infrastructure Advisory, dated : 22-3-2012.

In the order portion of the Government Order No. CI 27 SPI 2012, dated : 28-3-2012, “Joint Director, O/o Commissioner for Industrial Development and Director for Industries & Commerce” shall be read as “Joint Director (Industrial Development), O/o Commissioner for Industrial Development and Director for Industries & Commerce”.

Other terms and conditions remain the same as in the G.O. read above.

By Order and in the name of the Governor of Karnataka,

JYOTHI. R.J.

Desk Officer (Technical Cell)

Commerce & Industries Department.

P.R. 1203

ಶಿಕ್ಷಣ ಸಚಿವಾಲಯ

ವಿಷಯ : ಬೆಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯಗಳನ್ನು ಪುನರ್ ಸಂಘಟಿಸಿ ತಾಂತ್ರಿಕ ಹಾಗೂ ಆಡಳಿತ ನಿರ್ವಹಣೆಯಲ್ಲಿ ಸಮತೋಲನ ತರುವ ಉದ್ದೇಶದಿಂದ ಹುದ್ದೆಗಳನ್ನು ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ : ದಿನಾಂಕ : 1–8–2011ರ ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆ ಇವರು ಪತ್ರ ಸಂಖ್ಯೆ : ಡಿಪಿಎಸ್/ಇ.ಎಸ್.ಟಿ.21/2011/ಪಿ–1366.

ಪ್ರಸ್ತಾವನೆ :

1. ಮೇಲೆ (1) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರು ಕೇಂದ್ರ ಮುದ್ರಣಾಲಯವು ವಿಧಾನಸೌಧದಿಂದ ಸುಮಾರು 20 ಕಿ.ಮೀ. ದೂರದಲ್ಲಿದ್ದು, ಸಚಿವಾಲಯ, ವಿಧಾನಮಂಡಲ ಹಾಗೂ ಇಲಾಖೆಗಳ ಕೆಲಸ ಕಾರ್ಯಗಳನ್ನು ಸೂಕ್ತವಾಗಿ ನಿರ್ವಹಿಸಲು ಹಾಗೂ ಕೇಂದ್ರ ಮುದ್ರಣಾಲಯದೊಂದಿಗೆ ಸಮನ್ವಯ ಸಾಧಿಸಬಹುದಾದಂತಹ ಒಂದು ಕಛೇರಿಯನ್ನು ವಿಕಾಸಸೌಧದಲ್ಲಿ ಸ್ಥಾಪಿಸಲಾಗಿದ್ದು

ಇದನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ ಒಂದು ಜಂಟಿ ನಿರ್ದೇಶಕರ, ಒಂದು ಸಹಾಯಕ ನಿರ್ದೇಶಕರ ಹಾಗೂ ಒಂದು ಉಪ ನಿರ್ದೇಶಕರ ಹುದ್ದೆಗಳನ್ನು ಸ್ಥಳಾಂತರಿಸಲು ಪ್ರಸ್ತಾಪಿಸಿರುತ್ತಾರೆ.

1. ಕಂಪೋಸಿಂಗ್ ಹಾಗೂ ಲೆಟರ್ ಪ್ರೆಸ್ ಶಾಖೆಗಳಲ್ಲಿ ಇರುವ ಹಳೆಯ ತಾಂತ್ರಿಕತೆಯ ಹೆಚ್ಚಿನ ಸಿಬ್ಬಂದಿಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು.
2. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿಗಿಂತಲೂ ಮೀರಿದ ಪ್ರಮಾಣದಲ್ಲಿ ನೇಮಕಾತಿ ಮಾಡಿರುವ ದಿನಗೂಲಿ ನೌಕರರ ಸೇವೆಯನ್ನು ಸಹ ಸೂಕ್ತವಾಗಿ ಬಳಸಿಕೊಳ್ಳುವುದು.
3. ತುಮಕೂರಿನಲ್ಲಿ ತಾಂತ್ರಿಕವಾಗಿ ಉತ್ತಮವಲ್ಲದ ಯಂತ್ರೋಪಕರಣಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ಅಥವಾ ವಿಲೇವಾರಿ ಮಾಡುವುದು.
4. ಮೈಸೂರಿನಲ್ಲಿ ಸುಮಾರು 300 ಜನ ಸಿಬ್ಬಂದಿ ಇದ್ದು ಇಲ್ಲಿ ಆಧುನಿಕ ಯಂತ್ರೋಪಕರಣಗಳಿಲ್ಲದೆ ಮಾನವ ಶಕ್ತಿಯ ಸಮರ್ಪಕ ಬಳಕೆ ಸಾಧ್ಯವಿಲ್ಲದೇ ಇದ್ದು ಈ ಬಗ್ಗೆ ಕೂಡಲೇ ಕ್ರಮವಹಿಸುವುದು.
5. ಸರ್ಕಾರಿ ಮುದ್ರಣ ಇಲಾಖೆಯಲ್ಲಿ ನಿರ್ವಹಿಸಬಹುದಾದ ಏಕ ವರ್ಣದ ಕೆಲಸ ಕಾರ್ಯಗಳ ಪ್ರಮಾಣದಲ್ಲಿ ಕಡಿಮೆ ಆಗುತ್ತಿದ್ದು, ಇತರೇ ಇಲಾಖೆಗಳು ಕೋರುವಂತಹ ನಾಲ್ಕು ಬಣ್ಣಗಳ ಮುದ್ರಣ, ಗಣಕ ಯಂತ್ರಗಳ ಲೇಖನ ಸಾಮಗ್ರಿ ಮೇಲೆ ಮುದ್ರಣ ಮುಂತಾದ ರೀತಿಯ ಮುದ್ರಣಗಳನ್ನು ನಿರ್ವಹಿಸಬಲ್ಲ ತಾಂತ್ರಿಕತೆಯನ್ನು ಇಲಾಖೆಯಲ್ಲಿ ಅಳವಡಿಸಿಕೊಳ್ಳುವುದು.
6. ಪ್ರಶ್ನೆ ಪತ್ರಿಕೆಗಳು, ಪರ್ಮಿಟ್‌ಗಳು, ರಶೀದಿ ಪುಸ್ತಕಗಳು, ಉತ್ತರ ಪುಸ್ತಕಗಳು ಮುಂತಾದವುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಬಲ್ಲ ಒಂದು ಭದ್ರತಾ ಮುದ್ರಣಾಲಯವನ್ನು ಸ್ಥಾಪಿಸುವುದು.
7. ಹೆಚ್ಚುವರಿ ಸಿಬ್ಬಂದಿಯನ್ನು ಸೂಕ್ತ ರೀತಿಯಲ್ಲಿ ವಿವಿಧ ಮುದ್ರಣಾಲಯಗಳಲ್ಲಿ ತೊಡಗಿಸಿಕೊಳ್ಳುವುದು.
8. ವಿಕಾಸಸೌಧದ ತಳಮಹಡಿಯಲ್ಲಿ ಒಂದು ಮುದ್ರಣಾಲಯವನ್ನು ಇರಿಸುವುದು ಅತೀ ಅವಶ್ಯಕವಾಗಿದ್ದು ಈ ಮುದ್ರಣಾಲಯಕ್ಕೆ ಸೂಕ್ತ ಸಿಬ್ಬಂದಿಯನ್ನು ಹಂಚಿಕೆ ಮಾಡುವುದು.

2. ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 134 ಇಎಸ್‌ಡಬ್ಲ್ಯೂ 2011, ಬೆಂಗಳೂರು, ದಿನಾಂಕ : 28-4-2012.

3. ಬೆಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯಗಳನ್ನು ಪುನರ್ ಸಂಘಟಿಸಿ ಆಡಳಿತಾತ್ಮಕ ಹಿತದೃಷ್ಟಿಯಿಂದ ತಾಂತ್ರಿಕ ಹಾಗೂ ಆಡಳಿತ ನಿರ್ವಹಣೆಯಲ್ಲಿ ಸಮತೋಲನ ತರುವ ಬಗ್ಗೆ ಈ ಕೆಳಕಂಡ ಹುದ್ದೆಗಳನ್ನು ಸ್ಥಳಾಂತರಿಸಲು ಆದೇಶಿಸಿದೆ.

ಕ್ರ. ಸಂ.	ಪದನಾಮ	ಹುದ್ದೆ ಸಂಖ್ಯೆ	ಹಾಲಿ ಹುದ್ದೆ ಇರುವ ಸ್ಥಳ	ಸ್ಥಳಾಂತರಿಸಿರುವ ಸ್ಥಳ
1.	ಜಂಟಿ ನಿರ್ದೇಶಕರು	1	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು	ಸರ್ಕಾರಿ ಮುದ್ರಣಾಲಯ, ವಿಧಾನಸೌಧ ಘಟಕ, ಬೆಂಗಳೂರು
2.	ಉಪ ನಿರ್ದೇಶಕರು	1	ಸರ್ಕಾರಿ ಮುದ್ರಣಾಲಯ, ವಿಧಾನಸೌಧ ಘಟಕ, ಬೆಂಗಳೂರು	ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು
3.	ಸಹಾಯಕ ನಿರ್ದೇಶಕರು	1	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು	ಸರ್ಕಾರಿ ಮುದ್ರಣಾಲಯ ವಿಧಾನಸೌಧ ಘಟಕ, ಬೆಂಗಳೂರು.

4. ಈ ಆದೇಶವನ್ನು ದಿನಾಂಕ : 21-1-2012 ರ ಆಂತರಿಕ ಆರ್ಥಿಕ ಸಲಹೆಗಾರರ ಅ.ಟಿ. ಸಂಖ್ಯೆ : ಶಿಇ 1247 ಐಎಫ್‌ಎಸ್ 2011 ರಲ್ಲಿ ಸಹಮತಿ ಪಡೆದು ಹಾಗೂ ದಿನಾಂಕ : 10-7-96 ರ ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 96, ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ.

ಪಿ.ಆರ್. 1296

ಕಾರ್ಮಿಕ ಸಚಿವಾಲಯ

ವಿಷಯ:– ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಪ್ರೊಬೇಷನರಿ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

ಓದಲಾಗಿದೆ:–
1. ಸರ್ಕಾರದ ಅಧಿಸೂಚನೆ ಸಂ: ಕಾಇ 09 ಕಾಬಾಸೇ 2009(1) ದಿನಾಂಕ: 27–06–2009.
2. ಸರ್ಕಾರದ ಅಧಿಸೂಚನೆ ಸಂ: ಕಾಇ 27 ಕಾಬಾಸೇ 2010, ದಿನಾಂಕ: 13–05–2010.
3. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರ ಪತ್ರ ಸಂ: ಈಎಸ್‌ಟಿ–2/ ಎಬಿಎಸ್/ಸಿಆರ್–36/11–12, ದಿನಾಂಕ 22.11.2011.

ಪ್ರಸ್ತಾವನೆ:

ಮೇಲೆ ಕ್ರ.ಸಂ.(1) ರಲ್ಲಿ ಓದಲಾದ ದಿನಾಂಕ: 27–06–2009 ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು 2007 ರ ನಿಯಮ 8(1) ಅಡಿಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಗೊಂಡ ಶ್ರೀಯುತರಾದ 1) ಶ್ರೀನಿವಾಸ್.ಎ. 2) ಪ್ರಕಾಶ್ ಶೆಣೈ.ಎ. ಮತ್ತು 3) ಉಮೇಶ್.ಎಂ.ಕೆ. ಈ ಮೂರು ಜನ ಅಭ್ಯರ್ಥಿಗಳಿಗೆ ಕಾರ್ಖಾನೆಗಳ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಕಾತಿ ನೀಡಲಾಗಿದೆ. ಸದರಿ ಅಧಿಸೂಚನೆಯಲ್ಲಿ ಈ ಅಭ್ಯರ್ಥಿಗಳು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಕಾರ್ಖಾನೆಗಳ ಸಹಾಯಕ ನಿರ್ದೇಶಕರ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದು ಮತ್ತು ನಿಗಧಿಪಡಿಸಿದ ತರಬೇತಿ ಪಡೆಯಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ 3 ಜನ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಮೇಲೆ ಕ್ರ.ಸಂ.(2) ರಲ್ಲಿ ಓದಲಾದ ದಿನಾಂಕ: 13–05–2010 ರ ಸರ್ಕಾರದ ಅಧಿಸೂಚನೆಯಲ್ಲಿ ಈ ಮೂರು ಜನ ಪರೀಕ್ಷಾರ್ಥ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ನಿಗದಿ ಪಡಿಸಿರುವ ತರಬೇತಿಯನ್ನು ಪೂರ್ಣಗೊಳಿಸಿದ ಕಾರಣ ಅವರುಗಳಿಗೆ ಇಲಾಖೆಯಲ್ಲಿ ಖಾಲಿ ಇದ್ದ ಸ್ಥಳಗಳಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗಿತ್ತು.

2. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರು ಮೇಲೆ ಕ್ರ.ಸಂ.3 ರಲ್ಲಿ ಓದಲಾದ ಅವರ ದಿನಾಂಕ: 22–11–2011 ರ ಪತ್ರದಲ್ಲಿ ಮೇಲೆ ಹೇಳಿದ 03 ಜನ ಪರೀಕ್ಷಾರ್ಥ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ಜುಲೈ 2011 ಕ್ಕೆ 2 ವರ್ಷಗಳ ಸೇವೆಯನ್ನು ಪೂರೈಸಿದ ಕಾರಣ ಹಾಗೂ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಕಾರಣ ಮತ್ತು ಅವರ 2 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾಗಳಿಲ್ಲದ ಕಾರಣ, ಕೆಲಸ ಕಾರ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ನಡೆಸಿಕೊಂಡು ಹೋಗುತ್ತಿರುವ ಕಾರಣ, ಮತ್ತು ಯಾರ ವಿರುದ್ಧವೂ ಇಲಾಖಾ ವಿಚಾರಣೆಗಳಾಗಲೀ ಅಥವಾ ಕ್ರಿಮಿನಲ್ ಪ್ರೊಸೀಡಿಂಗ್ಸ್‌ಗಳಾಗಲೀ ಬಾಕಿ ಇಲ್ಲದ ಕಾರಣ ಮತ್ತು ಹೂಡಲು ಉದ್ದೇಶಿಸಿಲ್ಲದ ಕಾರಣ ಅವರುಗಳು ಪ್ರೊಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಣೆ ಹೊರಡಿಸಿ ಸೇವೆಯಲ್ಲಿ ಮುಂದುವರೆಸಬೇಕೆಂದು ಕೋರಿರುತ್ತಾರೆ. ಸದರಿ ಅಧಿಕಾರಿಗಳ 2009–10 ಮತ್ತು 2010–11 ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರು ಮೇಲೆ ಹೇಳಿದ 03 ಜನ ಪರೀಕ್ಷಾರ್ಥ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯ್ತಿ ಸೇರಿ) ಉತ್ತೀರ್ಣರಾಗಿರುವುದಾಗಿ ಹಾಗೂ 2 ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿ ತೃಪ್ತಿಕರವಾಗಿ ಸೇವೆ ಸಲ್ಲಿಸಿರುತ್ತಾರೆಂದು ಶಿಫಾರಸ್ಸು ಮಾಡಿರುವುದರಿಂದ ಕರ್ನಾಟಕ ಸಿವಿಲ್ ಸೇವಾ (ಖಾಯಂಪೂರ್ವ ಅವಧಿ ನಿಯಮಾವಳಿ) 1977 ರ ನಿಯಮ 5 ರನ್ವಯ ಈ ಕೆಳಕಂಡ 03 ಜನ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ತೃಪ್ತಿಕರವಾಗಿ ಪರೀವಿಕ್ಷಣಾ ಅವಧಿಯನ್ನು ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 70 ಕಾಬಾಸೇ 2011(1), ಬೆಂಗಳೂರು, ದಿನಾಂಕ:18.04.2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಈ ಕೆಳಕಂಡ 03 ಜನ ಪರೀಕ್ಷಾರ್ಥ ಕಾರ್ಖಾನೆಗಳ ಸಹಾಯಕ ನಿರ್ದೇಶಕರುಗಳು ಕರ್ನಾಟಕ ಸಿವಿಲ್ ಸೇವಾ (ಖಾಯಂಪೂರ್ವ ಅವಧಿ ನಿಯಮಾವಳಿ) 1977 ರ ನಿಯಮ 5 ರನ್ವಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

ಕ್ರ.ಸಂ.	ಪರಿವೀಕ್ಷಣಾ ಕಾರ್ಮಿಕ ಅಧಿಕಾರಿಯ ಹೆಸರು ಶ್ರೀಯುತರುಗಳಾದ	ಕರ್ತವ್ಯಕ್ಕೆ ಹಾಜರಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ:
1	ಎ.ಶ್ರೀನಿವಾಸ್	02–07–2009	01–07–2011
2	ಪ್ರಕಾಶ್ ಶೆಣೈ.ಎ.	03–07–2009	02–07–2011
3	ಎಂ.ಕೆ.ಉಮೇಶ್	02–07–2009	01–07–2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ
(ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. 1222

ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಸಚಿವಾಲಯ

ವಿಷಯ : ಬಿಜಾಪುರ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯ ಕಾಲಾವಧಿಯನ್ನು ಮುಂದುವರಿಸುವ ಬಗ್ಗೆ

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಸಂಕಇ 114 ಕೆಎಂಯು 2004 ದಿನಾಂಕ 9–12–2005.

2) ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 205 ಕೆಎಂಯು 2009 ದಿನಾಂಕ: 03–04–2010.

3) ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರ ಪತ್ರ ಸಂಖ್ಯೆ: ಆಪ್ರಾಸಂಪ/ಬಿ.ತ.ಸ./ 2011–12/484, ದಿನಾಂಕ 19.03.2012.

ಪ್ರಸ್ತಾವನೆ:

ಬಿಜಾಪುರ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯನ್ನು ದಿನಾಂಕ 9–12–2005ರಿಂದ ಒಂದು ವರ್ಷದ ಅವಧಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯನ್ನು ಎರಡು ವರ್ಷಗಳ ಅವಧಿಗೆ ಪುನರ್ ರಚಿಸಿ ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರೆಸಿದೆ.

ಬಿಜಾಪುರ ಪಾರಂಪರಿಕ ಪ್ರದೇಶದ ಸಂಪೂರ್ಣ ಮತ್ತು ಸಮಿತಿ ನಿರ್ವಹಿಸಬಹುದಾದ ಕಾರ್ಯ ಚಟುವಟಿಕೆಯು ನಿರಂತರವಾಗಿ ನಡೆಯುವ ಚಟುವಟಿಕೆಗಳಾಗಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಪರಂಪರೆ ಪ್ರದೇಶಗಳಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಪಾರಂಪರಿಕ ಪ್ರದೇಶದ ಅಭಿವೃದ್ಧಿಗೆ ರಚಿಸಿರುವ ಸಮಿತಿಯ ಸಲಹೆಗಳು ಇನ್ನೂ ಧೀರ್ಘಾವಧಿಯವರೆಗೆ ಬೇಕಾಗುತ್ತದೆ. ಹಾಲಿಯಿರುವ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಹಾಗೂ ಅವರು ಮುಂದುವರೆಯಲು ಒಪ್ಪಿರುವುದರಿಂದ ಸದರಿ ಸಮಿತಿಯನ್ನು ದಿನಾಂಕ: 03–04–2012ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಆದೇಶ ಹೊರಡಿಸುವಂತೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 75 ಕೆಎಂಯು 2012 ಬೆಂಗಳೂರು, ದಿನಾಂಕ: 20.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬಿಜಾಪುರ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 205 ಕೆಎಂಯು 2009 ದಿನಾಂಕ 03–04–2010ರಲ್ಲಿ ಪುನರ್ ರಚಿಸಿದ ಸಮಿತಿಯನ್ನು ದಿನಾಂಕ: 03–04–2012ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್.ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ)

ಪಿ.ಆರ್. 1266

ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಸಚಿವಾಲಯ

ವಿಷಯ : ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯ ಕಾಲಾವಧಿಯನ್ನು ಮುಂದುವರಿಸುವ ಬಗ್ಗೆ

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಸಂಕಇ 127 ಕೆಎಂಯು 2004 ದಿನಾಂಕ 9–12–2005.

2) ಸರ್ಕಾರಿ ಆದೇಶ ಸಂಖ್ಯೆ: ಸಂಕಇ 145 ಕೆಎಂಯು 2007 ದಿನಾಂಕ 4–06–2008.

3) ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 21 ಕೆಎಂಯು 2009 ದಿನಾಂಕ: 23–01–2010.

4) ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರ ಪತ್ರ ಸಂಖ್ಯೆ: ಆಪ್ರಾಸಂಪ/ಗು.ತ.ಸ./ 2011–12/485, ದಿನಾಂಕ 19.03.2012.

ಪ್ರಸ್ತಾವನೆ:

ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯನ್ನು ದಿನಾಂಕ 9–12–2005ರಿಂದ ಒಂದು ವರ್ಷದ ಅವಧಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯನ್ನು ದಿನಾಂಕ: 09.12.2006ರಿಂದ ಎರಡು ವರ್ಷಗಳ ಅವಧಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರೆಸಿದೆ. ಹಾಗೂ ಈ ಸಮಿತಿಯನ್ನು ಪುನರ್ ರಚಿಸಿ ದಿನಾಂಕ: 22.01.2012ರವರೆಗೆ ಮೇಲೆ(3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರೆಸಿದೆ.

ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಸಂಪೂರ್ಣ ಮತ್ತು ಸಮಿತಿ ನಿರ್ವಹಿಸಬಹುದಾದ ಕಾರ್ಯ ಚಟುವಟಿಕೆಯು ನಿರಂತರವಾಗಿ ನಡೆಯುವ ಚಟುವಟಿಕೆಗಳಾಗಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಪರಂಪರೆ ಪ್ರದೇಶಗಳಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಪಾರಂಪರಿಕ ಪ್ರದೇಶದ ಅಭಿವೃದ್ಧಿಗೆ ರಚಿಸಿರುವ ಸಮಿತಿಯ ಸಲಹೆಗಳು ಇನ್ನೂ ಧೀರ್ಘಾವಧಿಯವರೆಗೆ ಬೇಕಾಗುತ್ತದೆ. ಹಾಲಿಯಿರುವ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಹಾಗೂ ಅವರು ಮುಂದುವರೆಯಲು ಒಪ್ಪಿರುವುದರಿಂದ ಸದರಿ ಸಮಿತಿಯನ್ನು ದಿನಾಂಕ: 22–01–2012ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಆದೇಶ ಹೊರಡಿಸುವಂತೆ ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 78 ಕೆಎಂಯು 2012 ಬೆಂಗಳೂರು, ದಿನಾಂಕ: 20.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಪುನರ್ ರಚಿಸಿದ ಸಮಿತಿಯ ಕಾಲಾವಧಿಯನ್ನು ದಿನಾಂಕ:22–01–2012ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್.ಗೀತಾಕುಮಾರಿ

ಪಿ.ಆರ್. 1265

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ)

ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಸಚಿವಾಲಯ

ವಿಷಯ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೇತರ ಹುದ್ದೆಗಳನ್ನು ದಿನಾಂಕ: 1–4–2012 ರಿಂದ 31–3–2013ರವರೆಗೆ ಮುಂದುವರಿಸುವ ಬಗ್ಗೆ

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 97 ಕೆಎಂಯು 2011, ದಿನಾಂಕ 16.05.2011.

2) ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 10 ಕೆಎಂಯು 2012 ದಿನಾಂಕ 23.02.2012

3) ಪತ್ರ ಸಂಖ್ಯೆ: ಆಪ್ರಾಸಂಪ/ಇಎಸ್‌ಟಿ:1:ಕ.ಸಂ.6:2011–12 ದಿ: 20.03.2012.

ಪ್ರಸ್ತಾವನೆ:

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೇತರ 26 ಹುದ್ದೆಗಳು ಹಾಗೂ ಕಮಿಟೆಡ್ ಯೋಜನೇತರ 7 ಹುದ್ದೆಗಳು ಸೇರಿದಂತೆ ಒಟ್ಟು 33 ಹುದ್ದೆಗಳನ್ನು ದಿನಾಂಕ 01.04.2011 ರಿಂದ ದಿನಾಂಕ 31–3–2012ರವರೆಗೆ ಒಂದು ವರ್ಷದ ಅವಧಿಗೆ ಮೇಲೆ(1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರೆಸಿ ಆದೇಶಿಸಲಾಗಿತ್ತು.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಸಮಾಗಮಗೊಳಿಸಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಎಂದು ಪುನರ್ ರಚಿಸಲಾಗಿದೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಹಾಗೂ ಕಮಿಟೆಡ್ ಯೋಜನೇತರ 7 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದ್ದು, ಸದರಿ ಹುದ್ದೆಗಳ ಮುಂದುವರಿಕೆ ಆದೇಶವು ದಿನಾಂಕ 31.3.2012ಕ್ಕೆ ಅಂತ್ಯಗೊಳ್ಳಲಿದೆ ಎಂದು ತಿಳಿಸಿ, ಕಮಿಟೆಡ್ ಯೋಜನೇತರ 7 ಹುದ್ದೆಗಳು ಹಾಗೂ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ದಿನಾಂಕ 1.4.2012 ರಿಂದ 31.3.2013ರವರೆಗಿನ ಅವಧಿಗೆ ಮುಂದುವರಿಸಿ ಅಧಿಕಾರಿ ಹಾಗೂ ಸಿಬ್ಬಂದಿಗಳ ವೇತನ ಪಾವತಿಸಲು ಅನುವಾಗುವಂತೆ ಚೆಕ್ ಲಿಸ್ಟ್‌ನ್ನು ಲಗತ್ತಿಸಿ ಮುಂದುವರಿಕೆ ಆದೇಶವನ್ನು ಶೀಘ್ರವಾಗಿ ಹೊರಡಿಸಲು ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇವರು ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 74 ಕೆಎಂಯು 2012 ಬೆಂಗಳೂರು, ದಿನಾಂಕ: 13.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಈ ಕೆಳಕಂಡ ಒಟ್ಟು 33 ಹುದ್ದೆಗಳನ್ನು ದಿನಾಂಕ **1–4–2012 ರಿಂದ 31–3–2013 ರವರೆಗೆ** ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಿದೆ.

1. ಲೆಕ್ಕಶೀರ್ಷಿಕೆ 2205–00–103–0–01 (ಕಮಿಟೆಡ್ ನಾನ್‌ಪ್ಲಾನ್)

1. ಉಪನಿರ್ದೇಶಕರು	–	1
2. ಪುರಾತತ್ವ ಸಹಾಯಕರು	–	2
3. ಅಟೆಂಡರ್	–	1
		4 ಹುದ್ದೆಗಳು

2. ಲೆಕ್ಕಶೀರ್ಷಿಕೆ 2205–00–107–0–01 (ಕಮಿಟೆಡ್ ನಾನ್‌ಪ್ಲಾನ್)

1. ಕ್ಯೂರೇಟರ್	–	3 ಹುದ್ದೆಗಳು
ಒಟ್ಟು ಕಮಿಟೆಡ್ ನಾನ್‌ಪ್ಲಾನ್		7 ಹುದ್ದೆಗಳು

3. ಲೆಕ್ಕಶೀರ್ಷಿಕೆ 2205–00–103–0–01 (ಯೋಜನೇತರ) (ತಾತ್ಕಾಲಿಕ)

1. ಸಹಾಯಕ ನಿರ್ದೇಶಕರು (ವಸ್ತುಸಂಗ್ರಹಾಲಯಗಳ ಅಭಿವೃದ್ಧಿ)	–	1
2. ಪುರಾತತ್ವ ಸಹಾಯಕರು	–	1
3. ಮಾನ್ಯೂಮೆಂಟ್ಸ್ ಅಟೆಂಡೆಂಟ್ಸ್	–	5
		7 ಹುದ್ದೆಗಳು

4. ಲೆಕ್ಕಶೀರ್ಷಿಕೆ 2205–00–107–0–01 (ಯೋಜನೇತರ) (ತಾತ್ಕಾಲಿಕ)

1. ಕ್ಯೂರೇಟರ್	–	2
2. ದ್ವಿತೀಯ ದರ್ಜೆ ಸಹಾಯಕರು	–	5
3. ಅಟೆಂಡರ್	–	1
4. ಗ್ರೂಪ್–ಡಿ	–	8
5. ಪ್ಯೂನ್	–	2
6. ರಾತ್ರಿ ಕಾವಲುಗಾರ	–	1
		19 ಹುದ್ದೆಗಳು
ಒಟ್ಟು ಯೋಜನೇತರ (ತಾತ್ಕಾಲಿಕ)		26 ಹುದ್ದೆಗಳು

ಘೋಷ್ವಾರೆ

1) ಕಮಿಟೆಡ್ ಯೋಜನೇತರ ಹುದ್ದೆಗಳು	–	7
2) ತಾತ್ಕಾಲಿಕ ಯೋಜನೇತರ ಹುದ್ದೆಗಳು	–	26

ಒಟ್ಟು ಹುದ್ದೆಗಳು		33

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10–7–96 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್.ಗೀತಾಕುಮಾರಿ

ಪಿ.ಆರ್. 1245

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ)

ಆರ್ಥಿಕ ಸಚಿವಾಲಯ

ವಿಷಯ: ಲೋಕಾಯುಕ್ತ ಬಲೆಯಲ್ಲಿ ಸಿಲುಕಿದ ಶ್ರೀ ಜಯಸಿಂಹ, ಜಿಲ್ಲಾ ವಿಮಾಧಿಕಾರಿ ಮತ್ತು ಶ್ರೀ ಡಿ.ಎಸ್. ಚಿದಾನಂದಮೂರ್ತಿ, ಅಧೀಕ್ಷಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರುಗಳನ್ನು ಅಭಿಯೋಜನೆಗೊಳಪಡಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:

1. ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು (ತನಿಖಾಧಿಕಾರಿ), ಇವರ ವರದಿ ಸಂಖ್ಯೆ:ಲೋಕ್.ತುಮ/ಮೊ.ನಂ.15/2010, ದಿನಾಂಕ: 8.11.2011.
2. ಉಪ ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಬಿಡಿ–66/ಸಿಆರ್– 15/2010/ ತುಮಕೂರು, ದಿನಾಂಕ:12.01.2012.
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾದ ಸಂಭಾಷಣೆಯ ವಿವರಗಳು.
4. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರ ಪತ್ರ ಸಂ. ವಿನಿ. ಸಿಶಾ. ಲೋಟ್ರಾ/919/2011–12, ದಿನಾಂಕ:22–2–2012.

ಪ್ರಸ್ತಾವನೆ:

ಶ್ರೀ ಡಿ.ಎಸ್. ಚಿದಾನಂದ ಮೂರ್ತಿ @ ಸಚ್ಚಿದಾನಂದ, ಕಛೇರಿ ಅಧೀಕ್ಷಕರು ಮತ್ತು ಶ್ರೀ ಜಯಸಿಂಹ, ಹಿಂದಿನ ಜಿಲ್ಲಾ ವಿಮಾಧಿಕಾರಿ, ಇವರುಗಳು ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ತುಮಕೂರು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ದಿನಾಂಕ:7.12.2010ರಂದು ಫಿರ್ಯಾದಿ ಶ್ರೀಮತಿ ಶಿವಮ್ಮರವರ ತಮ್ಮನಾದ ಶ್ರೀ ಎ.ಎಂ. ರಾಮಯ್ಯನವರಿಂದ ಲಂಚದ ಹಣ ಸ್ವೀಕಾರ ಆರೋಪಕ್ಕೆ ಸಂಬಂಧಿಸಿದಂತೆ, ಇವರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ, ತುಮಕೂರು, ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:15/2010 ದಾಖಲಾಗಿದ್ದು, ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳ ಪ್ರತಿಯನ್ನು ಉಪ ಪೊಲೀಸ್ ಮಹಾ ನಿರೀಕ್ಷಕರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದ ಮೂಲಕ ವಿಮಾ ನಿರ್ದೇಶಕರಿಗೆ ಕಳುಹಿಸಿರುತ್ತಾರೆ. ಮುಂದುವರೆದು, ಶ್ರೀ ಡಿ.ಎಸ್. ಚಿದಾನಂದ ಮೂರ್ತಿ, ಕಛೇರಿ ಅಧೀಕ್ಷಕರು ಮತ್ತು ಶ್ರೀ ಜಯಸಿಂಹ, ಹಿಂದಿನ ಜಿಲ್ಲಾ ವಿಮಾಧಿಕಾರಿ, ಇವರುಗಳ ವಿರುದ್ಧ ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಕಲಂ 7, 13(1)(ಡಿ) ಸಹವಾಚ 13 (2) ರಡಿ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಕಲಂ 19(1)(ಸಿ)ರಡಿ ಮಂಜೂರಾತಿ ನೀಡುವಂತೆ ವಿಮಾ ಇಲಾಖೆಯ ನಿರ್ದೇಶಕರನ್ನು ಕೋರಿರುತ್ತಾರೆ. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರು ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ವರದಿ ಮತ್ತು ಪತ್ರವನ್ನು ಸರ್ಕಾರಕ್ಕೆ ಕಳುಹಿಸಿ ಇಬ್ಬರೂ ಆಪಾದಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಮಂಜೂರಾತಿ ನೀಡುವ ಬಗ್ಗೆ ಸರ್ಕಾರದ ಆದೇಶ ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಉಪ ಪೊಲೀಸ್ ಮಹಾ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಮೇಲೆ ಕ್ರ.ಸ. (2)ರಲ್ಲಿ ಓದಲಾದ ಪತ್ರದೊಂದಿಗೆ ಕಳುಹಿಸಿಕೊಟ್ಟ ತನಿಖಾ ವರದಿ ಮತ್ತು ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀಮತಿ ಶಿವಮ್ಮ ಕೋ ಲೇಟ್ ವೈ.ಟಿ. ರಾಮಯ್ಯ, ಕೊಡಿಗೆಹಳ್ಳಿ, ಗುಬ್ಬಿ ತಾಲ್ಲೂಕು, ರವರ ಫಿರ್ಯಾದಿ ದಿನಾಂಕ:04.12.2010
2. ಪ್ರಥಮ ವರ್ತಮಾನ ವರದಿ ತುಮಕೂರು ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:15/2010, ದಿನಾಂಕ:04.12.2010.
3. ಪ್ರಾಯೋಗಿಕ ಪಂಚನಾಮೆ ದಿನಾಂಕ:04.12.2010,
4. ಪಂಚನಾಮೆ ದಿನಾಂಕ:06.12.2010,
5. ಟ್ರ್ಯಾಪ್‌ನ ಪಂಚನಾಮೆ ದಿನಾಂಕ:07.12.2010.
6. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಸಾಆಸಂ/ರಾಪ/ಲೋಕ್/152/10–11, ದಿನಾಂಕ:14.12.2010.
7. ಕೃತ್ಯ ನಡೆದ ಸ್ಥಳದ ನಕಾಶೆ: ತುಮಕೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ 2ನೇ ಮಹಡಿಯಲ್ಲಿರುವ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಜಿಲ್ಲಾ ವಿಮಾಧಿಕಾರಿಗಳ ಕಛೇರಿ.
8. ಕೆಳಕಂಡ ಸಾಕ್ಷಿಗಳ ಹೇಳಿಕೆ, ಮರುಹೇಳಿಕೆಗಳನ್ನು ಪರಿಶೀಲಿಸಲಾಗಿದೆ;
    i. ಶ್ರೀ ಚಂದ್ರಶೇಖರ ಬಿನ್ ಮೂಡ್ಲಿಗಿರಯ್ಯ, ಕೆ.ಎಸ್.ಆರ್.ಟಿ.ಸಿ. ಬಸ್ ಕಂಡಕ್ಟರ್, ಹದಲಗೆರೆ, ನಿಟ್ಟೂರು ಹೋಬಳಿ, ಗುಬ್ಬಿ ತಾಲ್ಲೂಕು.
    ii. ಶ್ರೀ ಎ.ಎಂ. ರಾಮಯ್ಯ ಬಿನ್ ಮೂಡ್ಲಿಗಿರಯ್ಯ, ಹದಲಗೆರೆ, ನಿಟ್ಟೂರು ಹೋಬಳಿ, ಗುಬ್ಬಿ ತಾಲ್ಲೂಕು.
    iii. ಶ್ರೀ ಎಸ್. ಸತೀಶ್ ಬಿನ್ ಸಿದ್ದಲಿಂಗಪ್ರಸಾದ್, ಎಸ್.ಡಿ.ಎ. ವಾಣಿಜ್ಯ ತೆರಿಗೆ ಇಲಾಖೆ, ತುಮಕೂರು.
    iv. ಶ್ರೀ ಕೃಷ್ಣಪ್ಪ ಬಿನ್ ಲೇಟ್ ಬಿ.ಆರ್. ದೊಡ್ಡರಂಗಯ್ಯ, ಅಸಿಸ್ಟೆಂಟ್ ಬೆಸ್ಕಾಂ, ಆರ್.ಎಸ್.ಡಿ. ದಬ್ಬೆಘಟ್ಟ ಅಂಚೆ, ದೊಡ್ಡೇರಿ ಮಧುಗಿರಿ ತಾಲ್ಲೂಕು, ತುಮಕೂರು.
    v. ಶ್ರೀ ವೀರರಾಜು ಬಿನ್ ಶಿವಣ್ಣ, ಕಛೇರಿ ಅಧೀಕ್ಷಕರು, ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ತುಮಕೂರು.
    vi. ಶ್ರೀ ಸಿದ್ದಯ್ಯ, ಜೂನಿಯರ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು.
    vii. ಶ್ರೀ ಎ.ಎನ್. ಧನಂಜಯ ಬಿನ್ ನಾಗರಾಜು, ಬೆಂಕಿಯ ಬಲೆ ಪತ್ರಿಕಾ ಸಂಪಾದಕರು, ಅರಕೆರೆ ಗ್ರಾಮ ದಂಡಿನಶಿವರ ಹೋಬಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.
    viii. ಶ್ರೀ ವಿ. ಬಸವರಾಜು, ಹೆಡ್ ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ತುಮಕೂರು.
    ix. ಶ್ರೀ ಹೆಚ್.ಎಸ್. ಪ್ರಕಾಶ್, ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ತುಮಕೂರು.
    x. ಶ್ರೀ ಪಿ. ನಾಗರಾಜು, ಪೊಲೀಸ್ ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ತುಮಕೂರು.
    xi. ಶ್ರೀ ರಾಘವೇಂದ್ರ, ಪೊಲೀಸ್ ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ತುಮಕೂರು.
    xii. ಶ್ರೀ ಮಂಜುನಾಥ, ಎ.ಪಿ.ಸಿ. ಕರ್ನಾಟಕ ಲೋಕಾಯುಕ್ತ ಪೊಲೀಸ್, ಅಧೀಕ್ಷಕರ ಕಛೇರಿ, ತುಮಕೂರು.
    xiii. ಶ್ರೀ ಕೆ.ಪಿ. ಶಿವಣ್ಣ, ಪೊಲೀಸ್ ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ತುಮಕೂರು.
9. ಶ್ರೀ ವೈ.ಟಿ. ರಾಮಯ್ಯ, ರೇಷ್ಮೆ ಪ್ರದರ್ಶಕರು, ರೇಷ್ಮೆ ಇಲಾಖೆ, ಇವರು ದಿನಾಂಕ: 29–7–2010 ರಂದು ಮೃತಪಟ್ಟಿರುವುದರಿಂದ ಇವರ ವಿಮಾ ಪಾಲಿಸಿಗಳ ಮರಣ ಜನ್ಯ ಇತ್ಯರ್ಥಪಡಿಸಲು ಲಂಚ ಪಡೆದ ಆರೋಪಗಳ ವಿವರ.
10. ಶ್ರೀ ಡಿ.ಎಸ್. ಚಿದಾನಂದ ಮೂರ್ತಿ, ಕಛೇರಿ ಅಧೀಕ್ಷಕರು ಮತ್ತು ಶ್ರೀ ಜಯಸಿಂಹ, ಅಂದಿನ ಜಿಲ್ಲಾ ವಿಮಾಧಿಕಾರಿ, ಇವರುಗಳು ದಿನಾಂಕ:07.12.2010ರಂದು ನೀಡಿದ ಸಮಜಾಯಿಷಿ.

ತನಿಖಾಧಿಕಾರಿಗಳಾದ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು, ಇವರು ಶ್ರೀ ಡಿ.ಎಸ್. ಚಿದಾನಂದ ಮೂರ್ತಿ, ಅಧೀಕ್ಷಕರು, ಮತ್ತು ಶ್ರೀ ಜಯಸಿಂಹ, ಜಿಲ್ಲಾ ವಿಮಾಧಿಕಾರಿ, ಇವರುಗಳ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ತುಮಕೂರು, ಆರಕ್ಷಕ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:15/2010ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13 (1) (ಡಿ) ಸಹವಾಚ 13 (2)ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀ ಡಿ.ಎಸ್. ಚಿದಾನಂದ ಮೂರ್ತಿ, ಅಧೀಕ್ಷಕರು ಮತ್ತು ಶ್ರೀ ಜಯಸಿಂಹ, ಜಿಲ್ಲಾ ವಿಮಾಧಿಕಾರಿ, ಇವರುಗಳು ವಿಮಾದಾರರಾದ ದಿವಂಗತ ಶ್ರೀ ವೈ.ಟಿ.ರಾಮಯ್ಯ, ರೇಷ್ಮೆ ಕೃಷಿ ಪ್ರದರ್ಶಕರು, ಹೊಂದಿದ್ದ ಪಾಲಿಸಿಗಳ ಮರಣಜನ್ಯ ಪ್ರಕರಣವನ್ನು ಇತ್ಯರ್ಥಪಡಿಸಲು ದಿವಂಗತರ ಪತ್ನಿಯಾದ ಶ್ರೀಮತಿ ಶಿವಮ್ಮ, ತುಮಕೂರು, ಇವರು ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ತುಮಕೂರು, ಇಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಇತ್ಯರ್ಥಪಡಿಸಲು ರೂ.6,000/– ಲಂಚಕ್ಕೆ ಬೇಡಿಕೆ ಸಲ್ಲಿಸಿರುತ್ತಾರೆ. ಲಂಚವನ್ನು ಕೊಡಲು ಬಯಸದೇ ಶ್ರೀಮತಿ ಶಿವಮ್ಮನವರು ತುಮಕೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ: 04.12.2010 ರಂದು ದೂರು ನೀಡಿರುತ್ತಾರೆ. ಈ ದೂರನ್ನು ಆಧರಿಸಿ ಪೊಲೀಸ್

ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು, ಇವರು ಕಾನೂನು ರೀತಿ ಪೂರ್ವಭಾವಿ ಕ್ರಮ ಕೈಗೊಂಡಿರುತ್ತಾರೆ. ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ತುಮಕೂರು, ಇಲ್ಲಿ ದಿನಾಂಕ:07.12.2010ರಂದು ಶ್ರೀ ಡಿ.ಎಸ್.ಚಿದಾನಂದ ಮೂರ್ತಿ, ಅಧೀಕ್ಷಕ, ಇವರು ರೂ.1,000/- ಹಾಗೂ ಶ್ರೀ ಜಯಸಿಂಹ, ಜಿಲ್ಲಾ ವಿಮಾಧಿಕಾರಿ, ಅವರು ರೂ.4,000/- ಲಂಚ ಹಣವನ್ನು ಫಿರ್ಯಾದಿ ಶ್ರೀಮತಿ ಶಿವಮ್ಮನವರ ತಮ್ಮನಾದ ಶ್ರೀ ಎ.ಎಂ. ರಾಮಯ್ಯ ಮತ್ತು ನೆರಳು ಸಾಕ್ಷಿಯಾದ ಶ್ರೀ ಕೃಷ್ಣಪ್ಪರವರ ಸಮಕ್ಷಮ ಪಡೆಯುವಾಗ ಸಿಕ್ಕಿಬಿದ್ದಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳು ಶ್ರೀ ಡಿ.ಎಸ್. ಚಿದಾನಂದ ಮೂರ್ತಿಯವರ ಪ್ಯಾಂಟಿನ ಎಡಭಾಗದ ಜೇಬಿನಿಂದ 1,000/- ರೂ. ಮುಖಬೆಲೆಯ ಒಂದು ನೋಟನ್ನು [8BG 410904] ವಶಪಡಿಸಿಕೊಂಡಿರುತ್ತಾರೆ ಹಾಗೂ ಶ್ರೀ ಜಯಸಿಂಹರವರ ಶರ್ಟಿನ ಜೇಬಿನಿಂದ 1,000/- ಮುಖ ಬೆಲೆಯ ನಾಲ್ಕು ನೋಟುಗಳನ್ನು [0CD 247506, 0BM 829904, 2AM 794933, 8CE 955591] ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ. ಇಬ್ಬರು ಆರೋಪಿಗಳಿಂದ ವಶಪಡಿಸಿಕೊಳ್ಳಲಾದ 1,000/- ಮುಖ ಬೆಲೆಯ ಒಟ್ಟು ಐದು ನೋಟುಗಳ ಕ್ರಮ ಸಂಖ್ಯೆಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಕ್ರಮ ಸಂಖ್ಯೆಗಳಿಗೆ ತಾಳೆಯಾಗಿದೆ. ಮರಣಜನ್ಯ ಇತ್ಯರ್ಥಪಡಿಸುವ ಬಗ್ಗೆ ಫಿರ್ಯಾದುದಾರರಿಗೆ ಸಂಬಂಧಪಟ್ಟ ಕಡತ ದಿನಾಂಕ: 07.12.2010ರಂದು ಶ್ರೀ ಜಯಸಿಂಹರವರ ಮೇಜಿನ ಮೇಲಿತ್ತು. ಇಬ್ಬರೂ ಆರೋಪಿಗಳ ಬಲಗೈ ಮತ್ತು ಎಡಗೈಗಳನ್ನು, ಪ್ಯಾಂಟ್ ಮತ್ತು ಷರ್ಟು ಜೇಬುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದೆ. ಈ ಪರೀಕ್ಷೆಗಳು ರಾಸಾಯನಿಕ ಪರೀಕ್ಷಕರು ದಿನಾಂಕ:14-12-2010ರಂದು ನೀಡಿರುವ ಪರೀಕ್ಷಣಾ ವರದಿಯಲ್ಲಿಯೂ ದೃಢಪಟ್ಟಿದೆ. ಲಂಚ ಹಣಕ್ಕೆ ಬೇಡಿಕೆ ಸಲ್ಲಿಸಿರುವುದು ವಾಯ್ಸ್ ರೆಕಾರ್ಡ್‌ರ್‌ನಲ್ಲಿ ರೆಕಾರ್ಡ್ ಆಗಿದ್ದು, ಲಂಚದ ಹಣಕ್ಕೆ ಬೇಡಿಕೆ ಸಲ್ಲಿಸಿದ ಶ್ರೀ ಚಿದಾನಂದ ಮೂರ್ತಿಯವರ ಧ್ವನಿಯನ್ನು ಜಿಲ್ಲಾ ವಿಮಾಧಿಕಾರಿಯವರ ಕಛೇರಿಯಲ್ಲಿ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ವೀರರಾಜುರವರು ಗುರುತಿಸಿದ್ದು, ಶ್ರೀ ಜಯಸಿಂಹರವರ ಧ್ವನಿಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಅಲ್ಲದೇ, ಲಂಚದ ಹಣಕ್ಕೆ ಬೇಡಿಕೆ ಸಲ್ಲಿಸಿರುವುದು ಮತ್ತು ಸ್ವೀಕರಿಸಿರುವುದು ಸಾಕ್ಷಿಗಳಾದ ಶ್ರೀ ಸತೀಶ್ ಮತ್ತು ಶ್ರೀ ಕೃಷ್ಣಪ್ಪನವರುಗಳ ಹೇಳಿಕೆಗಳಿಂದ, ಆರೋಪಿತರು ಬೇಡಿಕೆ ಸಲ್ಲಿಸಿ ಲಂಚದ ಹಣವನ್ನು ತಮ್ಮ ಕೈಗಳಿಂದ ಪಡೆದಿರುವ ಆರೋಪವು ಮೇಲ್ನೋಟಕ್ಕೆ ದೃಢಪಟ್ಟಂತಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಭ್ರಷ್ಟಾಚಾರ ನಿರೋಧ ಅಧಿನಿಯಮ 1988ರ ಕಲಂ 7, 13 (1)(ಡಿ) ಸಹವಾಚ 13 (2)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಆದ್ದರಿಂದ ಶ್ರೀ ಜಯಸಿಂಹ, ಹಿಂದಿನ ಜಿಲ್ಲಾ ವಿಮಾಧಿಕಾರಿ, ರವರನ್ನು ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಕಲಂ 7, 13 (1)(ಡಿ) ಸಹವಾಚ ಕಲಂ 13 (2)ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಸೂಕ್ತವೆಂದು ಸರ್ಕಾರ ಮನಗಂಡಿದೆ.

ಸರ್ಕಾರವು ಸಹಾಯಕ ನಿರ್ದೇಶಕರು/ಜಿಲ್ಲಾ ವಿಮಾಧಿಕಾರಿಗಳನ್ನು ಕೆಲಸದಿಂದ ತೆಗೆದು ಹಾಕುವ ಅಧಿಕಾರ ಹೊಂದಿದೆ. ಶ್ರೀ ಜಯಸಿಂಹರವರು ದಿನಾಂಕ: 30-11-2011ರಂದು ಸೇವೆಯಿಂದ ವಯೋ ನಿವೃತ್ತಿಗೊಂಡಿರುವುದರಿಂದಲೂ ಮತ್ತು ಇವರು ಸೇವೆಯಲ್ಲಿದ್ದಾಗ ಭ್ರಷ್ಟಾಚಾರ ನಿರೋಧ ಅಧಿನಿಯಮ 1988ರ ಕಲಂ 7, 13 (1)(ಡಿ) ಸಹವಾಚ 13 (2)ರಡಿ ಎಸಗಿರುವ ಅಪರಾಧದ ಆರೋಪಕ್ಕಾಗಿ ಸದರಿ ಕಾಯ್ದೆಯ ಕಲಂ 19 (1)(ಸಿ)ರಡಿ ಅಭಿಯೋಜನೆಗೆ ಒಳಪಡಿಸಲು ಸಾಕಷ್ಟು ಆಧಾರಗಳು ಕಂಡುಬಂದಿರುವುದರಿಂದ ಈ ಮುಂದಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 12 ಕವಿಇ 2012, ಬೆಂಗಳೂರು, ದಿನಾಂಕ: 20.04.2012

ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಕಲಂ 19 (1)(ಸಿ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಜಯಸಿಂಹ, ನಿವೃತ್ತ ಜಿಲ್ಲಾ ವಿಮಾಧಿಕಾರಿ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರನ್ನು ಸದರಿ ಕಾಯ್ದೆಯ ಕಲಂ 7, 13 (1)(ಡಿ) ಸಹವಾಚ 13 (2)ರ ಅಡಿಯಲ್ಲಿ ಎಸಗಿದ ಅಪರಾಧದ ಆರೋಪಕ್ಕೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಸರ್ಕಾರ ಈ ಮೂಲಕ ಮಂಜೂರಾತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 19(1) ರನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ: 20.04.2012 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಲ್. ರಮೇಶ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು).

ಪಿ.ಆರ್. 1259

ಕಾರ್ಮಿಕಸಚಿವಾಲಯ

ವಿಷಯ:- ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಪ್ರೊಬೇಷನರಿ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಅಧಿಸೂಚನೆ ಸಂ: ಕಾಇ 09 ಕಾಬಾಸೇ 2009(2) ದಿನಾಂಕ: 27-06-2009.
2. ಸರ್ಕಾರದ ಅಧಿಸೂಚನೆ ಸಂ: ಕಾಇ 28 ಕಾಬಾಸೇ 2010, ದಿನಾಂಕ: 13-05-2010.
3. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರ ಪತ್ರ ಸಂ: ಈಎಸ್‌ಟಿ-2/ ಎಬಿಎಸ್/ಸಿಆರ್-34/11-12, ದಿನಾಂಕ 22.11.2011.

ಪ್ರಸ್ತಾವನೆ:

ಮೇಲೆ ಕ್ರ.ಸಂ.(1) ರಲ್ಲಿ ಓದಲಾದ ದಿನಾಂಕ: 27–06–2009 ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು 2007 ರ ನಿಯಮ 8(1) ಅಡಿಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಗೊಂಡ ಶ್ರೀಯುತರಾದ 1) ಎಸ್.ಆರ್. ಶ್ರೀನಿವಾಸ್ 2) ಕು.ಬಿ.ಕೆ.ಶ್ವೇತಾ ಮತ್ತು 3) ಟಿ.ರವಿ ಈ ಮೂರು ಜನ ಅಭ್ಯರ್ಥಿಗಳಿಗೆ ಬಾಯ್ಲರುಗಳ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಕಾತಿ ನೀಡಲಾಗಿದೆ. ಸದರಿ ಅಧಿಸೂಚನೆಯಲ್ಲಿ ಈ ಅಭ್ಯರ್ಥಿಗಳು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಬಾಯ್ಲರುಗಳ ಸಹಾಯಕ ನಿರ್ದೇಶಕರ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದು ಮತ್ತು ನಿಗಧಿಪಡಿಸಿದ ತರಬೇತಿ ಪಡೆಯಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ 3 ಜನ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಮೇಲೆ ಕ್ರ.ಸಂ.(2) ರಲ್ಲಿ ಓದಲಾದ ದಿನಾಂಕ: 13–05–2010 ರ ಸರ್ಕಾರದ ಅಧಿಸೂಚನೆಯಲ್ಲಿ ಈ ಮೂರು ಜನ ಪರೀಕ್ಷಾರ್ಥ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ನಿಗದಿಪಡಿಸಿದ ತರಬೇತಿಯನ್ನು ಪೂರ್ಣಗೊಳಿಸಿದ ಕಾರಣ ಅವರುಗಳಿಗೆ ಇಲಾಖೆಯಲ್ಲಿ ಖಾಲಿ ಇದ್ದ ಜಾಗಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿತ್ತು.

2. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರು ಮೇಲೆ ಕ್ರ.ಸಂ.3 ರಲ್ಲಿ ಓದಲಾದ ಅವರ ದಿನಾಂಕ: 22–11–2011 ರ ಪತ್ರದಲ್ಲಿ ಸದರಿ 03 ಜನ ಪರೀಕ್ಷಾರ್ಥ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ಜುಲೈ 2011 ಕ್ಕೆ 2 ವರ್ಷಗಳ ಸೇವೆಯನ್ನು ಪೂರೈಸಿದ ಕಾರಣ ಹಾಗೂ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಕಾರಣ ಮತ್ತು ನಿಗದಿ ಪಡಿಸಿದ ತರಬೇತಿಯನ್ನು ಪೂರೈಸಿದ ಕಾರಣ, ಅವರ ಹಿಂದಿನ 2 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾಗಳಿಲ್ಲದ ಕಾರಣ, ಕೆಲಸ ಕಾರ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ನಡೆಸಿಕೊಂಡು ಹೋಗುತ್ತಿರುವ ಕಾರಣ, ಮತ್ತು ಯಾರ ವಿರುದ್ಧವೂ ಇಲಾಖಾ ವಿಚಾರಣೆಗಳಾಗಲೀ ಅಥವಾ ಕ್ರಿಮಿನಲ್ ಪ್ರೊಸೀಡಿಂಗ್ಸ್‌ಗಳಾಗಲೀ ಬಾಕಿ ಇಲ್ಲದ ಕಾರಣ ಮತ್ತು ಹೂಡಲು ಉದ್ದೇಶಿಸಿಲ್ಲದ ಕಾರಣ ಮತ್ತು ಕಾಲಕಾಲಕ್ಕೆ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸುತ್ತಿರುವ ಕಾರಣ ಅವರುಗಳು ಪ್ರೊಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಣೆ ಹೊರಡಿಸಿ ಸೇವೆಯಲ್ಲಿ ಮುಂದುವರೆಸಬೇಕೆಂದು ಕೋರಿರುತ್ತಾರೆ. ಸದರಿ ಅಧಿಕಾರಿಗಳ 2009–10 ಮತ್ತು 2010–11 ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರು ಮೇಲೆ ಹೇಳಿದ 03 ಜನ ಪರೀಕ್ಷಾರ್ಥ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯ್ತಿ ಸೇರಿ) ಉತ್ತೀರ್ಣರಾಗಿರುವುದಾಗಿ ಹಾಗೂ 2 ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿ ತೃಪ್ತಿಕರವಾಗಿ ಸೇವೆ ಸಲ್ಲಿಸಿರುತ್ತಾರೆಂದು ಶಿಫಾರಸ್ಸು ಮಾಡಿರುವ ಕಾರಣ ಕರ್ನಾಟಕ ಸಿವಿಲ್ ಸೇವಾ (ಖಾಯಂಪೂರ್ವ ಅವಧಿ ನಿಯಮಾವಳಿ) 1977 ರ ನಿಯಮ 5 ರನ್ವಯ ಈ ಕೆಳಕಂಡ 03 ಜನ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ತೃಪ್ತಿಕರವಾಗಿ ಪರೀವಿಕ್ಷಣಾ ಅವಧಿಯನ್ನು ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಕಾಇ 70 ಕಾಬಾಸೇ 2011(2), ಬೆಂಗಳೂರು, ದಿನಾಂಕ:18.04.2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಈ ಕೆಳಕಂಡ 03 ಜನ ಪರೀಕ್ಷಾರ್ಥ ಬಾಯ್ಲರುಗಳ ಸಹಾಯಕ ನಿರ್ದೇಶಕರುಗಳು ಕರ್ನಾಟಕ ಸಿವಿಲ್ ಸೇವಾ (ಖಾಯಂಪೂರ್ವ ಅವಧಿ ನಿಯಮಾವಳಿ) 1977 ರ ನಿಯಮ 5 ರನ್ವಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

ಕ್ರ.ಸಂ.	ಪರಿವೀಕ್ಷಣಾ ಕಾರ್ಮಿಕ ಅಧಿಕಾರಿಯ ಹೆಸರು	ಕರ್ತವ್ಯಕ್ಕೆ ಹಾಜರಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಶ್ರೀ.ಎಸ್.ಆರ್.ಶ್ರೀನಿವಾಸ್	02–07–2009	01–07–2011
2	ಕು.ಬಿ.ಕೆ.ಶ್ವೇತ	09–07–2009	08–07–2011
3	ಶ್ರೀ.ಟಿ.ರವಿ	03–07–2009	02–07–2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಶಿವರಾಮ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ

(ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್.1221